ಕನ್ನಡ ಭಾರತಿ

೧



ರಾಷ್ಟ್ರಗೀತೆ

ಜನಗಣ ಮನ ಅಧಿನಾಯಕ ಜಯ ಹೇ ।
ಭಾರತ ಭಾಗ್ಯ ವಿಧಾತಾ ॥
ಪಂಜಾಬ ಸಿಂಧು ಗುಜರಾತ ಮರಾಠಾ ।
ದ್ರಾವಿಡ ಉತ್ಕಲ ವಂಗಾ ॥
ವಿಂಧ್ಯ ಹಿಮಾಚಲ ಯಮುನಾ ಗಂಗಾ ।
ಉಚ್ಛಲ ಜಲಧಿ ತರಂಗಾ ॥
ತವ ಶುಭ ನಾಮೇ ಜಾಗೇ ।
ತವ ಶುಭ ಆಶಿಷ ಮಾಗೇ ।
ಗಾಹೇ ತವ ಜಯಗಾಥಾ ॥
ಜನಗಣ ಮಂಗಳದಾಯಕ ಜಯ ಹೇ ।
ಭಾರತ ಭಾಗ್ಯ ವಿಧಾತಾ ॥
ಜಯ ಹೇ ಜಯ ಹೇ ಜಯ ಹೇ ।
ಜಯ ಜಯ ಜಯ ಜಯ ಹೇ ॥



ಕರ್ನಾಟಕ ಸರ್ಕಾರ

ಕನ್ನಡ ಭಾರತಿ — ೨

ಎರಡನೆಯ ತರಗತಿ

ಉಪ ನಿರ್ದೇಶಕರು
ಸರ್ಕಾರಿ ಪಠ್ಯಪುಸ್ತಕ ಮುದ್ರಣಾಲಯ
ಮೈಸೂರು

ಈ ಪುಸ್ತಕವನ್ನು ಕರ್ನಾಟಕ ಸರ್ಕಾರದ ಪಠ್ಯಪುಸ್ತಕ ನಿರ್ದೇಶನಾಲಯವು (ಬೆಂಗಳೂರು) ಭಾರತ ಸರ್ಕಾರದ ಭಾರತೀಯ ಭಾಷೆಗಳ ಕೇಂದ್ರ ಸಂಸ್ಥೆಯ (ಮೈಸೂರು) ಸಹಯೋಗದೊಂದಿಗೆ ಸಿದ್ಧಪಡಿಸಿದೆ.

ಪಠ್ಯಪುಸ್ತಕ ರಚನಾ ಸಮಿತಿ

ಶ್ರೀ ಎಸ್.ಎಸ್. ಯದುರಾಜನ್
ಭಾರತೀಯ ಭಾಷೆಗಳ ಕೇಂದ್ರ ಸಂಸ್ಥೆ,
ಮೈಸೂರು.

ಡಾ॥ ಭ. ಮಲ್ಲಿಕಾರ್ಜುನ
ಭಾರತೀಯ ಭಾಷೆಗಳ ಕೇಂದ್ರ ಸಂಸ್ಥೆ,
ಮೈಸೂರು.

ಶ್ರೀ ಶಂ.ಗು. ಬಿರಾದಾರ
ಕಮಲಕುಂಜ
ಶಾಸ್ತ್ರಿನಗರ, ತೊರವಿ ರಸ್ತೆ
ಬಿಜಾಪುರ.

ಶ್ರೀ ಬಿ. ಶೇಖರಪ್ಪ ಹುಲಿಗಿರಿ
ಸಾರ್ವಜನಿಕ ಶಿಕ್ಷಣ ಇಲಾಖೆ,
ರಾಯಚೂರು.

ಶ್ರೀ ಉಳುವೀಶ ಹುಲೆಪ್ಪನವರಮಠ
ಅಂಚೆ: ಮುರಗೋಡ,
ಬೆಳಗಾವಿ ಜಿಲ್ಲೆ.

ಶ್ರೀ ಜಿ.ಎಫ್. ಮಣ್ಣಮ್ಮನವರ
ಸರ್ಕಾರಿ ಹಿ.ಪ್ರಾ.ಶಾಲೆ, ನಂ. ೩
ರಾಣೆಬೆನ್ನೂರು, ಧಾರವಾಡ ಜಿಲ್ಲೆ.

ಶ್ರೀಮತಿ ಎನ್.ಎಸ್. ಮನೋರಮ
ಮಲ್ಲೇಶ್ವರಂ ಲೇಡೀಸ್ ಅಸೋಸಿಯೇಷನ್
ಪ್ರಾಥಮಿಕ ಶಾಲೆ, ಮಲ್ಲೇಶ್ವರಂ,
ಬೆಂಗಳೂರು.

ಯೋಜನಾ ಸಮನ್ವಯಾಧಿಕಾರಿ

ಶ್ರೀಮತಿ ಬಿ. ಶ್ಯಾಮಲಕುಮಾರಿ
ಭಾರತೀಯ ಭಾಷೆಗಳ ಕೇಂದ್ರ ಸಂಸ್ಥೆ
ಮೈಸೂರು.

ಮುನ್ನುಡಿ

ನಮ್ಮ ರಾಜ್ಯವು ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಸಕ್ರಿಯವಾಗಿ ಜಾರಿಗೊಳಿಸುವ ದಿಸೆಯಲ್ಲಿ ಮಾಡಿರುವ ಪ್ರಾಮಾಣಿಕ ಪ್ರಯತ್ನದ ಫಲಕೃತಿಯೇ ಈ ಪುಸ್ತಕ. ಭಾಷಾಶಿಕ್ಷಣದಲ್ಲಿ ಒಂದು ಮತ್ತು ಎರಡನೆಯ ತರಗತಿಗಳಿಗೆ ವಿಶಿಷ್ಟ ಸ್ಥಾನವಿದೆ. ಆದುದರಿಂದ ಇದರ ರಚನೆ ಹಾಗೂ ಬೋಧನಾ ಘಟಕಗಳಲ್ಲಿ ವಿಶೇಷತೆಯಿದೆ.

ಭಾಷಾ ಕಲಿಕೆಯ ಮೊದಲನೆಯ ಘಟ್ಟದಲ್ಲಿ ಬಳಸುವ ಈ ಪಾಠಗಳನ್ನು ಮಕ್ಕಳಿಗೆ ಕಲಿಕೆಯಲ್ಲಿ ಆಸಕ್ತಿಯನ್ನು ಹುಟ್ಟಿಸುವಂತೆಯೂ, ಭಾಷಾವೈಜ್ಞಾನಿಕವಾಗಿ ಕಲಿಕೆಯು ಸುಗಮವಾಗುವಂತೆಯೂ ರಚಿಸಿದೆ. ಇಲ್ಲಿ ಭಾಷಾಭ್ಯಾಸವು ಸಾಂಪ್ರದಾಯಿಕ ಭಾಷಾಬೋಧನಾ ಕ್ರಮದಿಂದ ಭಿನ್ನವಾಗಿದ್ದು ವೈಜ್ಞಾನಿಕ ಮತ್ತು ಸಂಶೋಧನಾತ್ಮಕ ಹಿನ್ನೆಲೆಯನ್ನು ಪಡೆದಿದೆ. ಪಠ್ಯಪುಸ್ತಕ ರಚನೆಯ ಈ ಹಿನ್ನೆಲೆ, ಅಧ್ಯಾಪಕರಿಗಾಗಿ ಇರುವ ಮೊದಲ ಮಾತು ಮತ್ತು ಪ್ರತಿ ಪಾಠದ ಕೊನೆಯಲ್ಲಿ ಇರುವ ಬೋಧನಾ ಸೂಚನೆಗಳನ್ನು ಅನುಸರಿಸಿ ಉಪಾಧ್ಯಾಯರು ಅಧ್ಯಾಪನ ನಡೆಸಬೇಕು. ಇದನ್ನು ಪೋಷಕರೂ ಬಳಸಿಕೊಳ್ಳಬಹುದು.

ಈ ಪುಸ್ತಕವನ್ನು ಮೈಸೂರಿನ ಭಾರತೀಯ ಭಾಷೆಗಳ ಕೇಂದ್ರ ಸಂಸ್ಥೆಯ ಸಹಯೋಗದೊಂದಿಗೆ ಪಠ್ಯಪುಸ್ತಕ ನಿರ್ದೇಶನಾಲಯವು ಮೈಸೂರಿನಲ್ಲಿ ನಡೆಸಿದ ಕಮ್ಮಟದಲ್ಲಿ ರಚಿಸಿದೆ. ಈ ಸಂಸ್ಥೆಯ ನೆರವು ಮತ್ತು ರಚನಾ ನೇತೃತ್ವಕ್ಕೆ ಕೃತಜ್ಞತೆಗಳು.

ಹಾಗೂ ಈ ಪುಸ್ತಕದ ತಯಾರಿಕೆಯಲ್ಲಿ ನೆರವಾದ ಶ್ರೀ ಇ. ಕೃಷ್ಣ ನಾರಾಯಣ, ನಿರ್ದೇಶಕರು, ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಾಶನ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು, ಶ್ರೀ ಎಚ್. ಎನ್. ರಾಜಶೇಖರ್, ಕಲರ್‌ಕ್ರಾಫ್ಟ್, 5ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು (ವರ್ಣಚಿತ್ರ ತಯಾರಿಕೆ), ಶ್ರೀ ಸಿ. ನಾಗರಾಜ್, ರಾಜಾ ಪವರ್ ಪ್ರೆಸ್, ಬೆಂಗಳೂರು (ವರ್ಣಚಿತ್ರ ತಯಾರಿಕೆಯಲ್ಲಿ ಸಲಹೆ ಮತ್ತು ವಿನ್ಯಾಸ), ಮತ್ತು ಶ್ರೀ ಭದ್ರಗಿರಿ ಸರ್ವೋತ್ತಮ ಪೈ, ಶ್ರೀ ಸುಧೀಂದ್ರ ಮುದ್ರಣಾಲಯ, ಬೆಂಗಳೂರು (ಛಾಯಾ ಅಕ್ಷರ ಜೋಡಣೆ ಮತ್ತು ಪುಟ ನಿರ್ವಹಣೆ) ಇವರಿಗೂ ನಮ್ಮ ಕೃತಜ್ಞತೆಗಳು.

ಈ ಪುಸ್ತಕವನ್ನು ಕರ್ನಾಟಕ ಸರ್ಕಾರದ ಪಠ್ಯಪುಸ್ತಕ ನಿರ್ದೇಶನಾಲಯ (ಬೆಂಗಳೂರು), ಭಾರತ ಸರ್ಕಾರದ ಭಾರತೀಯ ಭಾಷೆಗಳ ಕೇಂದ್ರ ಸಂಸ್ಥೆ (ಮೈಸೂರು), ಸರ್ಕಾರಿ ಪಠ್ಯಪುಸ್ತಕ ಮುದ್ರಣಾಲಯ (ಮೈಸೂರು) ಮತ್ತು ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಾಶನ ನಿರ್ದೇಶನಾಲಯ (ಬೆಂಗಳೂರು) ಇವರುಗಳು ಸಿದ್ಧಪಡಿಸಿದ್ದಾರೆ.

ಮಕ್ಕಳಲ್ಲಿ ಉತ್ತಮ ಭಾಷಾಭ್ಯಾಸಂಗಕ್ಕೆ ಈ ಪ್ರಯತ್ನವು ಅನುವು ಮಾಡಿಕೊಡಲೆಂದು ಹಾರೈಸುತ್ತೇನೆ.

ಕೆ. ಗುರುರಾವ್
ನಿರ್ದೇಶಕರು
ಪಠ್ಯಪುಸ್ತಕ ಇಲಾಖೆ
ಬೆಂಗಳೂರು ೨೦.

ಪರಿವಿಡಿ

		ಪುಟ
ಅಧ್ಯಾಪಕರಿಗೆ ಮೊದಲ ಮಾತು		೭
ಚಿತ್ರಪುಟಗಳು	ಅ. ಕುಶಲಕರ್ಮಿಗಳು	೧೩
	ಆ. ವೃತ್ತಿನಿರತರು	೧೪
	ಇ. ಐತಿಹಾಸಿಕ ಸ್ಥಳಗಳು	೧೫
	ಈ. ಪರಿಸರ	೧೬
	ಉ. ಬೆಳೆಗಳು	೧೭
	ಊ. ಗಿಡಮರಗಳು	೧೮
	ಋ. ಚಿತ್ರಕಥೆ-೧ ಸಿಂಹ ಮತ್ತು ಇಲಿ	೧೯
	ೠ. ಚಿತ್ರಕಥೆ-೨ ತೆನಾಲಿರಾಮನ ಕಥೆ	೨೦

೧. ನಮ್ಮೂರು	೨೧
೨. ನರಿಯ ಉಪಾಯ	೨೪
೩. ಬಣ್ಣದ ಬಗರಿ (ಪದ್ಯ)	೨೭
೪. ಅಜ್ಜಿಯ ನುಡಿ	೨೯
೫. ಊಟದ ಸ್ಪರ್ಧೆ	೩೨
೬. ಮುದ್ದಿನ ಕರು (ಪದ್ಯ)	೩೫
೭. ಕಪ್ಪೆಯೋಟ	೩೮
೮. ವಾಸನೆಯ ಬೆಲೆ	೪೧
೯. ತೆಂಗು (ಪದ್ಯ)	೪೪
೧೦. ನಮ್ಮೂರ ಸಂತೆ	೪೬
೧೧. ಸೋಮ ಭೀಮ	೫೦
೧೨. ಆಮೆ (ಪದ್ಯ)	೫೩

		ಪುಟ
೧೩.	ಅವಸರವೇ ಅಪಾಯ	೫೫
೧೪.	ಹಣತೆ	೫೮
೧೫.	ರೈತನಾಗುವೆ (ಪದ್ಯ)	೬೨
೧೬.	ಮಕ್ಕಳ ದಿನ	೬೪
೧೭.	ಬೆಕ್ಕಣ್ಣನ ಪ್ರವಾಸ	೬೭
೧೮.	ಸುರಿಮಳೆ ಗುಟ್ಟು (ಪದ್ಯ)	೭೧
೧೯.	ಕೋಳಿ	೭೫
೨೦.	ಕಡಲು	೭೮
೨೧.	ಇರುವೆ (ಪದ್ಯ)	೮೨
೨೨.	ಮೈಸೂರು ಹುಲಿ	೮೬
೨೩.	ಸಹಬಾಳ್ವೆ	೯೦
೨೪.	ನೆರಳು (ಪದ್ಯ)	೯೫
೨೫.	ಕೈ ಕೆಸರಾದರೆ ಬಾಯಿ ಮೊಸರು	೯೮
೨೬.	ನಮ್ಮ ನಾಡು	೧೦೨
೨೭.	ಕನ್ನಡ ನಾಡು (ಪದ್ಯ)	೧೦೭
೨೮.	ಜೈ ಜವಾನ್ ಜೈ ಕಿಸಾನ್	೧೧೦
೨೯.	ಆಂಡ್ರೋಕ್ಲಿಸ್ ಮತ್ತು ಸಿಂಹ	೧೧೪
೩೦.	ಐಕ್ಯಗಾನ (ಪದ್ಯ)	೧೧೯
	ಭಾಷಾ ಆಟಗಳು	೧೨೨
	ಪದಗಳ ಅಕಾರಾದಿ	೧೩೦
	ಒತ್ತಕ್ಷರಗಳ ಪಟ್ಟಿ	೧೩೬

ಅಧ್ಯಾಪಕರಿಗೆ ಮೊದಲ ಮಾತು

ರಾಷ್ಟ್ರದಾದ್ಯಂತ ಹೊಸ ಶಿಕ್ಷಣ ನೀತಿಯು ೧೯೮೬ರಿಂದ ಜಾರಿಗೆ ಬಂದಿದೆ. ಈ ಹಿನ್ನೆಲೆಯಲ್ಲಿ ಕರ್ನಾಟಕ ಸರ್ಕಾರವೂ ಸಹ ಶಿಕ್ಷಣ ಪಠ್ಯಕ್ರಮವನ್ನು ಪರಿಷ್ಕರಿಸಲು ಸಮಿತಿಯೊಂದನ್ನು ರಚಿಸಿತು. ಈ ಸಮಿತಿಯು ಸಿದ್ಧಪಡಿಸಿದ ಪರಿಷ್ಕೃತ ಪಠ್ಯಕ್ರಮಕ್ಕೆ ಅನುಗುಣವಾಗಿ, ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯ ಮಾರ್ಗದರ್ಶನಗಳನ್ನು ಅಳವಡಿಸಿ ಕನ್ನಡ ಪಠ್ಯಪುಸ್ತಕಗಳನ್ನು ರಾಜ್ಯ ಸರ್ಕಾರದ ಪಠ್ಯಪುಸ್ತಕ ನಿರ್ದೇಶನಾಲಯವು ಮೈಸೂರಿನ ಭಾರತೀಯ ಭಾಷೆಗಳ ಕೇಂದ್ರ ಸಂಸ್ಥೆಯ ಸಹಯೋಗದೊಂದಿಗೆ ರಚಿಸುತ್ತಿದೆ. ಇವನ್ನು ಮಾತೃಭಾಷೆಯಾಗಿ ಕನ್ನಡ ಕಲಿಯುವ ಮಕ್ಕಳ ಭಾಷಾ ಅವಶ್ಯಕತೆಗಳು, ಪ್ರಚಲಿತ ಶಿಕ್ಷಣದ ಸಿದ್ಧಾಂತಗಳು, ಮಕ್ಕಳ ಮನೋವಿಕಾಸ, ಭಾಷಾ ಬೋಧನೆ ಹಾಗೂ ಕಲಿಕೆಯ ತತ್ವಗಳ ಆಧಾರದ ಮೇಲೆ ಸಿದ್ಧಪಡಿಸಲಾಗಿದೆ.

ಹೀಗೆ ಸಿದ್ಧಪಡಿಸಿದ ಕನ್ನಡ ಭಾರತಿ ೧ ನ್ನು ಪ್ರಾಥಮಿಕ ಶಾಲೆಯ ಒಂದನೆಯ ತರಗತಿಯ ವಿದ್ಯಾರ್ಥಿಗಳಿಗೆ ಕನ್ನಡ ಕಲಿಸಲು ಈಗಾಗಲೇ ಬಳಸಲಾಗುತ್ತಿದೆ. ಕನ್ನಡ ಭಾರತಿ ೧ ರ ಕಲಿಕೆಯಿಂದಾಗಿ ಮಕ್ಕಳು ಆಸಕ್ತಿಯಿಂದ ಆಲಿಸಿ ಮುಖ್ಯ ವಿಚಾರವನ್ನು ಗ್ರಹಿಸಲು, ಕತೆ ಪದ್ಯಗಳನ್ನು ಕೇಳಿ ಆನಂದಿಸಲು, ಸಮವಯಸ್ಕರೊಡನೆ, ಹಿರಿಯರೊಡನೆ ಮಾತನಾಡಲು, ಚಿಕ್ಕಪುಟ್ಟ ಪ್ರಶ್ನೆಗಳಿಗೆ ಉತ್ತರಿಸಲು, ಕತೆ ಕವನಗಳನ್ನು ಹೇಳಲು, ಸುತ್ತಮುತ್ತಲಿನ ಘಟನೆಗಳನ್ನು ಸ್ಪಷ್ಟವಾಗಿ ವಿವರಿಸಲು, ಅಕ್ಷರಗಳು, ಗುಣಿತಾಕ್ಷರಗಳು ಮತ್ತು ಸಂಯುಕ್ತಾಕ್ಷರಗಳನ್ನು ಒಂಟಿಯಾಗಿ, ಪದಗಳು ಮತ್ತು ವಾಕ್ಯಗಳ ಸಂದರ್ಭದಲ್ಲಿ ತಪ್ಪಿಲ್ಲದೆ ಓದಲು, ತಾನು ಓದಲು ಕಲಿತ ಪದಗಳು, ವಾಕ್ಯಗಳು ಮುಂತಾದವನ್ನು ಪ್ರತಿ ಮಾಡಲು, ನೆನಪಿನ ಸಹಾಯದಿಂದ ಹಾಗೂ ಸ್ವತಂತ್ರವಾಗಿ ಸ್ಪಷ್ಟವಾಗಿ ತಪ್ಪಿಲ್ಲದೆ ಕನ್ನಡದಲ್ಲಿ ಬರೆಯಲು ಸಮರ್ಥರಾಗಿರುತ್ತಾರೆ. ಕನ್ನಡ ಭಾರತಿ ೨ ನ್ನು ಬಳಸುವ ಮುನ್ನ ಒಂದನೆಯ ತರಗತಿಯ ಪಠ್ಯಪುಸ್ತಕವನ್ನು ಅಧ್ಯಾಪಕರು ಓದಿಕೊಳ್ಳುವುದು ಒಳ್ಳೆಯದು.

ಕನ್ನಡ ಭಾರತಿ ೨ ರ ಕಲಿಕೆಯಿಂದಾಗಿ ಮಕ್ಕಳು –

- ಸಾವಧಾನವಾಗಿ, ಆಸಕ್ತಿಯಿಂದ ಆಲಿಸಿ ಮುಖ್ಯ ಅಂಶಗಳನ್ನು ಗ್ರಹಿಸಲು,
- ಪ್ರಬಂಧ, ಕಥೆ ಮತ್ತು ಪದ್ಯಗಳನ್ನು ಕೇಳಿ ಅರ್ಥಮಾಡಿಕೊಂಡು ಆನಂದಿಸಲು,
- ಸ್ಪಷ್ಟವಾದ ಉಚ್ಚಾರಣೆಯೊಂದಿಗೆ ನೋಡಿದ, ಕೇಳಿದ ಸಂಗತಿಗಳನ್ನೂ, ಮನಸ್ಸಿನ ಭಾವನೆಗಳನ್ನೂ, ಸ್ವಂತ ಮಾತುಗಳಲ್ಲಿ ತಪ್ಪಿಲ್ಲದೆ ವಿವರಿಸಲು,
- ಸಮವಯಸ್ಕರು ಮತ್ತು ಹಿರಿಯರನ್ನು ವಿಷಯಗ್ರಹಣಕ್ಕಾಗಿ ಪ್ರಶ್ನೆಗಳನ್ನು ಕೇಳಲು,
- ಸಂದರ್ಭಾನುಸಾರ ಪ್ರಶ್ನೆಗಳಿಗೆ ಉತ್ತರಿಸಲು,
- ಮನೆ ಮತ್ತು ಶಾಲೆಯ ಪರಿಸರದಲ್ಲಿ ಪರಿಚಿತವಾದ ವಿಷಯಗಳ ಬಗ್ಗೆ ಚಿಕ್ಕ ಚಿಕ್ಕ ವಾಕ್ಯಗಳಲ್ಲಿ ತಿಳಿಸಲು,
- ಸರಳವಾದ ಗೀತೆಗಳನ್ನು ಪ್ರಾಸಬದ್ಧವಾಗಿ ಹಾಡಲು, ಸಣ್ಣ ಕಥೆಗಳನ್ನು ಹೇಳಲು,

- ಸ್ಪಷ್ಟವಾದ ಉಚ್ಚಾರಣೆಯೊಂದಿಗೆ ಸರಳ ಪದಗಳು, ಗುಣಿತಾಕ್ಷರಗಳ ಪದಗಳು, ಸರಳ ವಾಕ್ಯಗಳು ಇತ್ಯಾದಿಗಳನ್ನು ಕೂಡಿಸಿ ಓದಿ ಅರ್ಥಮಾಡಿಕೊಳ್ಳಲು,
- ಪಠ್ಯಪುಸ್ತಕದ ಪಾಠಗಳನ್ನು ಓದಿ ಅರ್ಥಮಾಡಿಕೊಳ್ಳಲು,
- ಪಠ್ಯಪುಸ್ತಕದ ಹೊರಗಿನ ಪುಸ್ತಕಗಳ, ಪತ್ರಿಕೆಗಳ ಶಿರೋವಾಕ್ಯಗಳನ್ನು ಅರ್ಥಪೂರ್ಣವಾಗಿ ಓದಲು,
- ಪದಗಳನ್ನು ಬಿಡಿಬಿಡಿಯಾಗಿ, ಅಂದವಾಗಿ, ಸ್ಪಷ್ಟವಾಗಿ, ಕ್ರಮಬದ್ಧವಾಗಿ, ತಪ್ಪಿಲ್ಲದೆ, ಸಮಾನಾಂತರವಾಗಿ ಬರೆಯಲು, ಮತ್ತು
- ನೋಡಿದ, ಕೇಳಿದ ಘಟನೆಗಳನ್ನು ಕಥೆಗಳನ್ನು ಸರಳವಾದ ಚಿಕ್ಕ ಚಿಕ್ಕ ವಾಕ್ಯಗಳಲ್ಲಿ ಬರೆಯಲು

ಸಮರ್ಥರಾಗುತ್ತಾರೆ.

ಭಾಷೆ ಮಗುವಿನ ಜೀವನದ ಅವಿಭಾಜ್ಯ ಅಂಗ. ಈ ಮಹತ್ವದ ಅಂಶವನ್ನು ಗಮನಿಸಿ ಅದರ ಸರ್ವತೋಮುಖ ಬೆಳವಣಿಗೆಗೆ ಅನುಕೂಲವಾಗುವಂತೆ ಗಣಿತ, ಸಮಾಜೋಪಯೋಗಿ ಉತ್ಪಾದಕ ಕಾರ್ಯ, ಆರೋಗ್ಯ ಮತ್ತು ದೈಹಿಕ ಶಿಕ್ಷಣ, ಕಲೆ ಮತ್ತು ಸೃಜನಶೀಲ ಅಭಿವ್ಯಕ್ತಿ, ಮೌಲ್ಯಶಿಕ್ಷಣ ಮುಂತಾದವನ್ನು ಕನ್ನಡ ಭಾಷೆಯ ಕಲಿಕೆಯೊಟ್ಟಿಗೆ ಪರೋಕ್ಷವಾಗಿ ಪರಿಚಯ ಮಾಡಿಕೊಳ್ಳಲು ಸಾಧ್ಯವಾಗುವಂತೆ ಈ ಪುಸ್ತಕದ ಪಾಠಗಳು ರಚಿತವಾಗಿವೆ.

ಪ್ರಾಥಮಿಕ ಹಂತದ ಒಂದರಿಂದ ನಾಲ್ಕನೆಯ ತರಗತಿಯವರೆಗೆ ಪ್ರತಿ ತರಗತಿಗೂ ಕನ್ನಡ ಭಾಷಾ ಶಿಕ್ಷಣಕ್ಕೆ ಒಟ್ಟು ೪೫೦ ಬೋಧನಾ ಅವಧಿಗಳು ಲಭ್ಯವಿದ್ದು ಬೇರೆ ಬೇರೆ ಕೌಶಲಗಳಿಗೆ ಗೊತ್ತುಪಡಿಸಿರುವ ಅವಧಿಗಳು ಹೀಗಿವೆ.

ಆಲಿಸುವುದು	೧೧೦
ಮಾತನಾಡುವುದು	೧೧೦
ಓದು	೧೨೫
ಬರಹ	೧೦೫

ಈ ಪುಸ್ತಕದಲ್ಲಿ ನಾಲ್ಕು ಭಾಗಗಳಿವೆ. ಮೊದಲನೆಯ ಭಾಗದಲ್ಲಿ ಎಂಟು ಚಿತ್ರಪುಟಗಳಿದ್ದು ಅವುಗಳಲ್ಲಿ ಎರಡು ಚಿತ್ರಕಥೆಗಳೂ ಸೇರಿವೆ. ಮಕ್ಕಳಲ್ಲಿ ಮಾತನಾಡುವ ಕೌಶಲ, ಸಂಭಾಷಣಾ ಕೌಶಲ ಮುಂತಾದವನ್ನು ಬೆಳೆಸಲು ಮತ್ತು ಕುಶಲಕರ್ಮಿಗಳು, ವೃತ್ತಿನಿರತರು, ಐತಿಹಾಸಿಕ ಸ್ಥಳಗಳು, ಪರಿಸರ, ಬೆಳೆಗಳು, ಗಿಡಮರಗಳು ಮುಂತಾದುವುಗಳ ಬಗ್ಗೆ ಮಾತನಾಡಲು ಬೇಕಾಗುವ ಪದಸಂಗ್ರಹವನ್ನು ಮಕ್ಕಳಿಗೆ ಒದಗಿಸಿ ಅವರಲ್ಲಿ ಮಾತುಗಾರಿಕೆಯ ಕೌಶಲ ಬೆಳೆಯುವಂತೆ ಮಾಡಲು ಈ ಚಿತ್ರಪುಟಗಳನ್ನು ಬಳಸಬಹುದಾಗಿದೆ.

ಒಂದನೆಯ ತರಗತಿಯಲ್ಲಿ ಮಕ್ಕಳು ತರಗತಿಯ ಸನ್ನಿವೇಶಕ್ಕೆ ಹೊಂದಿಕೊಳ್ಳುವ ಕ್ರಿಯೆಯಲ್ಲಿ ತೊಡಗಿದ್ದರೆ ಎರಡನೆಯ ತರಗತಿಯಲ್ಲಿ ಅವರ ಅರಿವಿನ ಪರಿಸರ ವಿಸ್ತಾರಗೊಂಡಿರುವುದರಿಂದ

ತಾವು ಕೇಳುವ, ನೋಡುವ ವಿಷಯ ಹಾಗೂ ವಸ್ತುಗಳ ಬಗ್ಗೆ ಇನ್ನೂ ಹೆಚ್ಚು ತಿಳಿದುಕೊಳ್ಳಲು ಉತ್ಸುಕರಾಗಿರುತ್ತಾರೆ. ಇದಕ್ಕೆ ಪೂರಕವಾದಂತಹ ಕೆಲವು ಚಟುವಟಿಕೆಗಳನ್ನು ಹಮ್ಮಿಕೊಳ್ಳಲೂ ಈ ಚಿತ್ರಪುಟಗಳು ಸಹಕಾರಿಯಾಗುತ್ತವೆ. ತನ್ನ ತರಗತಿಯ ಹೊರಗಿನ ಪರಿಸರದ ವಿಷಯಗಳ ಬಗ್ಗೆಯೂ ನಿರ್ಭಯವಾಗಿ, ಸುಲಲಿತವಾಗಿ ತರಗತಿಯ ಒಳಗೆ ಮಾತನಾಡುವುದನ್ನು ಕಲಿಸಲೂ ಈ ಚಿತ್ರಪುಟಗಳು ಸಹಕಾರಿಯಾಗುವುವು. ಈ ಎಂಟು ಪುಟಗಳ ವಿವರಗಳು ಹೀಗಿವೆ.

ಪುಟ ೧ ಕುಶಲಕರ್ಮಿಗಳು

೧. ರೈತ, ಗಾರೆ ಕೆಲಸದವನು, ನೇಕಾರ
೨. ಕಮ್ಮಾರ, ಬಡಗಿ, ಶಿಲ್ಪಿ
೩. ಕುಂಬಾರ, ಬುಟ್ಟಿ ಹೆಣೆಯುವವನು, ಮೀನುಗಾರ

ಪುಟ ೨ ವೃತ್ತಿನಿರತರು

೧. ಉಪಾಧ್ಯಾಯ, ವೈದ್ಯ, ದರ್ಜಿ
೨. ಸೈನಿಕ, ಪೋಲೀಸ್, ಅಂಚೆಯವನು
೩. ಕೆಲಸಗಾರ, ಕೂಲಿ, ಚಾಲಕ

ಪುಟ ೩ ಐತಿಹಾಸಿಕ ಸ್ಥಳಗಳು

೧. ಗೋಳಗುಮ್ಮಟ, ಹಂಪಿಯ ಕಲ್ಲಿನ ರಥ, ಬಾದಾಮಿಯ ಗುಹೆ
೨. ಕೋಟೆ, ಜೋಗ್ ಜಲಪಾತ, ತುಂಗಭದ್ರಾ ಅಣೆಕಟ್ಟು
೩. ಗೊಮ್ಮಟೇಶ್ವರ, ಸೋಮನಾಥಪುರದ ದೇವಾಲಯ, ಗುಂಬಜ್

ಪುಟ ೪ ಪರಿಸರ

೧. ವಿಧಾನಸೌಧ, ಲಾಲ್‌ಬಾಗ್, ಎಚ್.ಎ.ಎಲ್. ಕಾರ್ಖಾನೆ
೨. ಬೃಂದಾವನ, ಅಭಯಾರಣ್ಯ, ಮೈಸೂರು ಅರಮನೆ
೩. ಮಲ್ಪೆ ಸಮುದ್ರ ತೀರ, ಮಹಾತ್ಮಾ ಗಾಂಧಿ ಜಲವಿದ್ಯುತ್ ಕೇಂದ್ರ, ಶಾಖೋತ್ಪನ್ನ ವಿದ್ಯುತ್ ಸ್ಥಾವರ

ಪುಟ ೫ ಬೆಳೆಗಳು

೧. ಭತ್ತದ ಗದ್ದೆ, ಕಡಲೆಕಾಯಿಯ ಹೊಲ
೨. ಕಬ್ಬಿನ ಗದ್ದೆ, ಮೆಕ್ಕೆಜೋಳದ ಹೊಲ
೩. ಬಾಳೆಯ ತೋಟ, ಹತ್ತಿಯ ಹೊಲ

ಪುಟ ೬ ಗಿಡಮರಗಳು

೧. ತೆಂಗಿನ ಮರ, ಹಿಪ್ಪುನೇರಳೆ ಹೊಲ

೨. ಅಡಕೆ ಮರ, ಕಿತ್ತಳೆ ಹಣ್ಣಿನ ತೋಟ

೩. ಕಾಫಿ ತೋಟ, ದ್ರಾಕ್ಷಿ ತೋಟ

ಪುಟ ೭

ಚಿತ್ರ ಕಥೆ – ೧ ಸಿಂಹ ಮತ್ತು ಇಲಿ

ಪುಟ ೮

ಚಿತ್ರ ಕಥೆ – ೨ ತೆನಾಲಿರಾಮನ ಕಥೆ

ಎರಡನೆಯ ಭಾಗದಲ್ಲಿ ಒಟ್ಟು ೩೦ ಪಾಠಗಳಿದ್ದು ಅವುಗಳಲ್ಲಿ ೨೦ ಗದ್ಯ ಪಾಠಗಳೂ, ಹತ್ತು ಪದ್ಯ ಪಾಠಗಳೂ ಇವೆ. ಇಪ್ಪತ್ತು ಗದ್ಯ ಪಾಠಗಳಲ್ಲಿ ಹತ್ತು ವಿಷಯ ಪ್ರಧಾನವಾದವೂ ಉಳಿದ ಹತ್ತು ಕಥಾ ಪ್ರಧಾನವಾದವೂ ಆಗಿವೆ. ಪ್ರತಿ ಗದ್ಯ ಪಾಠವೂ ಸಾಮಾನ್ಯವಾಗಿ ಯಾವುದಾದರೂ ಒಂದು ವಿಶಿಷ್ಟವಾದ ವಿಚಾರ, ಮೌಲ್ಯ ಅಥವಾ ನೀತಿಯನ್ನು ಮಕ್ಕಳಿಗೆ ಪರಿಚಯ ಮಾಡಿಕೊಡುತ್ತದೆ.

ಗದ್ಯ ಪಾಠಗಳಲ್ಲಿನ ಪದಗಳು ಸಾಧ್ಯವಾದಷ್ಟೂ ವಿದ್ಯಾರ್ಥಿಗಳ ಪರಿಸರದಲ್ಲಿ ಬಳಕೆಯಲ್ಲಿರುವಂತಹವಾಗಿದ್ದು ವಾಕ್ಯಗಳು ಚಿಕ್ಕವಾಗಿವೆ. ಪಾಠದಿಂದ ಪಾಠಕ್ಕೆ ಭಾಷಾಭ್ಯಾಸ ಸಾಗಿದಂತೆ ನಿಧಾನವಾಗಿ ವಾಕ್ಯಗಳು ಮತ್ತು ಪಾಠಗಳು ದೊಡ್ಡವಾಗುತ್ತವೆ. ಇವು ಕ್ರಮವಾಗಿ ಮನೆ, ಶಾಲೆ, ಊರು, ರಾಜ್ಯ ಮತ್ತು ದೇಶಗಳ ಬಗ್ಗೆ ತಿಳಿಸುತ್ತವೆ.

ಎರಡು ಗದ್ಯ ಪಾಠಗಳನಂತರ ಒಂದರಂತೆ ಪದ್ಯ ಪಾಠಗಳು ಗದ್ಯ ಪಾಠಗಳ ನಡುವೆ ಇದ್ದರೂ ಬೋಧನೆಯ ಎಲ್ಲ ಹಂತಗಳಲ್ಲೂ ಇವನ್ನು ತರಗತಿಯಲ್ಲಿ ಹಾಡಲು ಬಳಸಬಹುದು. ಇವು ಗೇಯಗೀತೆಗಳಾಗಿರುವುದರಿಂದ ಮಕ್ಕಳು ಒಬ್ಬೊಬ್ಬರಾಗಿಯೂ, ಗುಂಪಿನಲ್ಲಿಯೂ ಹಾಡುವಂತೆ ಪ್ರೋತ್ಸಾಹಿಸಬೇಕು. ಮಕ್ಕಳು ಇವನ್ನು ಕಂಠಪಾಠ ಮಾಡಬಹುದು. ಆಗಾಗ್ಗೆ ಈ ಹಾಡುವಿಕೆಯನ್ನು ಪುನರಾವರ್ತಿಸುವುದರಿಂದ ಪದ್ಯಗಳು ಮಕ್ಕಳ ನೆನಪಿನಲ್ಲಿ ಬಹುಕಾಲ ಉಳಿಯುತ್ತವೆ.

ಪ್ರತಿ ಗದ್ಯ ಪಾಠವೂ ಪಠ್ಯ, ಅಭ್ಯಾಸ ಮತ್ತು ಸೂಚನೆ ಎಂಬ ಮೂರು ಭಾಗಗಳನ್ನು ಹೊಂದಿದೆ. ಎಲ್ಲ ಪಾಠಗಳಲ್ಲಿಯೂ ಆರರಿಂದ ಎಂಟರವರೆಗೆ ಅಭ್ಯಾಸಗಳಿದ್ದರೆ ಪ್ರತಿ ಪದ್ಯ ಪಾಠದಲ್ಲಿಯೂ ನಾಲ್ಕರಿಂದ ಆರರವರೆಗೆ ಅಭ್ಯಾಸಗಳಿವೆ. ಸಾಮಾನ್ಯವಾಗಿ, ಪಾಠವನ್ನು ಕಲಿತು ಪ್ರಶ್ನೆಗಳಿಗೆ ಉತ್ತರಿಸುವ ಅಭ್ಯಾಸವು ವಿಷಯ ಗ್ರಹಣಕ್ಕೆ ಮತ್ತು ಅದರ ಮೌಲ್ಯಮಾಪನಕ್ಕೆ ಒತ್ತುಕೊಡುವುದಾದರೆ ಉಳಿದ ಅಭ್ಯಾಸಗಳು ಭಾಷೆಯ ಕಲಿಕೆ ಮತ್ತು ಮೌಲ್ಯಮಾಪನಕ್ಕೆ ಒತ್ತುಕೊಡುತ್ತವೆ. ಎಲ್ಲ ಪಾಠಗಳಲ್ಲಿನ ಅಭ್ಯಾಸಗಳನ್ನೂ ಮಕ್ಕಳ ಭಾಷಾ ಸಾಮರ್ಥ್ಯಕ್ಕೆ

ಅನುಗುಣವಾಗಿ ಬಾಯ್ಮಾತಿನಲ್ಲಿ, ಬರವಣಿಗೆಯಲ್ಲಿ ಅಭ್ಯಾಸ ಮಾಡಿಸಬಹುದು. ಪಾಠಗಳಲ್ಲಿ, ಅಭ್ಯಾಸಗಳಲ್ಲಿ ಅಲ್ಪವಿರಾಮ, ಪೂರ್ಣವಿರಾಮ, ಪ್ರಶ್ನಾರ್ಥಕ, ಆಶ್ಚರ್ಯ ಸೂಚಕಗಳು ಮುಂತಾದ ಲೇಖನ ಚಿಹ್ನೆಗಳು ಬಳಕೆಯಾಗಿದ್ದು ಅವುಗಳನ್ನು ಅಭ್ಯಾಸ ಮಾಡಲು ಅನುಕೂಲವಾಗುವಂತೆ ಪ್ರತ್ಯೇಕವಾಗಿ ಅಭ್ಯಾಸಗಳನ್ನು ಕೊಡಲಾಗಿಲ್ಲ. ಆದರೆ ಅರ್ಥಪೂರ್ಣ ಬರಹದ ಅವಿಭಾಜ್ಯ ಅಂಗಗಳಾಗಿರುವ ಅವನ್ನು ಪ್ರಾಸಂಗಿಕವಾಗಿ ಆಯಾ ಸಂದರ್ಭಗಳಲ್ಲಿಯೇ ಪರಿಚಯಿಸುವುದು ಒಳಿತು.

ಗುಣಿತಾಕ್ಷರಗಳು, ಒತ್ತಕ್ಷರಗಳ ಬಳಕೆ, ಅರ್ಥ ಮತ್ತು ರಚನೆಯ ದೃಷ್ಟಿಯಿಂದ ವಿಶಿಷ್ಟವೆನ್ನಿಸುವ ಪದಗಳನ್ನು, ವಾಕ್ಯಗಳನ್ನು ವಿಶೇಷವಾಗಿ ಅಭ್ಯಾಸ ಮಾಡಿಸಲು 'ಓದಿ' ಅಭ್ಯಾಸವಿದೆ. ಇಲ್ಲಿ ಇರುವ ಭಾಷಾ ಅಂಶಗಳನ್ನು ಉಕ್ತಲೇಖನಕ್ಕೂ ಬಳಸಬಹುದು.

'ಹೊಂದಿಸಿ' ಅಭ್ಯಾಸದಲ್ಲಿ ಎರಡು ಭಾಗಗಳಿದ್ದು ಎಡಭಾಗದ ಅಂಶಕ್ಕೆ ಬಲಭಾಗದ ಯಾವ ಅಂಶವು ಸರಿ ಹೊಂದುತ್ತದೆಯೋ ಅದನ್ನು ಹುಡುಕಿ ಹೊಂದಿಸಿ ಓದಬೇಕು, ಬರೆಯಲೂಬಹುದು. ಹಲವಾರು ಕೂಡಿಸುವ, ಬಿಡಿಸುವ ವ್ಯಾಕರಣ ಪ್ರಕ್ರಿಯೆಗಳನ್ನು ಕಲಿಯಲು ಅನುಕೂಲವಾಗುವಂತೆಯೂ ಅಭ್ಯಾಸಗಳಿವೆ. ಇವುಗಳನ್ನು ಆಯಾ ಪ್ರಕ್ರಿಯೆಗಳ ಅಭ್ಯಾಸಕ್ಕೆ ಬಳಸಬೇಕೇ ಹೊರತು ವ್ಯಾಕರಣ ಪದಗಳನ್ನು ಕಲಿಸಲಾಗಲಿ, ಅವುಗಳ ಪರಿಭಾಷೆಯನ್ನು ಕಲಿಸಲಾಗಲಿ ಬಳಸಬಾರದು.

ಪದ್ಯ ಪಾಠಗಳ 'ಅಭ್ಯಾಸ'ದಲ್ಲಿ ಪದ್ಯವನ್ನು ಗ್ರಹಿಸಲು, ಕಾವ್ಯಗುಣವನ್ನು ಅರಿಯಲು ಸಹಾಯಕವಾಗುವ ಅಭ್ಯಾಸಗಳಿವೆ. 'ಓದು' ಅಭ್ಯಾಸದಲ್ಲಿ ಪದಗಳಿಗೆ ಅರ್ಥ, ಪ್ರಾಸಪದಗಳನ್ನು ಜೋಡಿಯಾಗಿ ಓದಲು ಪದ್ಯ ರೂಪವನ್ನು ಗದ್ಯ ರೂಪದಲ್ಲಿ ಓದಲು ಸೂಕ್ತವಾದ ಕೆಲವು ಅಭ್ಯಾಸಗಳಿವೆ.

ಎರಡು ಗದ್ಯ ಪಾಠಗಳು ಮತ್ತು ಒಂದು ಪದ್ಯ ಪಾಠ ಸೇರಿ ಒಂದು ಬೋಧನಾ ಘಟಕವಾಗುವುದರಿಂದ ಇವನ್ನು ಕಲಿಸಿದ ನಂತರ ಕಲಿಕೆಯ ಮೌಲ್ಯಮಾಪನ ಮಾಡಬೇಕು.

ಪ್ರತಿ ಪಾಠದ ಅಭ್ಯಾಸದ ನಂತರ ಇರುವ ಸೂಚನೆಯ ಭಾಗದಲ್ಲಿ ಆಯಾ ಪಾಠದಲ್ಲಿನ ವಿಷಯದ ಬೋಧನೆಗೆ ಪೂರಕವಾಗಿ ತಿಳಿಸಬಹುದಾದ ಹೆಚ್ಚಿನ ಮಾಹಿತಿ, ಪದ ಹಾಗೂ ವಾಕ್ಯರಚನೆಗೆ ಸಂಬಂಧಪಟ್ಟ ವಿಶೇಷ ಅಂಶಗಳು, ಪ್ರತಿ ಪಾಠದಲ್ಲೂ ಪರೋಕ್ಷವಾಗಿ ಒಳಗೊಂಡಿರುವ ಕರ್ತವ್ಯ ನಿಷ್ಠೆ, ಪ್ರಾಣಿದಯೆ, ಸಮಯಪ್ರಜ್ಞೆ ಮೊದಲಾದವುಗಳ ವಿವರ ಮತ್ತು ಈ ಮೂರಕ್ಕೂ ಸಂಬಂಧಪಟ್ಟಂತೆ ನಡೆಸಬಹುದಾದ ಚಟುವಟಿಕೆಗಳ ಬಗ್ಗೆ ಮಾಹಿತಿ ಇದೆ. ಭಾಷಾ ಬೋಧನೆ ಸಫಲವಾಗಲು ಈ ಚಟುವಟಿಕೆಗಳನ್ನು ನಡೆಸಬೇಕು.

ಹತ್ತನೆಯ ಪಾಠದಿಂದ ಪದಗಳನ್ನೂ, ವಾಕ್ಯಗಳನ್ನೂ ಪ್ರತಿ ಮಾಡಿಕೊಂಡು ಬರುವಂತೆ ಮಕ್ಕಳಿಗೆ ಸೂಚಿಸಲು ತಿಳಿಸಲಾಗಿದೆ. ಅವರು ಇತರ ಪುಸ್ತಕಗಳು, ಪತ್ರಿಕೆಗಳು ಮುಂತಾದವುಗಳಿಂದ ಆರಿಸಿಕೊಂಡು ಪ್ರತಿ ಮಾಡಿಕೊಂಡು ಬರಲು ಪ್ರೋತ್ಸಾಹಿಸಬೇಕು.

ಪ್ರತಿ ಪಾಠವನ್ನೂ ಕಲಿಸುವುದಕ್ಕೆ ಮುನ್ನ ಅಧ್ಯಾಪಕರು ಸೂಚನೆಯ ಭಾಗವನ್ನು ಮೊದಲು ಓದಿಕೊಳ್ಳಬೇಕು. ಅಲ್ಲಿ ಹೇಳಿರುವ ಪ್ರತಿ ಅಂಶಕ್ಕೂ ಸಂಬಂಧಿಸಿದಂತೆ ಪೂರ್ವ ಸಿದ್ಧತೆಗಳನ್ನು ಮಾಡಿಕೊಳ್ಳಬೇಕು.

ಮೂರನೆಯ ಭಾಗದಲ್ಲಿ ಭಾಷಾ ಆಟಗಳಿವೆ. ಇವುಗಳಿಂದ ಅಧ್ಯಾಪಕರು ಮಕ್ಕಳಲ್ಲಿನ ಆಲೋಚನಾ ಶಕ್ತಿಯನ್ನು ಬಳಸಲು, ಅವರ ವಿಚಾರಶೀಲತೆಯನ್ನು ಬೆಳೆಸಲು ಪ್ರಯತ್ನಿಸಬಹುದು. ಹೆಚ್ಚುವರಿ ಓದಿಗೂ ಇವು ಪೂರಕವಾಗುವುವು. ಇವನ್ನೂ ಸಹ ಮಕ್ಕಳ ಭಾಷಾ ಶಕ್ತಿಗೆ ಅನುಗುಣವಾಗಿ ಯಾವಾಗ ಬೇಕಾದರೂ ಅಧ್ಯಾಪಕರು ಅವರಲ್ಲಿ ಭಾಷಾ ಕೌಶಲಗಳನ್ನು ಬೆಳೆಸಲು ಬಳಸಬಹುದಾಗಿದೆ.

ನಾಲ್ಕನೆಯ ಭಾಗದಲ್ಲಿ ಈ ಪುಸ್ತಕದಲ್ಲಿ ಬಳಸಿರುವ ಪದಗಳ ಅಕಾರಾದಿ ಪಟ್ಟಿ ಇದೆ. ಇದನ್ನು ಶಿಕ್ಷಕರು ಶ್ರೇಣೀಕರಿಸಿ ವಿವಿಧ ಹಂತದ ಮೌಲ್ಯಮಾಪನಕ್ಕೆ ಅನುಕೂಲವಾಗುವಂತೆ ೨೦, ೫೦, ೧೦೦ ಪದಗಳ ಪಟ್ಟಿಯನ್ನು ಮಾಡಿಕೊಳ್ಳಬಹುದು. ಇದರಿಂದ ಯಾವುದೇ ಹಂತದಲ್ಲಿ ಮಕ್ಕಳ ಕಲಿಕೆಯನ್ನು, ಓದುವ ಸಾಮರ್ಥ್ಯವನ್ನು ವಸ್ತುನಿಷ್ಠವಾಗಿ ಮೌಲ್ಯಮಾಪನ ಮಾಡಲು ಅನುಕೂಲವಾಗುತ್ತವೆ. ಆಯಾ ಪಾಠವನ್ನು ಅಭ್ಯಾಸ ಮಾಡಿದ ನಂತರ ಈಗಾಗಲೇ ಪರಿಚಿತ ಪದಗಳನ್ನು ಈ ಪಟ್ಟಿಯಲ್ಲಿ ಗುರುತಿಸಲು ಹೇಳಬಹುದು. ಇದರಿಂದ ಮಕ್ಕಳ ಓದುವ ಸಾಮರ್ಥ್ಯ ಹೆಚ್ಚುತ್ತದೆ.

ಕೊನೆಯ ಭಾಗದಲ್ಲಿ ಒತ್ತಕ್ಷರಗಳ ಪಟ್ಟಿಯನ್ನು ಕೊಡಲಾಗಿದೆ. ಇದನ್ನು ಮಕ್ಕಳಿಗೆ ಒತ್ತಕ್ಷರಗಳ ರಚನೆಯನ್ನು ತಿಳಿಸಲು, ಪುನರಾವರ್ತಿಸಲು, ಹೆಚ್ಚು ಕಾಲ ನೆನಪಿನಲ್ಲಿ ಉಳಿಸಿಕೊಳ್ಳುವಂತೆ ಬೋಧಿಸಲು ಬಳಸಬಹುದು.

ಕನ್ನಡ ಭಾರತಿ ೨ ನ್ನು ತರಗತಿಗಳಲ್ಲಿ ಸಮರ್ಪಕವಾಗಿ, ಫಲಪ್ರದವಾಗಿ ಬಳಸಲು ಉಪಯುಕ್ತವಾಗುವಂತಹ ಕೆಲವು ಸೂಚನೆಗಳನ್ನು ಇಲ್ಲಿ ನೀಡಲಾಗಿದೆ. ಪಾಠಪ್ರವಚನಗಳಿಗೆ ಅಗತ್ಯವೆನಿಸುವ ಹೆಚ್ಚಿನ ಮಾಹಿತಿಯನ್ನು ಶಿಕ್ಷಕರು ಸಂಗ್ರಹಿಸಿ, ಮಕ್ಕಳಲ್ಲಿ ಭಾಷಾ ಸಾಮರ್ಥ್ಯವನ್ನು ಬೆಳೆಸಲು ಸಹಾಯಕವಾಗುವಂತಹ ಇನ್ನಿತರ ಚಟುವಟಿಕೆಗಳನ್ನು ಕೈಗೊಳ್ಳಬಹುದು. ಈ ಕಾರ್ಯಕ್ಕೆ ಅನುಕೂಲವಾಗುವಂತಹ ಪಠ್ಯವಸ್ತುವಿನಲ್ಲಿ ಕೊಟ್ಟಿರುವ ಉಪಸಾಮರ್ಥ್ಯಗಳನ್ನು ಆಯಾಯ ಪಾಠಗಳಲ್ಲಿ ಅಳವಡಿಸಿಕೊಳ್ಳಲು ಶಿಕ್ಷಕರು ಮುಂದಾಗಬೇಕು.

— ಪಠ್ಯಪುಸ್ತಕ ರಚನಾ ಸಮಿತಿ.
























ನಮ್ಮೂರು



ಇದು ನಮ್ಮ ಊರು. ನಮ್ಮದು ಚಿಕ್ಕ ಊರು. ಊರಿನ ಸುತ್ತಮುತ್ತ ಹೊಲಗದ್ದೆಗಳು ಇವೆ.

ಊರಿನ ಪಕ್ಕದಲ್ಲಿ ಕೆರೆ ಇದೆ. ಊರ ಒಳಗೆ ಬಾವಿಯೂ ಇದೆ. ಕೆರೆಯ ಎಡಗಡೆ ಸಂತೆಮಾಳವಿದೆ. ಹೆದ್ದಾರಿಯ ಅಕ್ಕಪಕ್ಕಗಳಲ್ಲಿ ಮನೆಗಳಿವೆ. ರಸ್ತೆಯ ಎಡಬಲಗಳಲ್ಲಿ ಮರಗಳಿವೆ. ದೀಪದ ಕಂಬಗಳೂ ಇವೆ.

ಊರಿನ ಮಧ್ಯ ನಮ್ಮ ಶಾಲೆಯಿದೆ. ಶಾಲೆಯ ಮುಂದೆ ದೊಡ್ಡ ಆಟದ ಮೈದಾನವಿದೆ. ಎದುರಿಗೆ ಮಂಡಲ ಪಂಚಾಯಿತಿ ಕಚೇರಿಯಿದೆ. ಅದರ ಎಡಗಡೆ ಅಂಚೆ ಕಚೇರಿ, ಬಲಗಡೆ ಸಮುದಾಯ ಕೇಂದ್ರ ಇವೆ.

ಸಮುದಾಯ ಕೇಂದ್ರದಲ್ಲಿ ವಾಚನಾಲಯ ಇದೆ. ಅಲ್ಲಿ ಟಿ.ವಿ.ಯೂ ಇದೆ. ಇಲ್ಲಿ ರಾತ್ರಿ ಶಾಲೆಯೂ ನಡೆಯುತ್ತದೆ. ಈ ಕಟ್ಟಡದ ಹಿಂದೆ ಆರೋಗ್ಯ ಕೇಂದ್ರವಿದೆ. ನಮ್ಮದು ಚಿಕ್ಕ ಊರು ಚೊಕ್ಕ ಊರು.

ಅಭ್ಯಾಸ

೧. ಈ ಪ್ರಶ್ನೆಗಳಿಗೆ ಉತ್ತರಿಸಿ.

ಅ. ಊರಿನ ಸುತ್ತಮುತ್ತ ಏನೇನು ಇವೆ?
ಆ. ಊರಿನ ಕೆರೆ ಎಲ್ಲಿದೆ?
ಇ. ರಸ್ತೆಯ ಎಡಬಲಗಳಲ್ಲಿ ಏನೇನು ಇವೆ?
ಈ. ಮಂಡಲ ಪಂಚಾಯಿತಿ ಕಚೇರಿ ಎಲ್ಲಿದೆ?
ಉ. ಸಮುದಾಯ ಕೇಂದ್ರದಲ್ಲಿ ಏನೇನು ಇವೆ?
ಊ. ಊರು ಚಿಕ್ಕದಾದರೂ ಹೇಗಿರಬೇಕು?

೨. ಓದಿ.

ಅ. ಹೆದ್ದಾರಿ, ರಸ್ತೆ, ಸುತ್ತಮುತ್ತ, ಸಂತೆಮಾಳ, ಆರೋಗ್ಯಕೇಂದ್ರ, ಮಧ್ಯ, ಮೈದಾನ.
ಆ. ಅದರ ಎಡಗಡೆ ಅಂಚೆ ಕಚೇರಿ, ಬಲಗಡೆ ಸಮುದಾಯಕೇಂದ್ರ ಇವೆ.

೩. ಹೊಂದಿಸಿ ಓದಿ.

ಅ. ಊರಿನ ಸುತ್ತಮುತ್ತ	೧. ವಾಚನಾಲಯವಿದೆ.
ಆ. ರಸ್ತೆಯ ಎಡಬಲಗಳಲ್ಲಿ	೨. ಶಾಲೆಯಿದೆ.
ಇ. ಊರಿನ ಮಧ್ಯ	೩. ಹೊಲಗದ್ದೆಗಳಿವೆ.
ಈ. ಶಾಲೆಯ ಮುಂದೆ	೪. ಮರಗಳಿವೆ.
ಉ. ಸಮುದಾಯ ಕೇಂದ್ರದಲ್ಲಿ	೫. ದೊಡ್ಡ ಆಟದ ಮೈದಾನವಿದೆ.

೪. ಗುಂಪಿಗೆ ಸೇರದ ಪದವನ್ನು ಗುರುತಿಸಿ.

ಮಾದರಿ: ಮುಂದೆ, ಹಿಂದೆ, ಎದುರು, ಚಿಕ್ಕ

ಊರು, ಹಳ್ಳಿ, ಮನೆ, ಪಟ್ಟಣ

ಸುತ್ತಮುತ್ತ, ಅಕ್ಕಪಕ್ಕ, ಎಡಬಲ, ಕಟ್ಟಡ

. ಕೆರೆ, ಬಾವಿ, ಹಿಂದೆ, ಕಟ್ಟೆ

೫. ಮಾದರಿಯಂತೆ ಬದಲಾಯಿಸಿ.

ಮಾದರಿ: ಗದ್ದೆ – ಗದ್ದೆಗಳು, ಮಾದರಿ: ನಮ್ಮ – ನಮ್ಮದು

ಕಂಬ –	ನಿಮ್ಮ –
ಮನೆ –	ಅವರು –
ಮರ –	ಇವರು –
ದೀಪ –	ತಮ್ಮ –

೬. ಮಾದರಿಯಂತೆ ಎರಡೆರಡು ವಾಕ್ಯಗಳನ್ನು ರಚಿಸಿ.

ದೀಪದ ಕಂಬಗಳೂ ಇವೆ.

ಇಲ್ಲಿ ರಾತ್ರಿ ಶಾಲೆಯೂ ನಡೆಯುತ್ತದೆ.

ಸೂಚನೆ: ಪಾಠದ ಮಾದರಿಯನ್ನು ಅನುಸರಿಸಿ ಉಪಾಧ್ಯಾಯರು ಮತ್ತು ವಿದ್ಯಾರ್ಥಿಗಳು ತಮ್ಮ ತಮ್ಮ ಹಳ್ಳಿಗಳ ಚಿತ್ರಣವನ್ನು ನೀಡಬಹುದು.. ಹಿಂದೆ, ಮುಂದೆ, ಎಡಗಡೆ, ಬಲಗಡೆ ಮುಂತಾದ ಸ್ಥಳವಾಚಕಗಳ ಬಳಕೆಯ ಬಗ್ಗೆ ಅಧ್ಯಾಪಕರು ತಿಳಿಸಬಹುದು. ಊರೊಳಗೆ ಮಕ್ಕಳನ್ನು ಸುತ್ತಾಡಿಸಿ ವಿವರವಾಗಿ ಊರನ್ನು ಪರಿಚಯಿಸಬಹುದು.

ನರಿಯ ಉಪಾಯ

ಒಮ್ಮೆ ನರಿಯೊಂದು ಆಹಾರ ಹುಡುಕುತ್ತ ಹೊರಟಿತು. ತುಸು ಹೊತ್ತಿನಲ್ಲೇ ಅದಕ್ಕೆ ಆಹಾರ ಸಿಕ್ಕಿತು. ಅದನ್ನು ತಿಂದು ತನ್ನ ಗುಹೆಗೆ ಹಿಂದಿರುಗಿತು. ಅಲ್ಲಿ ಕಂಡದ್ದೇನು! ಗುಹೆಯ ಹತ್ತಿರ ಸಿಂಹದ ಹೆಜ್ಜೆ ಗುರುತು!



ನರಿ ಮತ್ತೊಮ್ಮೆ ಕಣ್ಣಲ್ಲಿ ಕಣ್ಣಿಟ್ಟು ನೋಡಿತು. ಸಿಂಹವು ಒಳಗೆ ಹೋದ ಗುರುತು ಕಾಣಿಸಿತು. ಆದರೆ ಹಿಂದಿರುಗಿ ಬಂದ ಸುಳಿವು ಇರಲಿಲ್ಲ.

ನರಿಯು ಮುಂದೆ ಬರುವ ಅಪಾಯವನ್ನು ಊಹಿಸಿತು. ಉಪಾಯವನ್ನು ಯೋಚಿಸಿತು. ಅನಂತರ ಗುಹೆಯನ್ನು ಕುರಿತು "ಅಯ್ಯಾ

ಗುಹೆಯೇ, ನಿತ್ಯವೂ ನಾನು ಬಂದೊಡನೆ ಪ್ರೀತಿಯಿಂದ ಒಳಕ್ಕೆ ಕರೆಯುತ್ತಿದ್ದೆ, ಇಂದೇಕೆ ಸುಮ್ಮನಿರುವೆ?'' ಎಂದಿತು.

ಕೂಡಲೆ ''ಅಯ್ಯಾ ಸ್ನೇಹಿತನೇ, ನೀನು ಬಂದುದು ಬಹಳ ಸಂತೋಷ, ಒಳಗೆ ಬಾ'' ಎಂಬ ಸಿಂಹದ ದನಿ ಕೇಳಿಬಂದಿತು.

ನರಿಯ ಉಪಾಯ ಫಲಿಸಿತು. ಗುಹೆಯೊಳಗೆ ಸಿಂಹ ಇರುವುದು ಖಚಿತವಾಯಿತು. ಅದು ಕಾಲಿಗೆ ಬುದ್ಧಿ ಹೇಳಿತು. ತನ್ನ ಪ್ರಾಣವನ್ನು ಉಳಿಸಿಕೊಂಡಿತು.

'ಉಪಾಯ ಬಲ್ಲವನಿಗೆ ಅಪಾಯವಿಲ್ಲ'.

ಅಭ್ಯಾಸ

೧. ಈ ಪ್ರಶ್ನೆಗಳಿಗೆ ಉತ್ತರಿಸಿ.

ಅ. ಗುಹೆಯ ಹತ್ತಿರ ನರಿ ಏನನ್ನು ನೋಡಿತು?
ಆ. ನರಿ ಏನನ್ನು ಊಹಿಸಿತ್ತು?
ಇ. ನರಿಯು ಮಾಡಿದ ಉಪಾಯವೇನು?
ಈ. ಸಿಂಹ ನರಿಯನ್ನು ಏನೆಂದು ಕರೆಯಿತು?
ಉ. ಸಿಂಹದ ದನಿ ಎಲ್ಲಿಂದ ಕೇಳಿಬಂದಿತು?
ಊ. ಗುಹೆಯೊಳಗೆ ಸಿಂಹ ಇರುವುದನ್ನು ತಿಳಿದ ನರಿ ಏನು ಮಾಡಿತು?

೨. ಓದಿ.

ಅ. ಹೆಜ್ಜೆಗುರುತು, ಸುಳಿವು, ಅಪಾಯ, ಉಪಾಯ, ಫಲಿಸು, ಬುದ್ಧಿ, ಪ್ರಾಣ.

ಆ. ಅಲ್ಲಿ ಕಂಡದ್ದೇನು!
ಬಿಲದ ಹತ್ತಿರ ಹೆಜ್ಜೆ ಗುರುತು!
ಅಯ್ಯಾ ಸ್ನೇಹಿತನೇ, ನೀನು ಬಂದುದು ಬಹಳ ಸಂತೋಷ.

೩. ಮಾದರಿಯಂತೆ ಬದಲಾಯಿಸಿ.

ಮಾದರಿ: ಇರು – ಇರಲಿಲ್ಲ, ಮಾದರಿ: ಸ್ನೇಹಿತ – ಸ್ನೇಹಿತನೇ

ಮಾಡು –	ಗೆಳೆಯ –
ನೋಡು –	ಅಣ್ಣ –
ಆಡು –	ತಮ್ಮ –
ಯೋಚಿಸು –	ಜಾಣ –

೪. ಮಾದರಿಯಂತೆ ಕೂಡಿಸಿ ಓದಿ.

ಮಾದರಿ: ನಿನಗೆ + ಏನಾಗಿದೆ – ನಿನಗೇನಾಗಿದೆ.

ಅವನಿಗೆ + ಏನಾಗಿದೆ –

ಗೆಳೆಯನಿಗೆ + ಏನಾಗಿದೆ –

ನನಗೆ + ಏನಾಗಿದೆ –

ಅವರಿಗೆ + ಏನಾಗಿದೆ –

೫. ಖಾಲಿ ಬಿಟ್ಟ ಸ್ಥಳಗಳಲ್ಲಿ ಸರಿಯಾದ ಪದವನ್ನು ಆರಿಸಿ ತುಂಬಿ.

ಅ. ನರಿಯೊಂದು ________ ಹುಡುಕುತ್ತ ಹೊರಟಿತು.
(ನೀರು, ಹುಲ್ಲು, ಆಹಾರ)

ಆ. ನರಿಯು ಮುಂದೆ ಬರುವ ________ ಯೋಚಿಸಿತು.
(ಉಪಾಯವನ್ನು, ಅಪಾಯವನ್ನು, ಗುರುತನ್ನು)

ಇ. ಸಿಂಹವು ಹೋದ ಗುರುತು ________ .
(ಕೇಳಿಬಂದಿತು, ಕಾಣಿಸಿತು, ಉಳಿಸಿಕೊಂಡಿತು)

೬. ಈ ಪದಪುಂಜಗಳನ್ನು ವಾಕ್ಯಗಳಲ್ಲಿ ಬಳಸಿ.

ಕಣ್ಣಲ್ಲಿ ಕಣ್ಣಿಡು, ಕಾಲಿಗೆ ಬುದ್ಧಿ ಹೇಳು

ಮಾದರಿ: ಅ. ನಾನು ಗಾಯವನ್ನು ಕಣ್ಣಲ್ಲಿ ಕಣ್ಣಿಟ್ಟು ನೋಡಿದೆನು.

____

ಆ. ನಾಯಿ ಬೊಗಳಿದ ಕೂಡಲೆ ಅವನು ಕಾಲಿಗೆ ಬುದ್ಧಿ ಹೇಳಿದ.

____

ಸೂಚನೆ: 'ಸಿಂಹ ಮತ್ತು ಬುದ್ಧಿವಂತ ಮೊಲ' 'ಕಾಗೆ ಮತ್ತು ಜಾಣನರಿ' ಮುಂತಾದ ಪ್ರಾಣಿಕಥೆಗಳು 'ಕಣ್ಣಲ್ಲಿ ಕಣ್ಣಿಡು' 'ಕಾಲಿಗೆ ಬುದ್ಧಿ ಹೇಳು' ಎಂಬ ನುಡಿಗಟ್ಟುಗಳ ಅರ್ಥ ಎಂಬ, ಎಂದಿತು ಮುಂತಾದವುಗಳ ಬಳಕೆ ಮತ್ತು ಸಮಸ್ಯೆಯನ್ನು ವಿಶ್ಲೇಷಿಸಿ ಸೂಕ್ಷ್ಮ ಬುದ್ಧಿಯಿಂದ ಅದಕ್ಕೆ ಪರಿಹಾರವನ್ನು ಕಂಡುಕೊಳ್ಳುವ ಬಗ್ಗೆ ವಿವರಿಸಬಹುದು.

ಪಾಠ ೩

ಬಣ್ಣದ ಬಗರಿ

ನನ್ನಯ ಬಗರಿ
ಬಣ್ಣದ ಬಗರಿ
'ಗುರು ಗುರು' ಸದ್ದನು
ಮಾಡುವ ಬಗರಿ.

ಚಾಳಿಗೆ ಸುತ್ತಿ
ಕೈಯನು ಎತ್ತಿ
ಬೀಸಲು ಭರದಿ
ಸುತ್ತುವ ಬಗರಿ.

ಹೊಡೆತಕೆ ಅಂಜದೆ
ಕೆಚ್ಚೆದೆಯಿಂದಲಿ
'ಗಿರಿ ಗಿರಿ' ತಿರುಗುವ
ಮೆಚ್ಚಿನ ಬಗರಿ.

ಅಂಗೈ ಮೇಲೆ
ಆಡುವ ಬಗರಿ
ಕಚಕುಳಿಯಿಕ್ಕುವ
ಮೋಜಿನ ಬಗರಿ.

ಕಾಮನ ಬಿಲ್ಲನು
ಭೂಮಿಗೆ ಇಳಿಸಿ
'ಗರಗರ' ಸುತ್ತುವ
ಬಣ್ಣದ ಬಗರಿ.

— 'ಮಹಾಂತ ಪ್ರಿಯ'

ಅಭ್ಯಾಸ

೧. ಈ ಪ್ರಶ್ನೆಗಳಿಗೆ ಉತ್ತರಿಸಿ.

ಅ. ಬಗರಿ ಹೇಗೆ ಸದ್ದು ಮಾಡುವುದು?
ಆ. ಬಗರಿಯನ್ನು ಹೇಗೆ ಆಡಿಸುವರು?
ಇ. ಬಗರಿ ಹೇಗೆ ತಿರುಗುವುದು?
ಈ. ಅಂಗೈಮೇಲೆ ಬಗರಿ ಆಡಿದಾಗ ಹೇಗೆ ಆಗುವುದು?
ಉ. ಬಗರಿ ಏನನ್ನು ಭೂಮಿಗೆ ಇಳಿಸಿದಂತೆ ಕಾಣುವುದು?

೨. ಓದಿ.

ಅ. ಬಗರಿ – ಬುಗುರಿ; ಚಾಳಿಗೆ – ಬುಗುರಿಯಾಡಿಸುವ ದಾರ, ಚಾಟಿ; ಮೋಜು – ತಮಾಷೆ; ಕೆಚ್ಚೆದೆ – ಧೈರ್ಯ.
ಆ. ಚಾಳಿಗೆ ಸುತ್ತಿ – ಕೈಯನು ಎತ್ತಿ
ಗಿರಿಗಿರಿ ತಿರುಗುವ – ಗರಗರ ಸುತ್ತುವ
ಇ. ಬೀಸಲು ಭರದಿ – ಭರದಿಂದ ಬೀಸಲು
ಹೊಡೆತಕೆ ಅಂಜದೆ – ಹೊಡೆತಕ್ಕೆ ಅಂಜದೆ

೩. ಗುರುಗುರು, ಗಿರಿಗಿರಿ, ಗರಗರ ಈ ಪದಗಳು ಬಳಕೆಯಾಗಿರುವ ಸಾಲುಗಳನ್ನು ಬರೆಯಿರಿ.

________________ , ________________
________________ ,

೪. ಬಿಟ್ಟಿರುವ ಸಾಲುಗಳನ್ನು ಪೂರ್ತಿ ಮಾಡಿ.

ಅ. ಕಾಮನ ಬಿಲ್ಲನು ________________ ಬಗರಿ.
ಆ. ಅಂಗೈ ________________ ಬಗರಿ.

೫. ಬಗರಿ ಕಾಮನಬಿಲ್ಲಿನಂತೆ ಕಾಣುವುದು. ಹೇಗೆ?

ಪಾಠ ೪

ಅಜ್ಜಿಯ ನುಡಿ



ಪುಟ್ಟು ಅಜ್ಜಿಯ ಬಳಿಗೆ ಬಂದನು. ಕುಡಿಯಲು ಹಾಲು ಕೇಳಿದನು.

"ಪುಟ್ಟೂ, ನೀನು ಹಲ್ಲುಜ್ಜಿದೆಯಾ?" ಎಂದರು ಅಜ್ಜಿ. "ಅಜ್ಜೀ, ನನಗೆ ಮೊದಲು ಹಾಲು ಕೊಡು, ಆಮೇಲೆ ಹಲ್ಲುಜ್ಜುತ್ತೇನೆ" ಎಂದ ಪುಟ್ಟು.

"ಮುಂಜಾನೆ ಎದ್ದು ಹಲ್ಲುಜ್ಜದೆ ಹಾಲು ಕುಡಿಯುವುದು ಸರಿಯಲ್ಲ. ಹಲ್ಲು ಸ್ವಚ್ಛವಾಗಿರದಿದ್ದರೆ ಉಸಿರಿನೊಡನೆ ಕೆಟ್ಟ ವಾಸನೆಯು ಬರುವುದು. ಅದು ಎಲ್ಲರಿಗೂ ಕೆಡುಕು" ಎಂದರು ಅಜ್ಜಿ.

"ಅಜ್ಜೀ, ನಾನೀಗಲೇ ಹಲ್ಲು ಉಜ್ಜಿ ಬರುತ್ತೇನೆ" ಎಂದ ಪುಟ್ಟು.

"ಅಷ್ಟೇ ಅಲ್ಲ, ಉಗುರುಗಳನ್ನು ಆಗಾಗ ಕತ್ತರಿಸುತ್ತಿರಬೇಕು. ನಿತ್ಯವೂ ಸ್ನಾನ ಮಾಡಬೇಕು. ಸ್ವಚ್ಛವಾದ ಬಟ್ಟೆ ತೊಡಬೇಕು. ತಲೆಯನ್ನು

ಬಾಚಿಕೊಳ್ಳಬೇಕು. ಊಟಕ್ಕೆ ಮೊದಲು ಕೈಕಾಲುಗಳನ್ನು ತೊಳೆದುಕೊಳ್ಳಬೇಕು. ಮನೆಯ ಆವರಣವನ್ನು ಸ್ವಚ್ಛವಾಗಿಡಬೇಕು" ಎಂದು ಅಜ್ಜಿ ಪುಟ್ಟುವಿಗೆ ಹೇಳಿದರು.

ಇದನ್ನು ಕೇಳಿದ ಪುಟ್ಟು "ಕಂಡಕಂಡಲ್ಲಿ ಉಗುಳಬಾರದು. ಶಾಲೆಯ ಆವರಣವನ್ನು ಶುದ್ಧವಾಗಿಡಬೇಕು" ಎಂದು ಉಪಾಧ್ಯಾಯರು ಹೇಳಿದ್ದಾರೆ ಎಂದನು.

"ಹೌದು ಮಗೂ, ಸ್ವಚ್ಛತೆಯಿದ್ದರೆ ರೋಗರುಜಿನಗಳ ಭಯವಿಲ್ಲ. ಸ್ವಚ್ಛತೆಯೇ ಆರೋಗ್ಯ. ಆರೋಗ್ಯವೇ ಭಾಗ್ಯ" ಎಂದೂ ಅಜ್ಜಿ ಹೇಳಿದರು.

ಅಭ್ಯಾಸ

೧. ಈ ಪ್ರಶ್ನೆಗಳಿಗೆ ಉತ್ತರಿಸಿ.

ಅ. ಪುಟ್ಟು ಅಜ್ಜಿಯ ಬಳಿಗೆ ಬಂದು ಏನು ಕೇಳಿದ?
ಆ. ಹಲ್ಲುಗಳು ಸ್ವಚ್ಛವಾಗಿರದಿದ್ದರೆ ಏನಾಗುತ್ತದೆ?
ಇ. ಸ್ನಾನ ಮಾಡಿದ ನಂತರ ಎಂತಹ ಬಟ್ಟೆ ತೊಡಬೇಕು?
ಈ. ಮನೆ, ಶಾಲೆಗಳ ಆವರಣವನ್ನು ಹೇಗೆ ಇಡಬೇಕು?
ಉ. ಊಟಕ್ಕೆ ಮೊದಲು ಏನು ಮಾಡಬೇಕು?
ಊ. ಯಾವಾಗ ನಮಗೆ ರೋಗರುಜಿನಗಳ ಭಯವಿಲ್ಲ?

೨. ಓದಿ.

ಅ. ಸ್ವಚ್ಛತೆ, ಶುದ್ಧ, ಆವರಣ, ರೋಗರುಜಿನ.
ಆ. ನಾನೀಗಲೇ ಹಲ್ಲು ಉಜ್ಜಿ ಬರುತ್ತೇನೆ.
ನಿತ್ಯವೂ ಸ್ನಾನ ಮಾಡಬೇಕು.
ಕಂಡಕಂಡಲ್ಲಿ ಉಗುಳಬಾರದು.

೩. ಖಾಲಿ ಬಿಟ್ಟಲ್ಲಿ ಸರಿಯಾದ ಅಕ್ಷರ ಆರಿಸಿ ಬರೆಯಿರಿ.

ಅ. ಸ್ವ ____ (ಚ್ಚ, ಚ್ಛ)

ಆ. ಶು ____ (ದ್ದ, ದ್ಧ)

ಇ. ಆ ____ ಗ್ಯ (ರೊ, ರೋ)

ಈ. ಅವರ ____ (ನ, ಣ)

೪. ಮಾದರಿಯಂತೆ ಬದಲಾಯಿಸಿ.

ಮಾದರಿ: ನಾನೀಗ – ನಾನೀಗಲೇ, ಬಾಚು – ಬಾಚಿಕೊಳ್ಳಬೇಕು

ನೀನು – ಆಡು –
ಅವನು – ಓದು –
ಅವರು – ನೋಡು –
ಅವಳು – ಹೇಳು –

೫. ಮಾದರಿಯಂತೆ ವಾಕ್ಯಗಳನ್ನು ಬದಲಾಯಿಸಿ.

ಮಾದರಿ: ನೀನು ಹಲ್ಲುಜ್ಜಿದೆ – ನೀನು ಹಲ್ಲುಜ್ಜಿದೆಯಾ?

ನೀನು ಉಗುಳಿದೆ –
ನೀನು ಸ್ನಾನ ಮಾಡಿದೆ –
ನೀನು ಹಾಲು ಕುಡಿದೆ –
ನೀನು ತಲೆ ಬಾಚಿಕೊಂಡೆ –

೬. ಈ ಪದಗಳನ್ನು ವಾಕ್ಯಗಳಲ್ಲಿ ಬಳಸಿ.

ಮೊದಲು, ಕಂಡಕಂಡಲ್ಲಿ, ಆಮೇಲೆ.

ಸೂಚನೆ: ಮಕ್ಕಳ ಪರಿಸರ ಮತ್ತು ವಯೋಮಾನಕ್ಕೆ ಅನುಗುಣವಾಗಿ ಸ್ವಚ್ಛತೆ ಮತ್ತು ಆರೋಗ್ಯದ ಬಗ್ಗೆ ಹೆಚ್ಚು ಮಾಹಿತಿ, ಉಜ್ಜಿ-ಉಜ್ಜದೆ, ಅಜ್ಜಿ-ಅಜ್ಜೀ, ಮುಂತಾದ ಪದಗಳ ನಡುವಿನ ಅರ್ಥವ್ಯತ್ಯಾಸ. 'ಬೇಕು' 'ಬಾರದು' ಗಳ ಬಳಕೆ ಹಾಗೂ ಕರ್ತವ್ಯನಿಷ್ಠೆ, ಸಮಯನಿಷ್ಠೆ ಮತ್ತು ಆರೋಗ್ಯಕರ ಜೀವನದ ಬಗ್ಗೆ ಹೇಳಬಹುದು.

ಊಟದ ಸ್ಪರ್ಧೆ

ಒಮ್ಮೆ ಊರಿನ ಹಿರಿಯರು ವಿದ್ಯಾರ್ಥಿಗಳಿಗೆ ಊಟದ ಸ್ಪರ್ಧೆಯನ್ನು ಏರ್ಪಡಿಸಿದರು. ಆರು ಜನ ವಿದ್ಯಾರ್ಥಿಗಳು ಭಾಗವಹಿಸಿದರು.

ಹಿರಿಯರು ಅವರನ್ನು ಊಟದ ಕೋಣೆಗೆ ಕರೆದೊಯ್ದರು. ಅಲ್ಲಿ ಮೂರು ಮೂರು ತಟ್ಟೆಗಳನ್ನು ಎದುರು ಬದುರು ಹಾಕಿದ್ದರು. ಸ್ಪರ್ಧಿಗಳನ್ನು ಊಟಕ್ಕೆ ಕುಳ್ಳಿರಿಸಿದರು. "ನೀವು ಕೈಯ್ಯನ್ನು ಮಡಿಚದ ಊಟ ಮಾಡಬೇಕು" ಎಂದು ಹೇಳಿದರು.

ಈ ಮಾತನ್ನು ಕೇಳಿದ ಸ್ಪರ್ಧಿಗಳು ಚಿಂತೆಗೊಳಗಾದರು. ಸ್ವಲ್ಪ ಹೊತ್ತು ಯೋಚಿಸಿದರು. ಅವರಲ್ಲಿ ಒಬ್ಬನಿಗೆ ಉಪಾಯ ಹೊಳೆಯಿತು. ಅವನು ಅದನ್ನು ತನ್ನ ಗೆಳೆಯರ ಕಿವಿಯಲ್ಲಿ ಹೇಳಿದನು.

ಒಡನೆ ಅವರು ಊಟ ಪ್ರಾರಂಭಿಸಿದರು.

ತಟ್ಟೆಯಲ್ಲಿದ್ದ ತಿನಿಸುಗಳನ್ನು ಕೈ ಮಡಿಚದೇ ಎತ್ತಿಕೊಂಡರು. ಪ್ರತಿಯೊಬ್ಬರೂ ತಮ್ಮ ಎದುರಿನವರಿಗೆ ತಿನ್ನಿಸಿದರು. ಹೀಗೆ ತಟ್ಟೆಯಲ್ಲಿದ್ದ ತಿನಿಸುಗಳನ್ನೆಲ್ಲ ತಿಂದು ಮುಗಿಸಿದರು.

ಊರಿನ ಹಿರಿಯರು ಮೂಗಿನ ಮೇಲೆ ಬೆರಳಿಟ್ಟುಕೊಂಡರು. ವಿದ್ಯಾರ್ಥಿಗಳ ಜಾಣತನಕ್ಕೆ ತಲೆದೂಗಿದರು. ಎಲ್ಲರಿಗೂ ಬಹುಮಾನ ಕೊಟ್ಟು 'ಶಹಭಾಸ್' ಎಂದರು.

ಅಭ್ಯಾಸ

೧. ಈ ಪ್ರಶ್ನೆಗಳಿಗೆ ಉತ್ತರಿಸಿ.

ಅ. ಊರಿನ ಹಿರಿಯರು ಯಾರಿಗಾಗಿ ಊಟದ ಸ್ಪರ್ಧೆಯನ್ನು ಏರ್ಪಡಿಸಿದ್ದರು?

ಆ. ಊಟದ ತಟ್ಟೆಯನ್ನು ಎಲ್ಲಿ ಹಾಕಿದ್ದರು?

ಇ. ಊಟದ ನಿಯಮವೇನು?

ಈ. ಸ್ಪರ್ಧಿಗಳು ಹೇಗೆ ಊಟ ಮಾಡಿದರು?

ಉ. ಊರಿನ ಹಿರಿಯರು ಏಕೆ ಮೂಗಿನ ಮೇಲೆ ಬೆರಳಿಟ್ಟುಕೊಂಡರು?

ಊ. ಸ್ಪರ್ಧೆಯಲ್ಲಿ ಭಾಗವಹಿಸಿದವರಿಗೆ ಏನು ಸಿಕ್ಕಿತು?

೨. ಓದಿ.

ಅ. ಸ್ಪರ್ಧೆ, ಭಾಗವಹಿಸು, ಬಹುಮಾನ, ಚಿಂತೆ, ಕೋಣೆ, ಸ್ಪರ್ಧಿ.

ಆ. ನೀವು ಕೈಯನ್ನು ಮಡಿಚದೇ ಊಟ ಮಾಡಬೇಕು.
ಹೀಗೆ ತಟ್ಟೆಯಲ್ಲಿದ್ದ ತಿನಿಸುಗಳನ್ನೆಲ್ಲ ತಿಂದು ಮುಗಿಸಿದರು.
ಎಲ್ಲರಿಗೂ ಬಹುಮಾನ ಕೊಟ್ಟು 'ಶಹಭಾಸ್' ಎಂದರು.

೩. ಖಾಲಿ ಬಿಟ್ಟ ಸ್ಥಳಗಳಲ್ಲಿ ಸರಿಯಾದ ಪದವನ್ನು ತುಂಬಿ.

ಅ. ಊಟದ ________ ಕರೆದೊಯ್ದರು.
(ಕೋಣೆಗೆ, ಕೋಣೆಯಲ್ಲಿ, ಕೋಣೆಯಿಂದ)

ಆ. ನೀವು ಕೈಯನ್ನು ________ ಊಟ ಮಾಡಬೇಕು.
(ಎತ್ತದೆ, ಮುಟ್ಟದೆ, ಮಡಿಚದೆ)

ಇ. ಪ್ರತಿಯೊಬ್ಬರೂ ತಮ್ಮ ಎದುರಿನವರಿಗೆ ________ .
(ತಿನ್ನಿಸಿದರು, ಮುಗಿಸಿದರು, ಕುಳ್ಳಿರಿಸಿದರು)

ಈ. ಊಟದ ನಿಯಮವನ್ನು ಕೇಳಿ ________ ಚಿಂತೆಗೊಳಗಾದರು.
(ಹಿರಿಯರು, ಸ್ಪರ್ಧಿಗಳು, ಎದುರಿನವರು)

೪. ಮಾದರಿಯಂತೆ ಬದಲಾಯಿಸಿ.

ಮಾದರಿ: ಮಡಿಚು – ಮಡಿಚದೆ, ಮಾದರಿ: ಎತ್ತಿಕೊಳ್ಳು – ಎತ್ತಿಕೊಂಡರು

ಮುಗಿಸು –	ಕೊಂಡುಕೊಳ್ಳು –
ಭಾಗವಹಿಸು –	ನೋಡಿಕೊಳ್ಳು –
ಎತ್ತಿಕೊಳ್ಳು –	ಹೇಳಿಕೊಳ್ಳು –

೫. ಮಾದರಿಯಂತೆ ವಾಕ್ಯವನ್ನು ಬದಲಾಯಿಸಿ.

ಮಾದರಿ: ನೀವು ಕೈಯ್ಯನ್ನು ಮಡಿಚಿ ಊಟ ಮಾಡಬೇಕು.
ನೀವು ಕೈಯ್ಯನ್ನು ಮಡಿಚದೆ ಊಟ ಮಾಡಬೇಕು.

ಅ. ನೀವು ಬೆನ್ನು ಬಾಗಿಸಿ ಊಟ ಮಾಡಬೇಕು.

ಆ. ಅವರು ಕೈ ಎತ್ತಿ ಬರೆಯಬೇಕು.

ಇ. ನಾನು ತಲೆ ಬಗ್ಗಿಸಿ ನಡೆಯಬೇಕು.

ಈ. ಅವಳು ಚಿತ್ರಕ್ಕೆ ಬಣ್ಣ ಹಾಕಿ ಚೌಕಟ್ಟು ಹಾಕಬೇಕು.

೬. ಈ ನುಡಿಗಟ್ಟುಗಳನ್ನು ವಾಕ್ಯಗಳಲ್ಲಿ ಬಳಸಿ.

ಕಿವಿಯಲ್ಲಿ ಹೇಳು, ಮೂಗಿನ ಮೇಲೆ ಬೆರಳಿಡು, ತಲೆದೂಗು.
ಮಾದರಿ:

ಅ. ಗೆಳೆಯನು ವಾಕ್ಯದ ಅರ್ಥವನ್ನು ಕಿವಿಯಲ್ಲಿ ಹೇಳಿದನು.

____

ಆ. ನಾವು ಗೆಳತಿಯ ಹೊಸ ಬಟ್ಟೆಯನ್ನು ನೋಡಿ ಮೂಗಿನ ಮೇಲೆ ಬೆರಳಿಟ್ಟುಕೊಂಡೆವು.

____

ಇ. ನಿಮ್ಮ ಜಾಣತನಕ್ಕೆ ತಲೆದೂಗಿದೆ.

____

ಸೂಚನೆ: ಬಾಳೆಹಣ್ಣು, ಮಾವಿನ ಹಣ್ಣು, ರೊಟ್ಟಿ ಮುಂತಾದವನ್ನು ಗೊತ್ತುಪಡಿಸಿದ ಸಮಯವನ್ನು ಮೀರದೆ ತಿನ್ನುವ ಸ್ಪರ್ಧೆಗಳು, ತಿನ್ನು, ತಿನ್ನಿಸು, ಪ್ರಾರಂಭಿಸು ಇತ್ಯಾದಿ ಪದಗಳ ನಡುವಿನ ಅರ್ಥವ್ಯತ್ಯಾಸ ಹಾಗೂ ಅವುಗಳ ಬಳಕೆ, ಸ್ಪರ್ಧೆಗಳಲ್ಲಿ ಸಹಕಾರ ಮತ್ತು ಆಪತ್ತಿನ ಸಮಯದಲ್ಲಿ ಆಲೋಚಿಸಿ ತೀರ್ಮಾನ ತೆಗೆದುಕೊಳ್ಳುವ ಬಗ್ಗೆ ತಿಳಿಸಬಹುದು. ಇಂತಹ ಹಲವಾರು ಸ್ಪರ್ಧೆಗಳನ್ನೂ ಏರ್ಪಡಿಸಬಹುದು.

ಪಾಠ ೬

ಮುದ್ದಿನ ಕರು

ನನ್ನಯ ಮುದ್ದಿನ ಆಕಳ ಕರುವು
ಸುಂದರ ಕಾಣುವುದು.
ಬೆಳ್ಳಿಯ ಬೆಳಕಿನ ಬಣ್ಣವ ತೊಟ್ಟು
ಬಳುಕುತ ನಡೆಯುವುದು.

ಗೌರಿಯು ಅಂಬಾ ಎನ್ನಲು ಕಣ್ಣನು
ಅರಳಿಸಿ ನೋಡುವುದು.
ಕುಣಿಕೆಯ ಬಿಚ್ಚಲು ಓಡುತ ತಾಯಿಯ
ಮಡಿಲನು ಸೇರುವುದು.

ಹೊಟ್ಟೆಯು ತುಂಬಲು ಬಾಲವ ನಿಮಿರಿಸಿ
ಚಂಗನೆ ಹಾರುವುದು.
ಕೊರಳಿಗೆ ಕಟ್ಟಿದ ಗೆಜ್ಜೆಯ ನಾದಕೆ
ಹೆಜ್ಜೆಯ ಹಾಕುವುದು.

ಅಕ್ಕನ ಕಂಡರೆ ಅಕ್ಕರೆಯಿಂದಲಿ
ಬಳಿಯಲಿ ಓಡುವುದು.
ಅಮ್ಮನು ತಿನಿಸನು ಕೊಟ್ಟರೆ ಗಬಗಬ
ತಿನ್ನುತ ನಲಿಯುವುದು.

— ಜಂಬುನಾಥ ಕಂಚ್ಯಾಣಿ

ಅಭ್ಯಾಸ

೧. ಈ ಪ್ರಶ್ನೆಗಳಿಗೆ ಉತ್ತರಿಸಿ.

ಅ. ಮುದ್ದಿನ ಕರು ಹೇಗೆ ಕಾಣುವುದು?

ಆ. ಮುದ್ದಿನ ಕರು ಹೇಗೆ ನಡೆಯುವುದು?

ಇ. ಕರು ಯಾವಾಗ ಕಣ್ಣರಳಿಸಿ ನೋಡುವುದು?

ಈ. ಕರು ಯಾವ ನಾದಕ್ಕೆ ಹೆಜ್ಜೆ ಹಾಕುವುದು?

ಉ. ಕರುವಿಗೆ ಯಾರನ್ನು ಕಂಡರೆ ಅಕ್ಕರೆ?

೨. ಓದಿ.

ಅ. ಬಳುಕುತ — ಅತ್ತಿತ್ತ ಬಾಗುತ್ತ; ಅರಳಿಸಿ — ಅಗಲವಾಗಿ ತೆರೆದು;
ಕುಣಿಕೆ — ಕತ್ತಿನ ಸುತ್ತ ಸುತ್ತಿರುವ ಹಗ್ಗ; ನಿಮಿರಿಸಿ — ಎತ್ತಿ;
ಅಕ್ಕರೆ — ಪ್ರೀತಿ; ಬಳಿಯಲಿ — ಹತ್ತಿರದಲ್ಲಿ.

ಆ. ನೋಡುವುದು — ಸೇರುವುದು.
ಹಾರುವುದು — ಹಾಕುವುದು.
ಗೆಜ್ಜೆ — ಹೆಜ್ಜೆ.

ಇ. ಕುಣಿಕೆಯ ಬಿಚ್ಚಲು — ಕುಣಿಕೆಯನ್ನು ಬಿಚ್ಚಿದಾಗ.
ಹೊಟ್ಟೆಯು ತುಂಬಲು — ಹೊಟ್ಟೆಯು ತುಂಬಿದಾಗ.
ಗೆಜ್ಜೆಯ ನಾದಕೆ — ಗೆಜ್ಜೆಯ ನಾದಕ್ಕೆ.
ಬಳಿಯಲಿ — ಬಳಿಯಲ್ಲಿ.

೩. ಹೊಂದಿಸಿ ಓದಿ.

ಅ.	ಬೆಳ್ಳಿಯ ಬೆಳಕಿನ ಬಣ್ಣವ ತೊಟ್ಟು	ಮಡಿಲನು ಸೇರುವುದು.
ಆ.	ಕೊರಳಿಗೆ ಕಟ್ಟಿದ ಗೆಜ್ಜೆಯ ನಾದಕೆ	ಬಳಿಯಲಿ ಓಡುವುದು.
ಇ.	ಅಮ್ಮನು ತಿನಿಸನು ಕೊಟ್ಟರೆ ಗಬಗಬ	ಬಳುಕುತ ನಡೆಯುವುದು.
ಈ.	ಕುಣಿಕೆಯ ಬಿಚ್ಚಲು ಓಡುತ ತಾಯಿಯ	ಚಂಗನೆ ಹಾರುವುದು.

ಉ. ಹೊಟ್ಟೆಯು ತುಂಬಲು
ಬಾಲವ ನಿಮಿರಿಸಿ ತಿನ್ನುತ ನಲಿಯುವುದು.

ಊ. ಅಕ್ಕನು ಕಂಡರೆ
ಅಕ್ಕರೆಯಿಂದಲಿ ಹೆಜ್ಜೆಯ ಹಾಕುವುದು.

೪. ಬಿಟ್ಟಿರುವ ಸಾಲುಗಳನ್ನು ಪೂರ್ತಿ ಮಾಡಿ.

ಅ. ನನ್ನಯ ______________ ಆ. ಗೌರಿಯು ______________
______________ ______________
______________ ______________
________ ನಡೆಯುವುದು. ________ ಸೇರುವುದು.

೫. ಗಬಗಬ ತಿನ್ನುವುದು. ಇದೇ ಮಾದರಿಯಲ್ಲಿ ಎರಡು ವಾಕ್ಯಗಳನ್ನು ಬರೆಯಿರಿ.

ಪಾಠ ೭

ಕಪ್ಪೆಯೋಟ

ಉಪಾಧ್ಯಾಯರು ಸೀಟಿ ಊದಿದರು. ಮಕ್ಕಳು ಆಟದ ಬಯಲಿಗೆ ಸಾಲಾಗಿ ಓಡಿಬಂದರು.

"ಗುರುಗಳೇ, ನಿನ್ನೆ 'ಕಪ್ಪೆಯೋಟ' ಆಟದ ಬಗ್ಗೆ ಹೇಳಿದ್ದಿರಿ. ಇಂದು ಆ ಆಟವನ್ನೇ ಆಡಿಸಿ" ಎಂದರು. "ಆಗಲಿ" ಎಂದರು ಉಪಾಧ್ಯಾಯರು.

ಮೊದಲು ಅವರಲ್ಲಿ ನಾಲ್ಕು ಗುಂಪುಗಳನ್ನು ಮಾಡಿದರು. ನೆಲದ ಮೇಲೆ ಒಂದು ಗೆರೆ ಎಳೆದರು. "ಮಕ್ಕಳೇ, ನೀವು ಈ ಗೆರೆಯಿಂದ ಕಪ್ಪೆಯಂತೆ ಓಡಲು ಪ್ರಾರಂಭಿಸಬೇಕು" ಎಂದರು.

ಅನಂತರ ಅವರು ತುಸು ದೂರದಲ್ಲಿ ಮತ್ತೊಂದು ಗೆರೆ ಎಳೆದರು. "ನೀವು ಓಡಿಬಂದು ಈ ಗೆರೆಯನ್ನು ಮುಟ್ಟಿ ಹಿಂದಿರುಗಬೇಕು" ಎಂದರು.

ಆಮೇಲೆ ನಾಲ್ಕೂ ಗುಂಪಿನವರನ್ನು ಕರೆದರು. ಅವರವರ ನಾಯಕರ ಹಿಂದೆ ಸಾಲಾಗಿ ಕುಳಿತುಕೊಳ್ಳುವಂತೆ ಹೇಳಿದರು. ಉಪಾಧ್ಯಾಯರು ಸೀಟಿ ಊದಿದರು.

ಪ್ರತಿಯೊಂದು ಗುಂಪಿನ ಮೊದಲನೆಯ ಆಟಗಾರನೂ ಕುಪ್ಪಳಿಸುತ್ತ ಓಡಿದನು. ಅವರೆಲ್ಲ ಎದುರಿನ ಗೆರೆ ಮುಟ್ಟಿದರು. ಕುಪ್ಪಳಿಸುತ್ತ ಹಿಂದಿರುಗಿ ಬಂದರು. ತಮ್ಮ ತಮ್ಮ ಗುಂಪಿನ ಎರಡನೆಯ ಆಟಗಾರನ ಕೈ ತಟ್ಟಿದರು. ಎರಡನೆಯ ಆಟಗಾರರೂ ಕುಪ್ಪಳಿಸಿದರು. ಗೆರೆ ಮುಟ್ಟಿ ಹಿಂದಿರುಗಿ ಮೂರನೆಯ ಆಟಗಾರರ ಕೈ ತಟ್ಟಿದರು.

ಆಟ ಹೀಗೆಯೇ ಸಾಗಿತು. ಗುಂಪಿನ ಎಲ್ಲ ಆಟಗಾರರೂ ಓಡಿದರು. ಮೊದಲು ಓಟ ಮುಗಿಸಿದವರು ಮೂರನೆಯ ಗುಂಪಿನವರು. ಅವರು ಜಯ ಗಳಿಸಿದರು.

'ಕಪ್ಪೆಯ ಓಟ ಪ್ರೀತಿಯ ಆಟ'

ಅಭ್ಯಾಸ

೧. ಈ ಪ್ರಶ್ನೆಗಳಿಗೆ ಉತ್ತರಿಸಿ.

ಅ. ಸೀಟಿಯನ್ನು ಯಾರು ಊದಿದರು?

ಆ. ಮಕ್ಕಳು ಎಲ್ಲಿಗೆ ಓಡಿ ಬಂದರು?

ಇ. ಉಪಾಧ್ಯಾಯರು 'ಕಪ್ಪೆಯೋಟ' ಆಟಕ್ಕೆ ಎಷ್ಟು ಗೆರೆಗಳನ್ನು ಹಾಕಿದರು?

ಈ. ಮಕ್ಕಳು ಹೇಗೆ ಓಡಿದರು?

ಉ. ಗುಂಪಿನ ಮೊದಲನೆಯ ಆಟಗಾರ ಗುರಿಮುಟ್ಟಿ ಬಂದು ಏನು ಮಾಡಿದನು?

ಊ. ಕಪ್ಪೆಯೋಟ ಆಟದಲ್ಲಿ ಯಾರು ಜಯಗಳಿಸಿದರು?

೨. ಓದಿ.

ಅ. ಕಪ್ಪೆಯೋಟ, ಪ್ರಾರಂಭಿಸು, ಕುಪ್ಪಳಿಸು, ಕೈತಟ್ಟು.

ಆ. ನಾಲ್ಕೂ ಗುಂಪಿನವರನ್ನು ಕರೆದರು.
ಆಟ ಹೀಗೆಯೇ ಸಾಗಿತು.
ಇಂದು ಆ ಆಟವನ್ನೇ ಆಡಿಸಿ.
ಮೊದಲು ಆಟ ಮುಗಿಸಿದವರು ಮೂರನೆಯ ಗುಂಪಿನವರು.

೩. ಮಾದರಿಯಂತೆ ಬದಲಾಯಿಸಿ.

ಮಾದರಿ: ಆಡು – ಆಡಿಸಿ, ಊದು – ಊದಿದರು, ಆಟ – ಆಟಗಾರ

ಊದು –	ಉಳಿ –	ಓಟ –
ಕೊಡು –	ಆಡು –	ಹಾಡು –
ಹೇಳು –	ತಟ್ಟು –	ತೋಟ –

೪. ಮಾದರಿಯಂತೆ ಉಳಿದ ರೂಪಗಳನ್ನು ಹೇಳಿರಿ.

ಮಾದರಿ: ಒಂದು – ಒಂದನೆಯ

ಎರಡು –	ಮೂರು –	ನಾಲ್ಕು –
ಐದು –	ಆರು –	ಏಳು –

೫. ಹೊಂದಿಸಿ ಓದಿ.

ಅ. ಸೀಟಿ	೧. ತಟ್ಟಿದರು
ಆ. ಗೆರೆ	೨. ಊದಿದರು
ಇ. ಕೈ	೩. ಆಡಿಸಿದರು
ಈ. ಆಟ	೪. ಗಳಿಸಿದರು
ಉ. ಜಯ	೫. ಮುಟ್ಟಿದರು

೬. ಮಾದರಿಯಂತೆ ವಾಕ್ಯಗಳನ್ನು ಕೂಡಿಸಿ ಬರೆಯಿರಿ.

ಮಾದರಿ: ಅವರು ಗೆರೆ ಮುಟ್ಟಿದರು. ಒಂದಿರುಗಿದರು.
ಅವರು ಗೆರೆ ಮುಟ್ಟಿ ಒಂದಿರುಗಿದರು.

ಅ. ಅವರು ಕೈ ತಟ್ಟಿದರು. ಪಕ್ಕದಲ್ಲಿ ಕುಳಿತರು.

ಆ. ಅವಳು ಅಕ್ಕಿ ಕುಟ್ಟಿದಳು. ನೀರು ಹಾಕಿದಳು.

ಇ. ಗುರುಗಳು ಮಕ್ಕಳನ್ನು ನೋಡಿದರು. ಸೀಟಿ ಊದಿದರು.

ಸೂಚನೆ: ಈ ವಯೋಮಾನದ ಮಕ್ಕಳು ಆಡಬಹುದಾದ ಹಲವಾರು ಆಟಗಳ ಪರಿಚಯ ಮಾಡಿಕೊಡಬಹುದು. ಕಪ್ಪೆಯೋಟವನ್ನು ಆಡಿಸುವುದೂ ಸೂಕ್ತ.

ಪಾಠ ೮

ವಾಸನೆಯ ಬೆಲೆ

ಬಾಲಕನೊಬ್ಬನು ಊರ ಬೀದಿಯಲ್ಲಿ ಹೋಗುತ್ತಿದ್ದನು. ಬಳಿಯ ಅಂಗಡಿಯಿಂದ ಹಲಸಿನ ಹಣ್ಣಿನ ವಾಸನೆ ಬರುತ್ತಿತ್ತು. ಬಾಲಕನು ಗಕ್ಕನೆ ಅಲ್ಲಿಯೇ ನಿಂತನು.

ಇದನ್ನು ಅಂಗಡಿಯವನು ಗಮನಿಸಿದನು. "ಇಲ್ಲೇಕೆ ನಿಂತಿರುವೆ?" ಎಂದು ಬಾಲಕನನ್ನು ಗದರಿಸಿದನು. ಆಗ ಬಾಲಕನು "ಹಲಸಿನ ಹಣ್ಣಿನ ವಾಸನೆ ಮೂಗಿಗೆ ಬಡಿಯಿತು. ಆದ್ದರಿಂದ ಇಲ್ಲಿ ನಿಂತೆ" ಎಂದನು.

ನನ್ನ ಅಂಗಡಿಯಲ್ಲಿ ವಾಸನೆಗೂ ಬೆಲೆ. ನೀನು ಹಲಸಿನ ಹಣ್ಣಿನ ವಾಸನೆ ಸೇವಿಸಿರುವೆ. ಅದಕ್ಕೆ ಹಣ ಕೊಡಬೇಕು" ಎಂದು ಜಂಭದಿಂದ ಅಂಗಡಿಯವನು ನುಡಿದನು.

"ಸರಿ, ಕೊಡುತ್ತೇನೆ" ಎಂದನು ಬಾಲಕ.

ತನ್ನ ಜೇಬಿನಿಂದ ಕೆಲವು ನಾಣ್ಯಗಳನ್ನು ಹೊರಗೆ ತೆಗೆದನು. ಅಂಗಡಿಯವನ ಮುಂದೆ ಝಣ ಝಣ ಸದ್ದುಮಾಡಿದನು.

ಅಂಗಡಿಯವನು "ಹೀಗೇಕೆ ಮಾಡುತ್ತಿರುವೆ?" ಎಂದನು.

ಅದಕ್ಕೆ ಬಾಲಕನು "ನಾನು ಹಣ್ಣಿನ ವಾಸನೆ ಸೇವಿಸಿದ್ದು ನಿಜ. ಅದಕ್ಕೆ ತಕ್ಕ ಬೆಲೆಯನ್ನು ಕೊಟ್ಟಿದ್ದೇನೆ. ನಿನ್ನ ಹಣ್ಣಿನ ವಾಸನೆಗೆ ನನ್ನ ಹಣದ ಸದ್ದೇ ಬೆಲೆ" ಎಂದು ಉತ್ತರಿಸಿದನು.

ಅಂಗಡಿಯವನು ಬಾಲಕನ ಜಾಣತನವನ್ನು ಮೆಚ್ಚಿಕೊಂಡನು. ಅವನಿಗೆ ಹಣ್ಣು ಕೊಟ್ಟು ಕಳುಹಿಸಿದನು.

ಅಭ್ಯಾಸ

೧. ಈ ಪ್ರಶ್ನೆಗಳಿಗೆ ಉತ್ತರಿಸಿ.

ಅ. ಹಣ್ಣಿನ ವಾಸನೆ ಎಲ್ಲಿಂದ ಬರುತ್ತಿತ್ತು?

ಆ. ಬಾಲಕ ಗಕ್ಕನೆ ನಿಲ್ಲಲು ಕಾರಣವೇನು?

ಇ. ಅಂಗಡಿಯವನು ಯಾವುದಕ್ಕೆ ಬೆಲೆ ಕೊಡಬೇಕೆಂದು ಹೇಳಿದನು?

ಈ. ಬಾಲಕನು ಅಂಗಡಿಯವನ ಮುಂದೆ ಏಕೆ ಝಣ ಝಣ ಸದ್ದು ಮಾಡಿದನು?

ಉ. ಅಂಗಡಿಯವನು ಬಾಲಕನಿಗೆ ಏಕೆ ಹಣ್ಣು ಕೊಟ್ಟನು?

ಊ. ಬಾಲಕ ಜಾಣ. ಹೇಗೆ?

೨. ಓದಿ.

ಅ. ವಾಸನೆ, ನಾಣ್ಯ, ಝಣಝಣ, ಜಾಣತನ, ತಕ್ಕ.

ಆ. ಬಾಲಕನು ಗಕ್ಕನೆ ಅಲ್ಲಿಯೇ ನಿಂತನು.
ನನ್ನ ಅಂಗಡಿಯಲ್ಲಿ ವಾಸನೆಗೂ ಬೆಲೆ.
ನಿನ್ನ ಹಣ್ಣಿನ ವಾಸನೆಗೆ ನನ್ನ ಹಣದ ಸದ್ದೇ ಬೆಲೆ.

೩. ಖಾಲಿ ಬಿಟ್ಟ ಸ್ಥಳದಲ್ಲಿ ಪದದ ಸರಿಯಾದ ರೂಪವನ್ನು ತುಂಬಿ.

ಅ. ಬಳಿಯ ಅಂಗಡಿಯಿಂದ ಹಣ್ಣಿನ ವಾಸನೆ ________.(ಬರು)

ಆ. ಅಂಗಡಿಯವನು ________ ನುಡಿದನು. (ಜಂಭ)

ಇ. ನನ್ನ ಅಂಗಡಿಯಲ್ಲಿ ________ ಬೆಲೆ. (ವಾಸನೆ)

ಈ. ಬಾಲಕ ________ ನಾಣ್ಯಗಳನ್ನು ಹೊರಗೆ ತೆಗೆದನು. (ಜೇಬು)

೪. ಮಾದರಿಯಂತೆ ಉಳಿದ ರೂಪಗಳನ್ನು ಹೇಳಿರಿ.

ಮಾದರಿ: ಹೋಗು – ಹೋಗುತ್ತಿದ್ದನು, ಮಾದರಿ: ಸೇವಿಸು – ಸೇವಿಸಿದ್ದು

ಗದರಿಸು –	ಕೇಳಿಸು –
ಗಮನಿಸು –	ತೋರಿಸು –
ಕಳುಹಿಸು –	ಹಾರಿಸು –
ಸೇವಿಸು –	ಮಾತನಾಡಿಸು –

೫. ಮಾದರಿಯಂತೆ ಎರಡೆರಡು ವಾಕ್ಯಗಳನ್ನು ರಚಿಸಿ.

ಮಾದರಿ: ಬಾಲಕ ಜಾಣ

ಅಂಗಡಿಯವ ಬಾಲಕನ ಜಾಣತನವನ್ನು ಮೆಚ್ಚಿಕೊಂಡನು.

ಅ. ದೊಡ್ಡ – ದೊಡ್ಡತನ.

ಆ. ತುಂಟ – ತುಂಟತನ.

ಇ. ಚುರುಕು – ಚುರುಕುತನ.

ಈ. ಒಳ್ಳೆಯ – ಒಳ್ಳೆಯತನ.

೬. ಮಾದರಿಯಂತೆ ವಾಕ್ಯಗಳನ್ನು ಸೇರಿಸಿ.

ಮಾದರಿ: ಅವನಿಗೆ ಹಣ್ಣು ಕೊಟ್ಟನು. ಅವನನ್ನು ಕಳುಹಿಸಿದನು.
ಅವನಿಗೆ ಹಣ್ಣು ಕೊಟ್ಟು ಕಳುಹಿಸಿದನು.

ಅ. ಶಾಮು ಹೊಸ ಬಟ್ಟೆ ತೊಟ್ಟನು. ಶಾಲೆಗೆ ಹೊರಟನು.

ಆ. ಅವರು ರೊಟ್ಟಿ ಸುಟ್ಟರು. ಹಾಲು ಕಾಯಿಸಿದರು.

ಇ. ಅವನು ತುಂಡು ಪಂಚೆ ಉಟ್ಟನು. ನೀರಿಗೆ ಇಳಿದನು.

ಸೂಚನೆ: 'ಗೆರೆಯನ್ನು ಅಳಿಸದೆ ಚಿಕ್ಕದು ಮಾಡಿದ ಬಾಲಕನ ಕಥೆ' ಹಾಗೂ ನ್ಯಾಯ, ಬುದ್ಧಿವಂತಿಕೆಯ ಬಗ್ಗೆ ಹೇಳಬಹುದು. ಝಣಝಣ ದಂತಹ ಹಲವಾರು ಅನುಕರಣ ಪದಗಳನ್ನೂ ಪರಿಚಯಿಸಬಹುದು.

ತೆಂಗು

ನೇರವಾಗಿ ತಲೆಯೆತ್ತಿ
ಬೆಳೆಯುವವ ನಾನು!
ನಾರಿಕೇಳ! ಕಲ್ಪವೃಕ್ಷ
ತೆಂಗಿನ ಮರ ನಾನು!

ರೆಂಬೆಯಿಲ್ಲ! ಕೊಂಬೆಯಿಲ್ಲ!
ತಲೆಯ ತುಂಬ ಗರಿ!
ನಡುನಡುವೆ ಕಾಯ್‌ಗೊಂಚಲು!
ನೋಡಿದೀಯ ಮರಿ?

ಕೆಳಗೆ ಉಪ್ಪು ನೀರು ಕುಡಿವೆ!
ಮೇಲೆ ಎಳನೀರು ಕೊಡುವೆ!
ನಾನಿಲ್ಲದೆ ಅಡಿಗೆಯಿಲ್ಲ!
ತಿಂದಿದೀಯ ಕೊಬರಿಬೆಲ್ಲ?

ತಾಂಬೂಲಕೆ ನಾನೆ ಫಲ!
ಹೊರಗೆ ಕರಟ, ಒಳಗೆ ಜಲ!
ನನ್ನ ನೋಡಿ ನೀನು ಕಲಿ!
ನನ್ನ ಹಾಗೇ ನೀನೂ ಬೆಳಿ!

— ಜಿ.ಪಿ. ರಾಜರತ್ನಂ

ಅಭ್ಯಾಸ

೧. ಈ ಪ್ರಶ್ನೆಗಳಿಗೆ ಉತ್ತರಿಸಿ.

ಅ. ತೆಂಗಿನ ಮರಕ್ಕೆ ಬೇರೆ ಯಾವ ಯಾವ ಹೆಸರುಗಳಿವೆ?

ಆ. ತೆಂಗಿನ ಮೇಲ್ಭಾಗ ಹೇಗಿದೆ?

ಇ. ತೆಂಗಿನ ಮರ ಏನನ್ನು ಕುಡಿಯುತ್ತದೆ?

ಈ. ಜನರಿಗೆ ತೆಂಗಿನ ಮರ ಹೇಗೆ ಉಪಕಾರಿ?

ಉ. ತೆಂಗಿನ ಮರದಿಂದ ಕಲಿಯಬೇಕಾದುದು ಏನು?

೨. ಓದಿ.

ಅ. ಕೊಬರಿ – ಕೊಬ್ಬರಿ; ಎಳನೀರು – ಸೀಯಾಳ; ವೃಕ್ಷ – ಮರ;
ಕರಟ – ತೆಂಗಿನಕಾಯಿಯ ಚಿಪ್ಪು;
ಕಲ್ಪವೃಕ್ಷ – ತುಂಬ ಪ್ರಯೋಜನಕಾರಿಯಾದ ಮರ.

ಆ. ರೆಂಬೆಯಿಲ್ಲ – ಕೊಂಬೆಯಿಲ್ಲ; ಕುಡಿವೆ – ಕೊಡುವೆ;
ಅಡಿಗೆಯಿಲ್ಲ – ಕೊಬರಿ ಬೆಲ್ಲ; ಫಲ – ಜಲ; ಗರಿ – ಮರಿ.

ಇ. ನಡುವೆ ನಡುವೆ – ನಡುನಡುವೆ.
ಕುಡಿವೆ – ಕುಡಿಯುವೆ.
ನೋಡಿದೀಯ – ನೋಡಿದ್ದೀಯಾ.
ತಿಂದಿದೀಯ – ತಿಂದಿದ್ದೀಯಾ.
ತಾಂಬೂಲಕೆ – ತಾಂಬೂಲಕ್ಕೆ.

೩. ಕೂಡಿಸಿದಂತೆ ಓದಿ.

ತಲೆ + ಎತ್ತಿ – ತಲೆಯೆತ್ತಿ, ನಾನು + ಇಲ್ಲದೆ – ನಾನಿಲ್ಲದೆ
ರೆಂಬೆ + ಇಲ್ಲ – ರೆಂಬೆಯಿಲ್ಲ, ನೀನು + ಇಲ್ಲದೆ – ನೀನಿಲ್ಲದೆ
ಕೊಂಬೆ + ಇಲ್ಲ – ಕೊಂಬೆಯಿಲ್ಲ, ಅವರು + ಇಲ್ಲದೆ – ಅವರಿಲ್ಲದೆ

೪. ಬಿಟ್ಟ ಸಾಲುಗಳನ್ನು ಪೂರ್ಣಗೊಳಿಸಿರಿ.

ಅ. ಕೆಳಗೆ ________________	ಆ. ತಾಂಬೂಲಕೆ ______________
______________________	___________________________
______________________	___________________________
______________ ಬೆಲ್ಲ?	______________ ಬೆಳೆ.

೫. ತೆಂಗಿನ ಮರಕ್ಕೆ 'ಕಲ್ಪವೃಕ್ಷ' ಎಂದು ಏಕೆ ಕರೆಯುತ್ತಾರೆ?

ನಮ್ಮೂರ ಸಂತೆ

ನಮ್ಮೂರಿನಲ್ಲಿ ಪ್ರತಿ ರವಿವಾರ ಸಂತೆ ನಡೆಯುತ್ತದೆ. ಸುತ್ತಮುತ್ತಲಿನ ಹಳ್ಳಿಗಳಿಂದ ಜನರು ಬರುತ್ತಾರೆ. ಎತ್ತಿನ ಬಂಡಿಯ ಘಲ್ ಘಲ್ ಶಬ್ದ ನಸುಕಿಗೇ ಆರಂಭವಾಗುತ್ತದೆ. ಬುಟ್ಟಿಗಳನ್ನು ಹೊತ್ತು ಬರುವವರ ಮಾತಿನ ಸದ್ದೂ ಅದಕ್ಕೆ ಸೇರುತ್ತದೆ.

ಬಂದವರೆಲ್ಲ ಸಂತೆಮಾಳದಲ್ಲಿ ಸೇರುತ್ತಾರೆ. ಅಲ್ಲಿ ಅಂಗಡಿಗಳ ಸಾಲೇ ಸಾಲು. ಒಂದೆಡೆ ಕಾಳುಕಡಿಗಳ ಅಂಗಡಿಗಳು. ಇನ್ನೊಂದೆಡೆ ಘಮಘಮಿಸುವ ಹೂವು ಹಣ್ಣಿನ ಅಂಗಡಿಗಳು. ಮತ್ತೊಂದೆಡೆ ಬಳೆ, ಬಟ್ಟೆ, ವಿವಿಧ ಬಗೆಯ ಆಟಿಕೆಗಳ ಅಂಗಡಿಗಳು.

ಸಂತೆಯೆಂದರೆ ಗದ್ದಲ ಗಡಿಬಿಡಿ. ಎಲ್ಲರಿಗೂ ಮಾರುವ ಕೊಳ್ಳುವ ಆತುರ. ಜನರು ತಾವು ಬೆಳೆದ ಕಾಳಕಡಿಗಳನ್ನು ಮಾರುತ್ತಾರೆ. ತಮ್ಮ

ಮನೆಗಳಿಗೆ ಬೇಕಾದ ಪದಾರ್ಥಗಳನ್ನು ಕೊಂಡುಕೊಳ್ಳುತ್ತಾರೆ. ಇಲ್ಲಿ ದಿನ ಬಳಕೆಯ ಎಲ್ಲ ಸಾಮಾನುಗಳೂ ಸಿಗುತ್ತವೆ. ಸಣ್ಣಪುಟ್ಟ ಊರುಗಳಲ್ಲಿ ಒಂದೆರಡು ಅಂಗಡಿಗಳಿರುತ್ತವೆ. ನಮಗೆ ಬೇಕಾದ ಎಲ್ಲ ಪದಾರ್ಥಗಳೂ ಅಲ್ಲಿ ಸಿಗುವುದಿಲ್ಲ. ಸಂತೆಯಲ್ಲಾದರೆ ನಮಗೆ ಅಗತ್ಯವಾದ ಎಲ್ಲ ಪದಾರ್ಥಗಳನ್ನೂ ಕೊಳ್ಳಬಹುದು.

ಸಂತೆಯಲ್ಲಿ ಮನೋರಂಜನೆಯೂ ಉಂಟು. ಹಾವಾಡಿಗರು, ಕರಡಿ ಕುಣಿಸುವವರು, ಗರ್ದಿಗಮ್ಮತ್ತಿನವರು ಇರುತ್ತಾರೆ. ಅಲ್ಲೆಲ್ಲಾ ಮಕ್ಕಳ ಸಂತೆಯೇ ಸಂತೆ.

ಸಂಜೆಯಾಗುತ್ತಲೆ ಸಂತೆ ಕರಗುವುದು. ಜನರು ತಮ್ಮ ತಮ್ಮ ಊರುಗಳಿಗೆ ಹೊರಡುವರು. ಎತ್ತಿನ ಬಂಡಿಯ ಘಲ್ ಘಲ್ ಶಬ್ದ ಮತ್ತೆ ಪ್ರಾರಂಭ.

ಅಭ್ಯಾಸ

೧. ಈ ಪ್ರಶ್ನೆಗಳಿಗೆ ಉತ್ತರಿಸಿ.

ಅ. ಸಂತೆ ಎಂದು ನಡೆಯುತ್ತದೆ?

ಆ. ಎತ್ತಿನ ಬಂಡಿಗಳ ಶಬ್ದ ಯಾವಾಗ ಆರಂಭವಾಗುತ್ತದೆ?

ಇ. ಸಂತೆ ಎಲ್ಲಿ ಸೇರುತ್ತದೆ?

ಈ. ಸಂತೆಯಲ್ಲಿ ಯಾವ ಯಾವ ಅಂಗಡಿಗಳು ಇರುತ್ತವೆ?

ಉ. ಸಂತೆಯಲ್ಲಿ ಜನರು ಏನನ್ನು ಕೊಳ್ಳುತ್ತಾರೆ?

ಊ. ಸಂತೆಯಲ್ಲಿ ಯಾವ ಯಾವ ಮನೋರಂಜನೆಗಳು ಇರುತ್ತವೆ?

೨. ಓದಿ.

ಅ. ಸುತ್ತಮುತ್ತ, ಸಾಲೇಸಾಲು, ಕಾಳುಕಡಿ, ಘಮಘಮಿಸು, ಗದ್ದಲ, ಪದಾರ್ಥ, ಗರ್ದಿಗಮ್ಮತ್ತು, ಘಲ್‌ಘಲ್.

ಆ. ಬಂದವರೆಲ್ಲ ಸಂತೆಮಾಳದಲ್ಲಿ ಸೇರುತ್ತಾರೆ.
ಸಂಜೆಯಾಗುತ್ತಲೆ ಸಂತೆ ಕರಗುವುದು.
ಅಲ್ಲೆಲ್ಲ ಮಕ್ಕಳ ಸಂತೆಯೇ ಸಂತೆ.

೩. ಬಿಡಿಸಿದಂತೆ ಓದಿ.

ನಮ್ಮೂರಿನಲ್ಲಿ – ನಮ್ಮ + ಊರಿನಲ್ಲಿ
ಬಂದವರೆಲ್ಲ – ಬಂದವರು + ಎಲ್ಲ
ಸಂತೆಯೆಂದರೆ – ಸಂತೆ + ಎಂದರೆ
ಸಂಜೆಯಾಗುತ್ತಲೆ – ಸಂಜೆ + ಆಗುತ್ತಲೆ
ಆರಂಭವಾಗುತ್ತದೆ – ಆರಂಭ + ಆಗುತ್ತದೆ

೪. ಖಾಲಿ ಬಿಟ್ಟ ಸ್ಥಳಗಳಲ್ಲಿ ಸರಿಯಾದ ಪದವನ್ನು ತುಂಬಿ.

ಅ. ಸುತ್ತಮುತ್ತಲಿನ ________ ಜನರು ಬರುತ್ತಾರೆ.
(ಹಳ್ಳಿಗಳಿಂದ, ಹಳ್ಳಿಗಳಲ್ಲಿ)

ಆ. ಬಂದವರೆಲ್ಲ ________ ಸೇರುತ್ತಾರೆ.
(ಸಂತೆಮಾಳದಿಂದ, ಸಂತೆಮಾಳದಲ್ಲಿ)

ಇ. ತಮ್ಮ ________ ಬೇಕಾದ ಪದಾರ್ಥಗಳನ್ನು ಕೊಂಡುಕೊಳ್ಳುತ್ತಾರೆ.
(ಮನೆಗಳ, ಮನೆಗಳಿಗೆ)

೫. ಮಾದರಿಯಂತೆ ಉಳಿದ ರೂಪಗಳನ್ನು ಹೇಳಿರಿ.

ಮಾದರಿ: ಮಾರು – ಮಾರುವ
ಕೊಳ್ಳು –
ಸಿಗು –
ಕರಗು –

೬. ಓದಿ. ವಾಕ್ಯಗಳಲ್ಲಿ ಬಳಸಿ.

ಬರು – ಬಂದವರು – ಬರುವವರು
ಕೊಳ್ಳು – ಕೊಂಡವರು – ಕೊಳ್ಳುವವರು
ಹೊರಡು – ಹೊರಟವರು – ಹೊರಡುವವರು
ಸೇರು – ಸೇರಿದವರು – ಸೇರುವವರು

ಮಾದರಿ: ಅ. ಅವರು ಊರಿಗೆ ಬರುತ್ತಾರೆ.
ಆ. ಊರಿಗೆ ಬಂದವರು ಹಿಂದಿರುಗುತ್ತಾರೆ.
ಇ. ನಾಳೆ ನಿಮ್ಮ ಊರಿಗೆ ಬರುವವರು ಯಾರು?

ಸೂಚನೆ: ವಸ್ತುಪ್ರದರ್ಶನ, ಜಾತ್ರೆ ಮುಂತಾದವುಗಳ ವಿವರಗಳನ್ನು ನೀಡಿ ಅವುಗಳ ಉಪಯುಕ್ತತೆಯ ಬಗ್ಗೆ ತಿಳಿಸಬಹುದು. ಸಂತೆಗೆ ಮಕ್ಕಳನ್ನು ಕರೆದುಕೊಂಡು ಹೋಗಿ ಅದರ ಪೂರ್ಣ ವಿವರಣೆಯನ್ನು ಒದಗಿಸಬಹುದು. ಸಂತೆಯಲ್ಲಿ ಮಾರುವ ಧಾನ್ಯ, ಆಟಿಕೆ, ಹಣ್ಣು ಹೂವುಗಳ ಹೆಸರುಗಳು, ಹೋಗುತ್ತಾರೆ, ಬರುತ್ತಾರೆ ಮುಂತಾದವು ಹೋಗು, ಬರುಗಳ ವರ್ತಮಾನಕಾಲದ ರೂಪಗಳಾಗಿರುವುದರಿಂದ ಇತರ ಕ್ರಿಯಾಪದಗಳ ಇದೇ ರೀತಿಯ ರೂಪಗಳನ್ನು ಪರಿಚಯಿಸಿ. ಸಹಜೀವನ, ಸಹಕಾರ ಮನೋಭಾವನೆ, ಸಮುದಾಯ ಜೀವನ ಮುಂತಾದವುಗಳ ಬಗ್ಗೆಯೂ ಹೇಳಬಹುದು. ಪ್ರತಿದಿನವೂ ಹತ್ತು ಹೊಸ ಪದಗಳನ್ನು ಪ್ರತಿಮಾಡಿಕೊಂಡು ಬರಲು ಮಕ್ಕಳಿಗೆ ತಿಳಿಸಬೇಕು.

ಸೋಮ ಭೀಮ

ಒಂದು ಊರಿನಲ್ಲಿ ಒಬ್ಬ ಮುದುಕನಿದ್ದನು. ಅವನಿಗೆ ಸೋಮ ಭೀಮ ಎಂಬ ಇಬ್ಬರು ಮಕ್ಕಳಿದ್ದರು. ಕೆಲವು ದಿನಗಳ ನಂತರ ಮುದುಕನು ತೀರಿಕೊಂಡನು.

ಮನೆಯಲ್ಲಿ ಒಂದು ಆಕಳಿತ್ತು. ಅಣ್ಣನಾದ ಸೋಮ ತಮ್ಮನಿಗೆ "ಭೀಮಾ, ಈ ಆಕಳನ್ನು ನಾವಿಬ್ಬರೂ ಹಂಚಿಕೊಳ್ಳೋಣ. ಇದರ ಮುಂದಿನ ಭಾಗ ನಿನ್ನದು, ಹಿಂದಿನ ಭಾಗ ನನ್ನದು." ಎಂದನು. ಭೀಮನು ಒಪ್ಪಿದನು.

ಅಂದಿನಿಂದ ಭೀಮನು ಆಕಳನ್ನು ಚೆನ್ನಾಗಿ ಮೇಯಿಸತೊಡಗಿದನು. ಸೋಮನು ನಿತ್ಯವೂ ಹಾಲು ಕರೆಯುತ್ತಿದ್ದನು. ಹಾಲನ್ನು ತಾನೇ ಉಪಯೋಗಿಸುತ್ತಿದ್ದನು. ತಮ್ಮನಿಗೆ ಕೊಡುತ್ತಿರಲಿಲ್ಲ. ಇದರಿಂದ ಭೀಮನಿಗೆ ಬೇಸರವಾಯಿತು.

ಭೀಮನು ಗೆಳೆಯನಲ್ಲಿ ತನ್ನ ಅಳಲನ್ನು ತೋಡಿಕೊಂಡನು. ಅವನು ಭೀಮನಿಗೆ ಒಂದು ಉಪಾಯವನ್ನು ಹೇಳಿಕೊಟ್ಟನು. "ಸರಿ ನೀನು ಹೇಳಿದಂತೆಯೇ ಮಾಡುವೆ" ಎಂದನು ಭೀಮ.

ಮರುದಿನ ಎಂದಿನಂತೆ ಅಣ್ಣನು ಹಾಲು ಕರೆಯುತ್ತಿದ್ದನು. ಆಗ ಭೀಮನು ಆಕಳ ಕೊಂಬು ಹಿಡಿದು ಜಗ್ಗಿದನು. ಹಸು ಗಾಬರಿಯಿಂದ ಸೋಮನಿಗೆ ಒದೆಯಿತು. ಹಾಲು ಚೆಲ್ಲಿತು. ಸೋಮನು ಸಿಟ್ಟಿನಿಂದ ಭೀಮನನ್ನು ಗದರಿಸಿದನು.

"ಅಣ್ಣಾ, ಆಕಳ ಮುಂದಿನ ಭಾಗ ನನ್ನದಲ್ಲವೇ? ನನ್ನ ಭಾಗದಲ್ಲಿ ಮನಬಂದಂತೆ ಮಾಡುವೆ. ಆ ಸ್ವಾತಂತ್ರ್ಯ ನನಗಿದೆ" ಎಂದನು ಭೀಮ. ಸೋಮನು ಪೇಚಿಗೆ ಸಿಕ್ಕಿಬಿದ್ದನು. ಅವನಿಗೆ ತಾನು ಮಾಡಿದ ಅನ್ಯಾಯದ ಅರಿವಾಯಿತು.



ಅಂದಿನಿಂದ ತಮ್ಮನಿಗೂ ಹಾಲಿನಲ್ಲಿ ಅರ್ಧಭಾಗ ಕೊಡತೊಡಗಿದನು. ಅಣ್ಣತಮ್ಮಂದಿರು ಪ್ರೀತಿಯಿಂದ ಬಾಳಿದರು.

ಅಭ್ಯಾಸ

೧. ಈ ಪ್ರಶ್ನೆಗಳಿಗೆ ಉತ್ತರಿಸಿ.

ಅ. ಮುದುಕನಿಗೆ ಎಷ್ಟು ಜನ ಮಕ್ಕಳಿದ್ದರು?

ಆ. ಮಕ್ಕಳು ಆಕಳನ್ನು ಹೇಗೆ ಹಂಚಿಕೊಂಡರು?

ಇ. ಭೀಮನಿಗೆ ಬೇಸರವಾಗಲು ಕಾರಣವೇನು?

ಈ. ಗೆಳೆಯನು ಭೀಮನಿಗೆ ತಿಳಿಸಿದ ಉಪಾಯವೇನು?

ಉ. ಸೋಮನು ಭೀಮನನ್ನು ಏಕೆ ಗದರಿಸಿದನು?

ಊ. ಸೋಮ ಏಕೆ ಪೇಚಿಗೆ ಸಿಕ್ಕಿಬಿದ್ದನು?

ಋ. ಗೆಳೆಯನ ಉಪಾಯದ ಫಲವೇನು?

೨. ಓದಿ.

ಅ. ಹಂಚಿಕೊಳ್ಳು, ಅಳಲು, ತೋಡಿಕೊಳ್ಳು, ಅನ್ಯಾಯ, ಅರ್ಧಭಾಗ.

ಆ. ಈ ಆಕಳನ್ನು ನಾವಿಬ್ಬರೂ ಹಂಚಿಕೊಳ್ಳೋಣ.
ಆಕಳ ಮುಂದಿನ ಭಾಗ ನನ್ನದಲ್ಲವೇ?

೩. ಖಾಲಿ ಬಿಟ್ಟ ಸ್ಥಳಗಳಲ್ಲಿ ಪದಗಳ ಸರಿಯಾದ ರೂಪವನ್ನು ತುಂಬಿ.

ಅ. ಭೀಮನು ________ ತನ್ನ ಅಳಲನ್ನು ತೋಡಿಕೊಂಡನು. (ಗೆಳೆಯ)
ಆ. ಹಸು ________ ಸೋಮನಿಗೆ ಒದೆಯಿತು. (ಗಾಬರಿ)
ಇ. ಭೀಮನು ಆಕಳ ಕೊಂಬು ಹಿಡಿದು ________. (ಜಗ್ಗು)
ಈ. ನಾವಿಬ್ಬರೂ ಆಕಳನ್ನು ________. (ಹಂಚಿಕೊಳ್ಳು)

೪. ಮಾದರಿಯಂತೆ ಬದಲಾಯಿಸಿ.

ಮಾದರಿ: ತಮ್ಮ – ತಮ್ಮಂದಿರು, ಮಾದರಿ : ಎಂದು – ಎಂದಿನಂತೆ

ಅಣ್ಣ	–	ಅಂದು	–
ಅಕ್ಕ	–	ಇಂದು	–
ಅಜ್ಜ	–	ಹಿಂದು	–
ಭಾವ	–	ಅಲ್ಲಿ	–

೫. ಮಾದರಿಯಂತೆ ವಾಕ್ಯಗಳನ್ನು ಬದಲಾಯಿಸಿ.

ಮಾದರಿ: ಆಕಳ ಮುಂದಿನ ಭಾಗ ನನ್ನದು.
ಆಕಳ ಮುಂದಿನ ಭಾಗ ನನ್ನದಲ್ಲವೇ?

ಅ. ಈ ಪುಸ್ತಕ ಅವನದು.
ಆ. ಅಲ್ಲಿ ಕಾಣುವ ಕಚೇರಿ ನಮ್ಮದು.
ಇ. ಈ ಹಣದ ಚೀಲ ತಮ್ಮದು.
ಈ. ನಾವು ನೋಡಿದ ಪೆನ್ನು ಅವರದು.

೬. ಮಾದರಿಯಂತೆ ಎರಡು ವಾಕ್ಯಗಳನ್ನು ರಚಿಸಿ.

ಮಾದರಿ: ಭೀಮನು ಆಕಳನ್ನು ಮೇಯಿಸತೊಡಗಿದನು.

ಸೂಚನೆ: ಬಾಳೆ ಹಾಗೂ ಗೆಣಸಿನ ಬೆಳೆ ಹಂಚಿಕೊಂಡ ಕರಡಿ ಮತ್ತು ನರಿಯ ಕಥೆ ಹೇಳಬಹುದು. ಅಣ್ಣತಮ್ಮಂದಿರು ಹಂಚಿಕೊಳ್ಳು, ಮೇಯಿಸತೊಡಗು, ಹೇಳಿಕೊಡು ಮುಂತಾದ ರೂಪಗಳ ಬಳಕೆ, ಸಮಾನತೆ, ನ್ಯಾಯಪರತೆ, ಸಹಬಾಳ್ವೆಗಳ ಮಹತ್ವಗಳ ಬಗ್ಗೆ ಮಕ್ಕಳಿಗೆ ತಿಳಿಸಬಹುದು.

ಪಾಠ ೧೨

ಆಮೆ

ಆಮೆಯೊಂದು ಕೆರೆಯ ದಡದಿ
ಮನೆಯ ಮಾಡಿತು
ಹಕ್ಕಿಯಂತೆ ಹಾರಬೇಕು
ಎಂದು ಬಯಸಿತು.
ಹಕ್ಕಿ ಜೊತೆಗೆ ಸಂಗಮಾಡಿ
ಆಸೆ ತಿಳಿಸಿತು
ಹಕ್ಕಿ ಹೇಳಿದಂತೆ ಆಮೆ
ಕೇಳಲೊಪ್ಪಿತು.



ಅತ್ತ ಇತ್ತ ಹಕ್ಕಿ ಎರಡು
ಬಡಿಗೆ ಹಿಡಿದುವು
ಆಮೆ ಅದಕೆ ಜೋತು ಬೀಳೆ
ಹಾರಿ ಹೋದುವು.
ದಾರಿಯಲ್ಲಿ ಇದನು ಕಂಡು
ಜನರು ನಕ್ಕರು
ಮಾನ ಹೋಯಿತೆಂದು ಆಮೆ
ಮನದಿ ಕುದಿಯಿತು.

ನಕ್ಕ ಜನರ ಬಯ್ಯಲೆಂದು
ಬಾಯಿ ತೆರೆಯಿತು
ಮೇಲಿನಿಂದ ಕೆಳಗೆ ಬಿದ್ದು
ಸತ್ತು ಹೋಯಿತು.

— ಗಿರಿರಾಜ ಹೊಸಮನಿ

ಅಭ್ಯಾಸ

೧. ಈ ಪ್ರಶ್ನೆಗಳಿಗೆ ಉತ್ತರಿಸಿ.

ಅ. ಆಮೆ ಎಲ್ಲಿ ಮನೆ ಮಾಡಿತು?

ಆ. ಆಮೆ ಏನೆಂದು ಬಯಸಿತು?

ಇ. ಹಕ್ಕಿಗಳು ಆಮೆಗೆ ಏನೆಂದು ಹೇಳಿದುವು?

ಈ. ಹಕ್ಕಿಗಳು ಆಮೆಯನ್ನು ಹೇಗೆ ಎತ್ತಿಕೊಂಡು ಹಾರಿದುವು?

ಉ. ಆಮೆ ಮನಸ್ಸಿನಲ್ಲಿ ಕುದಿಯಲು ಕಾರಣವೇನು?

ಊ. ಆಮೆ ಯಾವಾಗ ಕೆಳಗೆ ಬಿದ್ದುಬಿಟ್ಟಿತು?

೨. ಓದಿ.

ಅ. ಸಂಗ — ಜೊತೆ, ಸ್ನೇಹ; ಬಡಿಗೆ — ಕೋಲು, ದೊಣ್ಣೆ; ಬಯಸು — ಆಸೆಪಡು.

ಆ. ಮಾಡಿತು — ಬಯಸಿತು; ತಿಳಿಸಿತು — ಒಪ್ಪಿತು; ಹಿಡಿದವು — ಹೋದವು; ತೆರೆಯಿತು — ಹೋಯಿತು.

ಇ. ಮನೆಯನ್ನು — ಮನೆಯ, ಅದಕ್ಕೆ — ಅದಕೆ, ಇದನ್ನು — ಇದನು, ಬೀಳೆ — ಬೀಳಲು.

೩. ಮಾದರಿಯಂತೆ ಉಳಿದ ರೂಪಗಳನ್ನು ಬರೆಯಿರಿ.

ಮಾದರಿ: ಕೆರೆಯ ದಡದಿ ಮನೆಯ ಮಾಡಿತು.
ಕೆರೆಯ ದಡದಲ್ಲಿ ಮನೆಯನ್ನು ಮಾಡಿತು.

ಅ. ಆಮೆ ಅದಕ್ಕೆ ಜೋತು ಬೀಳೆ ಹಾರಿ ಹೋದವು.

ಆ. ಮಾನ ಹೋಯಿತೆಂದು ಆಮೆ ಮನದಿ ಕುದಿಯಿತು.

೪. ಬಿಟ್ಟ ಸಾಲುಗಳನ್ನು ಪೂರ್ತಿಗೊಳಿಸಿ.

ಅ. ಹಕ್ಕಿಯಂತೆ __________ ಆ. ಅತ್ತ ಇತ್ತ __________

__________ __________

__________ ಬಯಸಿತು. __________ ಹಿಡಿದವು.

೫. ಈ ಪದ್ಯದ ಕಥೆಯನ್ನು ಹೇಳಿ.

ಪಾಠ ೧೩

ಅವಸರವೇ ಅಪಾಯ

ಜಾನಿ ಶಾಲೆಗೆ ಹೋಗುತ್ತಿದ್ದನು. ರಸ್ತೆಯ ಆಚೆ ಬದಿಯಿಂದ ಹುಸೇನ ಆತನನ್ನು ಕರೆದನು. ಜಾನಿ ಅವಸರದಿಂದ ರಸ್ತೆ ದಾಟಲು ಓಡಿದನು. ಎದುರಿನಿಂದ ಬರುತ್ತಿದ್ದ ಸೈಕಲ್ಲಿಗೆ ಢಿಕ್ಕಿಹೊಡೆದು ಬಿದ್ದುಬಿಟ್ಟನು. ಅವನ ಕಾಲಿಗೆ ಪೆಟ್ಟಾಯಿತು. ಕುಂಟುತ್ತಲೇ ಶಾಲೆಗೆ ಬಂದನು.

ಉಪಾಧ್ಯಾಯರು ಜಾನಿಯ ಕಾಲಿನ ಗಾಯವನ್ನು ಗಮನಿಸಿದರು. ಔಷಧ ಹಚ್ಚಿದರು. ಪೆಟ್ಟು ಹೇಗಾಯಿತೆಂದು ಜಾನಿಯನ್ನು ಕೇಳಿದರು. ಜಾನಿ ನಡೆದುದನ್ನು ಹೇಳಿದನು.

ಅನಂತರ ಉಪಾಧ್ಯಾಯರು ಮಕ್ಕಳನ್ನು ಕುರಿತು "ಮಕ್ಕಳೇ ರಸ್ತೆಯ ಮೇಲೆ ಅನೇಕ ವಾಹನಗಳು ಓಡಾಡುತ್ತಿರುತ್ತವೆ. ರಸ್ತೆ ದಾಟುವಾಗ ಎರಡೂ ಕಡೆ ನೋಡಿ ದಾಟಬೇಕು. ಒಮ್ಮೆಲೆ ನುಗ್ಗಬಾರದು. ರಸ್ತೆಯ

ಬದಿಯಲ್ಲಿಯೇ ನಡೆಯಬೇಕು. ನಡುರಸ್ತೆಯಲ್ಲಿ ಯಾರೊಡನೆಯೂ ಮಾತನಾಡುತ್ತ ನಿಲ್ಲಬಾರದು. ರಸ್ತೆಯಲ್ಲಿ ಆಟವಾಡಬಾರದು. ಶಾಲೆ ಬಿಟ್ಟೊಡನೆ ಓಡಬಾರದು. ನಿಧಾನವಾಗಿ ಒಬ್ಬೊಬ್ಬರಾಗಿ ಹೊರಗೆ ಹೋಗಬೇಕು" ಎಂದು ತಿಳಿಯಹೇಳಿದರು.

ಮಕ್ಕಳು "ಹಾಗೆಯೇ ಆಗಲಿ ಗುರುಗಳೇ. ನಾವು ಎಚ್ಚರಿಕೆ ವಹಿಸುವೆವು" ಎಂದರು.

"ಅವಸರವೇ ಅಪಾಯಕ್ಕೆ ಕಾರಣ. ಅರಿತು ನಡೆದರೆ ಅಪಾಯವಿಲ್ಲ" ಎಂದರು ಉಪಾಧ್ಯಾಯರು.

ಅಭ್ಯಾಸ

೧. ಈ ಪ್ರಶ್ನೆಗಳಿಗೆ ಉತ್ತರಿಸಿ.

ಅ. ಜಾನಿ ಎಲ್ಲಿಗೆ ಹೋಗುತ್ತಿದ್ದನು?
ಆ. ಹುಸೇನ ಎಲ್ಲಿ ಹೋಗುತ್ತಿದ್ದನು?
ಇ. ಜಾನಿಯ ಕಾಲಿಗೆ ಪೆಟ್ಟು ಹೇಗಾಯಿತು?
ಈ. ರಸ್ತೆ ದಾಟುವಾಗ ಯಾವ ಎಚ್ಚರಿಕೆ ವಹಿಸಬೇಕು?
ಉ. ನಡುರಸ್ತೆಯಲ್ಲಿ ಏಕೆ ಮಾತನಾಡುತ್ತ ನಿಲ್ಲಬಾರದು?
ಊ. ಶಾಲೆಯಿಂದ ಹೊರಗೆ ಹೋಗುವಾಗ ಹೇಗೆ ಹೋಗಬೇಕು?
ಋ. ಅಪಾಯಕ್ಕೆ ಯಾವುದು ಕಾರಣ?

೨. ಓದಿ.

ಅ. ಅವಸರ, ಒಮ್ಮೆಲೆ, ಒಬ್ಬೊಬ್ಬರಾಗಿ, ಎಚ್ಚರಿಕೆ, ನಿಧಾನ.
ಆ. ಪೆಟ್ಟು ಹೇಗಾಯಿತೆಂದು ಜಾನಿಯನ್ನು ಕೇಳಿದರು.
ರಸ್ತೆ ದಾಟುವಾಗ ಎರಡೂ ಕಡೆ ನೋಡಿ ದಾಟಬೇಕು.
ಅವಸರವೇ ಅಪಾಯಕ್ಕೆ ಕಾರಣ.
ಕುಂಟುತ್ತಲೇ ಶಾಲೆಗೆ ಬಂದನು.

೩. ಖಾಲಿ ಬಿಟ್ಟ ಸ್ಥಳಗಳಲ್ಲಿ ಸರಿಯಾದ ಪದಗಳನ್ನು ತುಂಬಿ.

ಅ. ರಸ್ತೆಯ ________ ಹುಸೇನ ಜಾನಿಯನ್ನು ಕರೆದನು.

ಆ. ಪೆಟ್ಟು ________ ಉಪಾಧ್ಯಾಯರು ಜಾನಿಯನ್ನು ಕೇಳಿದರು.

ಇ. ರಸ್ತೆಯ ________ ನಡೆಯಬೇಕು.

ಈ. ಶಾಲೆ ________ ಓಡಬಾರದು.

೪. ಮಾದರಿಯಂತೆ ಬದಲಾಯಿಸಿ.

ಮಾದರಿ: ನುಗ್ಗು – ನುಗ್ಗಬಾರದು, ಮಾದರಿ: ಓಡಾಡು – ಓಡಾಡುತ್ತಿರುತ್ತವೆ

ನೋಡು –	ಹಾರಾಡು –
ಮಾಡು –	ಅಲ್ಲಾಡು –
ತಿರುಗು –	ತೂಗಾಡು –
ಕೇಳು –	ತೂರಾಡು –

೫. ಮಾದರಿಯಂತೆ ಬದಲಾಯಿಸಿ.

ಮಾದರಿ: ಅವನು ಕುಂಟುತ್ತ ಶಾಲೆಗೆ ಬಂದನು.
ಅವನು ಕುಂಟುತ್ತಲೇ ಶಾಲೆಗೆ ಬಂದನು.

ಅ. ಶೀಲ ನಗುತ್ತ ಕಥೆ ಹೇಳಿದಳು.

ಆ. ಅವರು ಓಡುತ್ತ ಶಾಲೆಗೆ ಬಂದರು.

ಇ. ಜಾನಿ ಆಡುತ್ತ ಮನೆಗೆ ನಡೆದನು.

ಈ. ಅವಳು ಪುಸ್ತಕ ತೋರಿಸುತ್ತ ನಡೆದುದನ್ನು ತಿಳಿಸಿದಳು.

೬. ರಸ್ತೆಯಲ್ಲಿ ನಡೆಯುವಾಗ ಗಮನದಲ್ಲಿಡಬೇಕಾದ ನಾಲ್ಕು ನಿಯಮಗಳನ್ನು ತಿಳಿಸಿ.

ಸೂಚನೆ: ರಸ್ತೆಯ ನಿಯಮಗಳು ಮತ್ತು ಸಂಕೇತಗಳನ್ನು ವಿವರವಾಗಿ ಮಕ್ಕಳಿಗೆ ತಿಳಿಸಬಹುದು. ಸಾಧ್ಯವಾದಲ್ಲಿ ರಸ್ತೆಯ ಹತ್ತಿರ ಮಕ್ಕಳನ್ನು ಕರೆದುಕೊಂಡು ಹೋಗಿ ಅದನ್ನು ದಾಟುವ ವಿಧಾನ, ನಿಯಮಗಳನ್ನು ಅನುಸರಿಸಿ ನಡೆಯುವ ಅಂಶಗಳನ್ನು ಪ್ರಾಯೋಗಿಕವಾಗಿ ವಿವರಿಸಬಹುದು. 'ಅಜ್ಜಿಯುನುಡಿ' ಪಾಠದಲ್ಲಿಯಂತೆ ಬಾರದು, ಬೇಕು ರೂಪಗಳನ್ನು ಇನ್ನೂ ಹೆಚ್ಚು ಪದಗಳಿಗೆ ಸೇರಿಸಿ ಬಳಸುವ ರೀತಿ ಮತ್ತು ನಾಗರಿಕತೆ, ಸಾವಧಾನ, ಎಚ್ಚರಿಕೆ ಮುಂತಾದವುಗಳ ಬಗ್ಗೆ ಹೇಳಿಕೊಡಬಹುದು. ಪ್ರತಿದಿನವೂ ಎರಡು ವಾಕ್ಯಗಳನ್ನು ನಕಲು ಮಾಡಿಕೊಂಡು ಬರಲು ಮಕ್ಕಳಿಗೆ ತಿಳಿಸಬೇಕು.

ಹಣತೆ

ಸೂರ್ಯನು ಮುಳುಗುವ ಹೊತ್ತಾಯಿತು. ಅವನು ಮುಳುಗಿದ ಮೇಲೆ ಬೆಳಕು ಇರುವುದಿಲ್ಲ. ಕತ್ತಲ ಹರಡುತ್ತದೆ. ಬೆಳಕು ಇದ್ದರೆ ಜನರಿಗೆ ಅನುಕೂಲವಲ್ಲವೇ?

"ನಾನು ಮುಳುಗಿದ ಮೇಲೆ ಯಾರು ಬೆಳಕು ಕೊಡುವಿರಿ?" ಎಂದು ಸೂರ್ಯನು ಕೇಳಿದನು.

ಚಂದ್ರನು ಸುಮ್ಮನೆ ಇದ್ದನು. ನಕ್ಷತ್ರಗಳು ಮಾತನಾಡಲಿಲ್ಲ. ಸೂರ್ಯನಿಗೆ ದುಃಖವಾಯಿತು.

ಅಷ್ಟರಲ್ಲಿ ಪುಟ್ಟ ಹಣತೆಯೊಂದು "ನಾನು ಬೆಳಕು ಕೊಡುತ್ತೇನೆ. ನನ್ನ ಕೈಲಾದಷ್ಟು ಸಹಾಯ ಮಾಡುತ್ತೇನೆ" ಎಂದು ಹೇಳಿತು.

ಸೂರ್ಯನಿಗೆ ತುಂಬ ಸಂತೋಷವಾಯಿತು. ಅವನು ಪಶ್ಚಿಮದಲ್ಲಿ ಮುಳುಗಿದನು.

ಹಣತೆ ಬೆಳಗಲು ಪ್ರಾರಂಭಿಸಿತು. ಅದನ್ನು ಕಂಡು ಉಳಿದ ಹಣತೆಗಳೂ ಬೆಳಗತೊಡಗಿದುವು. ಬೆಳಕನ್ನು ಕಂಡ ಜನರಿಗೂ ಸಂತೋಷವಾಯಿತು.

ಅಭ್ಯಾಸ

೧. ಈ ಪ್ರಶ್ನೆಗಳಿಗೆ ಉತ್ತರಿಸಿ.

ಅ. ಕತ್ತಲು ಯಾವಾಗ ಹರಡುತ್ತದೆ?
ಆ. ಸೂರ್ಯನು ಏನೆಂದು ಕೇಳಿದನು?
ಇ. ಸೂರ್ಯನಿಗೆ ಏಕೆ ದುಃಖವಾಯಿತು?
ಈ. ಪುಟ್ಟ ಹಣತೆ ಏನೆಂದು ಹೇಳಿತು?
ಉ. ಜನರಿಗೆ ಏಕೆ ಸಂತೋಷವಾಯಿತು?
ಊ. ಉಳಿದ ಹಣತೆಗಳು ಯಾವಾಗ ಬೆಳಗತೊಡಗಿದುವು?

೨. ಓದಿ.

ಅ. ಅನುಕೂಲ, ನಕ್ಷತ್ರ, ಕೈಲಾದಷ್ಟು, ಬೆಳಕು, ಸೂರ್ಯ, ಚಂದ್ರ, ಪಶ್ಚಿಮ, ಪ್ರಾರಂಭ.
ಆ. ಬೆಳಕು ಇದ್ದರೆ ಜನರಿಗೆ ಅನುಕೂಲವಲ್ಲವೇ?
ಚಂದ್ರನು ಸುಮ್ಮನೇ ಇದ್ದನು.

೩. ಹೊಂದಿಸಿ ಓದಿ.

ಅ. ಸೂರ್ಯ	೧. ಬೆಳಗಲು ಪ್ರಾರಂಭಿಸಿತು.
ಆ. ಚಂದ್ರ	೨. ಸಂತೋಷಗೊಂಡರು.
ಇ. ಹಣತೆ	೩. ಪಶ್ಚಿಮದಲ್ಲಿ ಮುಳುಗಿದನು.
ಈ. ಜನರು	೪. ಸುಮ್ಮನೆ ಇದ್ದನು.
	೫. ಬೆಳಗತೊಡಗಿದುವು.

೪. ಮಾದರಿಯಂತೆ ಬದಲಾಯಿಸಿ.

ಮಾದರಿ: ಮುಳುಗು – ಮುಳುಗುವ, ಮಾದರಿ : ಬೆಳಗು – ಬೆಳಗಲು

ಕೊಡು –	ಮಾಡು –
ಬೆಳಗು –	ಕೂಡು –
ಕೇಳು –	ಹಾರು –
ತಿನ್ನು –	ಪ್ರಾರಂಭಿಸು –

೫. ಮಾದರಿಯಂತೆ ವಾಕ್ಯಗಳನ್ನು ಸೇರಿಸಿ.

ಮಾದರಿ: ಅವನು ಮುಳುಗಿದನು. ಆಮೇಲೆ ಬೆಳಕು ಇರುವುದಿಲ್ಲ.
ಅವನು ಮುಳುಗಿದ ಮೇಲೆ ಬೆಳಕು ಇರುವುದಿಲ್ಲ.

ಅ. ಮುಖ್ಯ ಉಪಾಧ್ಯಾಯರು ಮಾತನಾಡಿದರು. ಆಮೇಲೆ ನಾಟಕ ಪ್ರಾರಂಭವಾಯಿತು.

ಆ. ಗುರುಗಳು ಬಣ್ಣಬಣ್ಣದ ಚಿತ್ರಗಳನ್ನು ತೋರಿಸಿದರು. ಆಮೇಲೆ ಕಥೆ ಹೇಳಿದರು.

ಇ. ರೈತರು ಗದ್ದೆಗೆ ನೀರು ಹಾಯಿಸಿದರು. ಆಮೇಲೆ ಕಳೆ ಕಿತ್ತರು.

ಈ. ತಂದೆ ಮಗನನ್ನು ಶಾಲೆಗೆ ಕಳುಹಿಸಿದರು. ಆಮೇಲೆ ಅಂಚೆ ಕಚೇರಿಗೆ ಹೋದರು.

೬. ಕೊಟ್ಟಿರುವ ಮಾದರಿಯಂತೆ ವಾಕ್ಯಗಳಲ್ಲಿ ಬಳಸಿ.

ಮಾದರಿ: ಸೂರ್ಯನು ಇರುವಾಗ ಬೆಳಕು ಇರುತ್ತದೆ.
ಸೂರ್ಯನು ಮುಳುಗಿದ ಮೇಲೆ ಬೆಳಕು ಇರುವುದಿಲ್ಲ.

ಅ. ಹೋಗುತ್ತದೆ – ಹೋಗುವುದಿಲ್ಲ.

ಆ. ಬರುತ್ತಾನೆ – ಬರುವುದಿಲ್ಲ.

ಇ. ಕೇಳಿಸುತ್ತದೆ – ಕೇಳಿಸುವುದಿಲ್ಲ.

ಈ. ಸಾಗುತ್ತದೆ – ಸಾಗುವುದಿಲ್ಲ.

೭. ಮಾದರಿಯಂತೆ ಉಳಿದ ರೂಪಗಳನ್ನು ಬರೆಯಿರಿ.

ಮಾದರಿ: ದೊಡ್ಡ X ಚಿಕ್ಕ

ಕತ್ತಲು X

ಸಂತೋಷ X

ಸೂಚನೆ: ಇದು ರವೀಂದ್ರನಾಥ ಠಾಗೂರರ ಒಂದು ಪದ್ಯದ ಭಾವ. ಕರ್ತವ್ಯದ ಮಹತ್ವವನ್ನು ಇದು ಸೂಚಿಸುತ್ತದೆ. ಇಲ್ಲಿ 'ಅಳಿಲುಸೇವೆ'ಯ ಕಥೆಯನ್ನು ಹೇಳಬಹುದು. ಜನರಿಗೂ ಹಣತೆಗಳೂ ಮುಂತಾದ ರೂಪಗಳನ್ನೂ, ಕೆಲಸ ಮಾಡಲು ಮುಂದಾಗುವಿಕೆ, ಎಲ್ಲರಿಗೂ ಉಪಕಾರಿಯಾಗಿ ಬಾಳಬೇಕೆಂಬ ಇಚ್ಛೆ ಮುಂತಾದವುಗಳ ಬಗ್ಗೆಯೂ ತಿಳಿಸಬಹುದು. ಸೂರ್ಯ ಪದದಲ್ಲಿನ ರ್ಯ ವನ್ನು ರ್‍ಯ ಎಂದೂ ಬರೆಯಬಹುದು ಎಂಬುದನ್ನು ಗಮನಿಸಿ.

ರೈತನಾಗುವೆ

ಅಪ್ಪನೊಡನೆ ಹೊಲಕೆ ಹೋಗಿ
ದಿನವು ದುಡಿಯುವೆ
ದುಡಿದು ದಣಿದು ದಿನವು ನಾನು
ಬೆವರು ಸುರಿಸುವೆ

ಕರಿಯ ಬಿಳಿಯ ಎತ್ತು ಹೂಡಿ
ಕುಂಟಿ ಹೊಡೆಯುವೆ
ತಾಸು ಹೊತ್ತು ಏರಿ ಬರಲು
ನ್ಯಾರಿ ಮಾಡುವೆ

ಅವ್ವ ಎನಗೆ ನುಚ್ಚು ರೊಟ್ಟಿ
ಬುತ್ತಿ ತರುವಳು
ನೆನೆದ ಕಾಳು ಉಳ್ಳಿಗಡ್ಡಿ
ಅದರಲಿಡುವಳು

ಎರೆಯ ಹೊಲವ ಉತ್ತಿದಾಗ
ಎತ್ತು ದಣಿಯಲು
ಕೊರಳ ಕುಣಿಕೆ ಬಿಚ್ಚಿ ಬಿಡುವೆ
ಹಸಿರು ಮೇಯಲು

ಒಂದೇ ಮನದಿ ಭೂಮಿಯಲ್ಲಿ
ನಿಂದು ದುಡಿಯುವೆ
ರೈತ ಜಗದ ಬೆನ್ನೆಲುಬು
ಎಂದು ಹಾಡುವೆ

— ಎ.ಕೆ. ರಾಮೇಶ್ವರ

ಅಭ್ಯಾಸ

೧. ಈ ಪ್ರಶ್ನೆಗಳಿಗೆ ಉತ್ತರಿಸಿ.

ಅ. ಹುಡುಗನು ಯಾರೊಡನೆ ಹೊಲಕ್ಕೆ ಹೋಗಲು ಬಯಸುತ್ತಾನೆ?

ಆ. ಹುಡುಗನು ಏಕೆ ಹೊಲಕ್ಕೆ ಹೋಗಲು ಇಷ್ಟಪಡುತ್ತಾನೆ?

ಇ. ಅವ್ವ ಹೊಲಕ್ಕೆ ಏನನ್ನು ತರುವಳು?

ಈ. ಎತ್ತಿನ ಕೊರಳ ಕುಣಿಕೆಯನ್ನು ಏಕೆ ಬಿಚ್ಚುವನು?

ಉ. ಹುಡುಗನು ಏನೆಂದು ಹಾಡುವನು?

೨. ಓದಿ.

ಅ. ಕುಂಟಿ – ಕುಂಟೆ; ತಾಸು – ಗಂಟೆ; ನ್ಯಾರಿ – ತಿಂಡಿ, ಉಪಾಹಾರ; ಉಳ್ಳಿಗಡ್ಡಿ – ನೀರುಳ್ಳಿ, ಈರುಳ್ಳಿ; ಎಲುವು – ಎಲುಬು, ಮೂಳೆ.

ಆ. ದುಡಿಯುವೆ – ಸುರಿಸುವೆ; ಬುತ್ತಿ ತರುವಳು – ಅದರಲಿಡುವಳು; ದಣಿಯಲು – ಮೇಯಲು.

ಇ. ಹೊಲಕ್ಕೆ – ಹೊಲಕೆ; ಅದರಲ್ಲಿ – ಅದರಲಿ;
ಜಗತ್ತಿನ – ಜಗದ; ನಿಂತು – ನಿಂದು.

೩. ಮಾದರಿಯಂತೆ ಉಳಿದ ರೂಪಗಳನ್ನು ಹೇಳಿ.

ಮಾದರಿ: ದುಡಿ – ದುಡಿಯುವೆ, ಮಾದರಿ : ದಣಿ – ದಣಿಯಲು

ದಣಿ –	ಕಲಿ –
ಇಳಿ –	ನಲಿ –
ನುಡಿ –	ಅರಿ –

೪. ಮಾದರಿಯಂತೆ ಬರೆಯಿರಿ.

ಮಾದರಿ: ನೆನೆದ ಕಾಳು ಉಳ್ಳಿಗಡ್ಡಿ ಅದರಲಿಡುವಳು.
ಅದರಲ್ಲಿ ನೆನೆದ ಕಾಳು ಉಳ್ಳಿಗಡ್ಡಿ ಇಡುವಳು.

ಅ. ಕೊರಳ ಕುಣಿಕೆ ಬಿಚ್ಚಿ ಬಿಡುವೆ ಹಸಿರು ಮೇಯಲು.

ಆ. ತಾಸು ಹೊತ್ತು ಏರಿ ಬರಲು ನ್ಯಾರಿ ಮಾಡುವೆ.

ಇ. ಒಂದೆ ಮನದಿ ಭೂಮಿಯಲ್ಲಿ ನಿಂದು ದುಡಿಯುವೆ.

೫. ಬಿಟ್ಟ ಸಾಲುಗಳನ್ನು ಪೂರ್ತಿಗೊಳಿಸಿ.

ಪಾಠ ೧೬

ಮಕ್ಕಳ ದಿನ

ನವಂಬರ ೧೪ ರಂದು ಮಕ್ಕಳ ದಿನ. ಅದು ಚಾಚಾ ನೆಹರೂರವರ ಹುಟ್ಟಿದ ದಿನ. ನಮ್ಮ ಶಾಲೆಯಲ್ಲಿ ಸಂಭ್ರಮ, ಸಡಗರ. ಅದಕ್ಕಾಗಿ ಒಂದು ವಾರದಿಂದ ಸಿದ್ಧತೆ ನಡೆಸಿದ್ದೇವೆ.



ಅಂದು ಬೆಳಗ್ಗೆ ಏಳು ಗಂಟೆಗೇ ಶಾಲೆಗೆ ಹೋಗುವೆವು. ಶಾಲೆಯ ಆವರಣವನ್ನು ಸ್ವಚ್ಛ ಮಾಡುವೆವು. ತಳಿರುತೋರಣಗಳಿಂದ ಸಿಂಗರಿಸುವೆವು. ಬಗೆಬಗೆಯ ಹೂಗಳನ್ನು ತರುವೆವು. ಸುಂದರವಾದ ಹಾರವನ್ನು ಮಾಡುವೆವು. ನೆಹರೂರವರ ಭಾವಚಿತ್ರಕ್ಕೆ ಹಾರ ಹಾಕುವೆವು.

ಬೆಳಗ್ಗೆ ವಿವಿಧ ಸ್ಪರ್ಧೆಗಳು ಪ್ರಾರಂಭವಾಗುವುವು. ತರಗತಿಯ ಓರೇಮಣಿಯು ಸ್ಪರ್ಧಿಗಳ ಹೆಸರುಗಳನ್ನು ಪಟ್ಟಿ ಮಾಡುವನು. ವಿವಿಧ

ವೇಷ ಸ್ಪರ್ಧೆಗಾಗಿ ಬಟ್ಟೆಬರೆಗಳನ್ನು ಸಂಗ್ರಹಿಸುವೆವು. ಆಟದ ಸ್ಪರ್ಧೆಗಳು ಮೊದಲು ಜರುಗುವುವು. ಆಮೇಲೆ ಹಾಡು ಹಾಡುವ, ಚಿತ್ರ ಬರೆಯುವ, ಕಥೆ ಹೇಳುವ ಸ್ಪರ್ಧೆಗಳು. ನಾವು ಅಂದವಾಗಿ ಚಿತ್ರ ಬರೆಯುವೆವು. ಇಂಪಾಗಿ ಹಾಡುವೆವು. ಒಳ್ಳೆಯ ಕಥೆಗಳನ್ನು ಹೇಳುವೆವು.

ಸಾಯಂಕಾಲದ ಸಮಾರಂಭಕ್ಕೆ ಊರಿನ ಹಿರಿಯರೂ ಬರುವರು. ಗುರುಗಳು ಎಲ್ಲರನ್ನೂ ಬರಮಾಡಿಕೊಳ್ಳುವರು. ಮುಖ್ಯ ಉಪಾಧ್ಯಾಯರು ನೆಹರೂರವರ ಜೀವನ ಪರಿಚಯ ಮಾಡಿಕೊಡುವರು. ಸ್ಪರ್ಧೆಗಳಲ್ಲಿ ಗೆದ್ದವರಿಗೆ ಬಹುಮಾನಗಳನ್ನು ಕೊಡುವರು.

ಅಭ್ಯಾಸ

೧. ಈ ಪ್ರಶ್ನೆಗಳಿಗೆ ಉತ್ತರಿಸಿ.

ಅ. ಮಕ್ಕಳ ದಿನವನ್ನು ಎಂದು ಆಚರಿಸುವರು?

ಆ. ಮಕ್ಕಳ ದಿನ ಯಾರ ಹುಟ್ಟಿದ ದಿನ?

ಇ. ಶಾಲೆಯ ಆವರಣವನ್ನು ಯಾವುದರಿಂದ ಸಿಂಗರಿಸುವರು?

ಈ. ಶಾಲೆಯಲ್ಲಿ ಯಾವ ಯಾವ ಸ್ಪರ್ಧೆಗಳು ನಡೆಯುವುವು?

ಉ. ಊರಿನ ಹಿರಿಯರನ್ನು ಯಾರು ಬರಮಾಡಿಕೊಳ್ಳುವರು?

ಊ. ಮುಖ್ಯ ಉಪಾಧ್ಯಾಯರು ಏನು ಮಾಡುವರು?

೨. ಓದಿ.

ಅ. ಹುಟ್ಟಿದ ದಿನ, ಸಂಭ್ರಮ, ಸಿದ್ಧತೆ, ಸ್ವಚ್ಛ, ತಳಿರುತೋರಣ, ಭಾವಚಿತ್ರ, ಹಿರೇಮಣಿ, ಬಟ್ಟೆಬರೆ, ಅಂದವಾಗಿ, ಇಂಪಾಗಿ, ಸಮಾರಂಭ.

ಆ. ಅಂದು ಬೆಳಗ್ಗೆ ಏಳು ಗಂಟೆಗೇ ಶಾಲೆಗೆ ಹೋಗುವೆವು.

೩. ಹೊಂದಿಸಿ ಓದಿ.

ಅ. ಶಾಲೆಯ ಆವರಣವನ್ನು	೧. ಹಾರ ಹಾಕುವೆವು.
ಆ. ನೆಹರೂರವರ ಭಾವಚಿತ್ರಕ್ಕೆ	೨. ಮೊದಲು ಜರುಗುವುವು.
ಇ. ಒಳ್ಳೆಯ ಕಥೆಗಳನ್ನು	೩. ಬರುವರು.
ಈ. ಊರಿನ ಹಿರಿಯರೂ	೪. ಸ್ವಚ್ಛ ಮಾಡುವೆವು.
ಉ. ಆಟದ ಸ್ಪರ್ಧೆಗಳು	೫. ಹೇಳುವೆವು.
	೬. ಸಂಗ್ರಹಿಸುವೆವು.

೪. ಹೊಂದಿಸಿ ಓದಿ.

ನಾನು	ಹೋಗುವರು
ನಾವು	ಹೋಗುವಳು
ಅವನು	ಹೋಗುವಿರಿ
ಅದು	ಹೋಗುವೆನು
ನೀನು	ಹೋಗುವುದು
ನೀವು	ಹೋಗುವುವು
ಅವು	ಹೋಗುವನು
ಅವಳು	ಹೋಗುವಿ
ಅವರು	ಹೋಗುವೆವು

೫. ಮಾದರಿಯಂತೆ ಉಳಿದ ರೂಪಗಳನ್ನು ಹೇಳಿರಿ.

ಮಾದರಿ: ವಾರ + ಇಂದ – ವಾರದಿಂದ

ದಿನ + ಇಂದ –

ಸಡಗರ + ಇಂದ –

ಸಂಭ್ರಮ + ಇಂದ –

ಸಾಯಂಕಾಲ + ಇಂದ –

೬. ಮಾದರಿಯಂತೆ ವಾಕ್ಯಗಳನ್ನು ಸೇರಿಸಿ.

ಮಾದರಿ: ಮಕ್ಕಳು ಸ್ಪರ್ಧೆಗಳಲ್ಲಿ ಗೆದ್ದರು. ಅವರಿಗೆ ಬಹುಮಾನ ಕೊಟ್ಟರು.
ಸ್ಪರ್ಧೆಗಳಲ್ಲಿ ಗೆದ್ದ ಮಕ್ಕಳಿಗೆ ಬಹುಮಾನ ಕೊಟ್ಟರು.

ಅ. ಮಕ್ಕಳು ಬಂದರು. ಅವರಿಗೆ ಸಿಹಿ ಹಂಚಿದರು.

ಆ. ಜನರು ಸಂತೆಗೆ ಹೋಗುವರು. ಅವರಿಗೆ ಮನೋರಂಜನೆಯೂ ಸಿಗುತ್ತದೆ.

ಸೂಚನೆ: ಶಾಲೆಯಲ್ಲಿ ನಡೆಯುವ ಹಲವಾರು ದಿನಾಚರಣೆಗಳನ್ನು ವಿವರಿಸಬಹುದು. ಮಕ್ಕಳು ತಾವು ಆಚರಿಸಿದ ಮಕ್ಕಳ ದಿನಾಚರಣೆಯನ್ನು ವಿವರಿಸಲೂಬಹುದು ನಡೆಸು, ಮಾಡು ಪದಗಳ ಭವಿಷ್ಯತ್ಕಾಲದ ರೂಪಗಳು ನಡೆಸುವೆವು ಮಾಡುವೆವು. ಇದೇ ರೀತಿ ಮಕ್ಕಳಿಗೆ ತಿಳಿದಿರುವ ಕೆಲವು ಪದಗಳ ರೂಪಗಳನ್ನೂ ಸಮಾನತೆ, ಸ್ವಸಹಾಯ, ಪರಿಸರದ ಸ್ವಚ್ಛತೆ ಮುಂತಾದವುಗಳ ಪ್ರಾಮುಖ್ಯದ ಬಗ್ಗೆಯೂ ತಿಳಿಸಬಹುದು. ನೆಹರೂರವರ ಜೀವನ, ಕಾರ್ಯಸಾಧನೆಗಳ ಸಂಕ್ಷಿಪ್ತ ಪರಿಚಯ ಮಾಡಿಕೊಡಬಹುದು.

ಪಾಠ ೧೭

ಬೆಕ್ಕಣ್ಣನ ಪ್ರವಾಸ

ಒಮ್ಮೆ ಬೆಕ್ಕಣ್ಣನಿಗೆ ಇಲಿಗಳೇ ಸಿಗಲಿಲ್ಲ. ಅದಕ್ಕೆ ತುಂಬ ಹಸಿವಾಯಿತು. ಇಲಿಗಳನ್ನು ಹಿಡಿಯಲು ಅದು ಹೊಸ ಉಪಾಯವನ್ನು ಯೋಚಿಸಿತು.

ಮನೆಯ ಒಂದು ಮೂಲೆಯಲ್ಲಿ ಸುಮ್ಮನೆ ಮಲಗಿತು. ಇಲಿಗಳು ಸುತ್ತಮುತ್ತ ಓಡಾಡಿದರೂ ಕಣ್ಣೆತ್ತಿಯೂ ನೋಡಲಿಲ್ಲ. ಅಲ್ಲದೆ ಇಲಿಗಳಿಗೆ ಕೇಳಿಸುವಂತೆ "ನಾನು ನಿಮ್ಮ ಎಷ್ಟೋ ಅಣ್ಣತಮ್ಮಂದಿರನ್ನೂ ಅಕ್ಕತಂಗಿಯರನ್ನೂ ತಿಂದಿರುವೆ. ಆದರೆ ಈಗ ನಾನು ಅಹಿಂಸೆಯ ಮಾರ್ಗವನ್ನು ಹಿಡಿದಿದ್ದೇನೆ" ಎಂದು ಬಡಬಡಿಸಿತು.

ಇದನ್ನು ಕೇಳಿದ ಇಲಿಗಳು ಬೆಕ್ಕಿನ ಮಾತನ್ನು ನಿಜವೆಂದು ನಂಬಿದುವು. ಬೆಕ್ಕಿನ ಹತ್ತಿರಕ್ಕೆ ಬಂದುವು. ಅದರ ಮೈಮೇಲೆ ಓಡಾಡಿದುವು. ಕಿವಿ

ಜಗ್ಗಿದುವು. ಅದರ ಜೊತೆ ಚೆನ್ನಾಟವಾಡಿದುವು. ಆದರೆ ಬೆಕ್ಕಣ್ಣ ಸುಮ್ಮನೆ ಇದ್ದನು.

ಕೆಲವು ದಿನಗಳ ನಂತರ ಬೆಕ್ಕು ಇಲಿಗಳನ್ನು ಕುರಿತು "ಗೆಳೆಯರೇ, ನನಗೆ ದೇಶ ಸುತ್ತಬೇಕೆಂದು ಆಸೆಯಾಗಿದೆ. ಆದರೆ ನಾನೊಬ್ಬನೇ ಪ್ರವಾಸ ಹೋಗಲಾರೆ. ನೀವೂ ನನ್ನೊಡನೆ ಬಂದರೆ ನನಗೂ ಜೊತೆಯಾಗುತ್ತದೆ. ನೀವೂ ದೇಶ ನೋಡಬಹುದು" ಎಂದಿತು. ಇಲಿಗಳು 'ಹಾಗೆಯೇ ಆಗಲಿ' ಎಂದು ಒಪ್ಪಿದುವು. ಅವು ಪ್ರವಾಸ ಹೊರಟವು.

ಪ್ರವಾಸದ ಸಮಯದಲ್ಲಿ ಕತ್ತಲಾಗುತ್ತಲೇ ಇಲಿಗಳು ಬಿಲದಲ್ಲಿ ತಂಗುತ್ತಿದ್ದುವು. ಬೆಕ್ಕು ಒಂದೊಂದೇ ಇಲಿಯನ್ನು ಬಿಲದ ಒಳಕ್ಕೆ ಕಳುಹಿಸುತ್ತಿತ್ತು. ಹೀಗೆ ಮಾಡುವಾಗ ಕೊನೆಯ ಇಲಿಯನ್ನು 'ಗುಳುಂ' ಮಾಡುತ್ತಿತ್ತು.

ದಿನ ಕಳೆದ ಹಾಗೆ ಇಲಿಗಳ ಸಂಖ್ಯೆ ಕಡಿಮೆಯಾಗುತ್ತ ಬಂದಿತು. ಒಂದು ಮರಿ ಇಲಿಗೆ ಅನುಮಾನ ಬಂದಿತು. ಅದು ಒಂದು ರಾತ್ರಿ ಬಿಲದೊಳಗೆ ಹೋಗದೆ ಮರೆಯಲ್ಲಿ ನಿಂತುಕೊಂಡಿತು. ಬೆಕ್ಕಿನ 'ಗುಳುಂ' ಕೆಲಸವನ್ನು ನೋಡಿಬಿಟ್ಟಿತು.

ಮಾರನೆಯ ದಿನ ಮರಿ ಇಲಿಯು ತನ್ನ ಸ್ನೇಹಿತರಿಗೆ ವಿಷಯ ತಿಳಿಸಿತು. "ನಾವು ಬೆಕ್ಕಿನ ಮಾತನ್ನು ನಿಜವೆಂದೇ ನಂಬಿದೆವು. ಅದರಿಂದ ಬಂಧುಗಳನ್ನು ಕಳೆದುಕೊಂಡೆವು" ಎಂದಿತು ಮರಿ ಇಲಿ. ಅಂದಿನಿಂದ ಇಲಿಗಳು ಬೆಕ್ಕಿನ ಸಹವಾಸವನ್ನು ಬಿಟ್ಟು ಬೇರೆಡೆಗೆ ಹೊರಟುಹೋದುವು.

"ಪ್ರತ್ಯಕ್ಷ ನೋಡಿದರೂ ಪ್ರಮಾಣಿಸಿ ನೋಡು".

ಅಭ್ಯಾಸ

೧. ಈ ಪ್ರಶ್ನೆಗಳಿಗೆ ಉತ್ತರಿಸಿ.

ಅ. ಬೆಕ್ಕು ಹೊಸ ಉಪಾಯವನ್ನು ಏಕೆ ಯೋಚಿಸಿತು?
ಆ. ಬೆಕ್ಕು ಇಲಿಗಳಿಗೆ ಕೇಳಿಸುವಂತೆ ಏನೆಂದು ಬಡಬಡಿಸಿತು?
ಇ. ಇಲಿಗಳು ಬೆಕ್ಕಣ್ಣನೊಡನೆ ಹೇಗೆ ಆಟವಾಡಿದುವು?
ಈ. ಬೆಕ್ಕು ಇಲಿಗಳನ್ನು ಏಕೆ ಪ್ರವಾಸಕ್ಕೆ ಕರೆಯಿತು?
ಉ. ಬೆಕ್ಕು ಇಲಿಗಳನ್ನು ಹೇಗೆ 'ಗುಳುಂ' ಮಾಡುತ್ತಿತ್ತು?
ಊ. ಮರಿ ಇಲಿಗೆ ಅನುಮಾನ ಏಕೆ ಉಂಟಾಯಿತು?
ಋ. ಇಲಿಗಳು ಬೆಕ್ಕಿನ ಸಹವಾಸ ಬಿಡಲು ಕಾರಣವೇನು?

೨. ಓದಿ.

ಅ. ಜಗ್ಗು, ಪ್ರವಾಸ, ಜೊತೆ, ಗುಳುಂ, ಸಂಖ್ಯೆ, ಬಂಧು, ಸಹವಾಸ.
ಆ. ಒಮ್ಮೆ ಬೆಕ್ಕಣ್ಣನಿಗೆ ಇಲಿಗಳೇ ಸಿಗಲಿಲ್ಲ.
ನೀವು ನನ್ನೊಡನೆ ಬಂದರೆ ನನಗೂ ಜೊತೆಯಾಗುತ್ತದೆ.
ನೀವೂ ದೇಶ ನೋಡಬಹುದು.

೩. ಖಾಲಿ ಬಿಟ್ಟ ಸ್ಥಳಗಳಲ್ಲಿ ಸರಿಯಾದ ಪದವನ್ನು ತುಂಬಿ.

ಅ. ಆದರೆ ಈಗ ನಾನು ________ ಮಾರ್ಗವನ್ನು ಹಿಡಿದಿದ್ದೇನೆ.

ಆ. ನನಗೆ ದೇಶ ________ ಆಸೆಯಾಗಿದೆ.

ಇ. ಅವು ಪ್ರವಾಸ ________.

ಈ. ಇಲಿಗಳು ಬೆಕ್ಕಿನ ________ ಬಿಟ್ಟು ಬೇರೆ ಕಡೆಗೆ ಹೊರಟುಹೋದುವು.

೪. ಮಾದರಿಯಂತೆ ಬದಲಾಯಿಸಿ.

ಮಾದರಿ: ಬರು – ಬಂದರೆ. ಮಾದರಿ : ಕೆಲಸ – ಕೆಲಸವನ್ನು

ತರು –	ಹಣ –
ಮೀಯು –	ಪ್ರವಾಸ –
ಅನ್ನು –	ವಿಷಯ –

೫. ಮಾದರಿಯಂತೆ ಉಳಿದ ರೂಪಗಳನ್ನು ರಚಿಸಿ.

ಮಾದರಿ: ನೋಡು–ನೋಡಬಹುದು, ಮಾದರಿ: ಮಾಡು–ಮಾಡುತ್ತಿತ್ತು

ಕಾಣು –	ತೋರಿಸು –
ಹಾಡು –	ತಂಗು –
ಕಳುಹಿಸು –	ಜಗ್ಗು –
ನಂಬು –	ಓಡಾಡು –

೬. ಮಾದರಿಯಂತೆ ವಾಕ್ಯಗಳನ್ನು ರಚಿಸಿ.

ಮಾದರಿ: ಮರಿ ಇಲಿ ಬೆಕ್ಕಿನ 'ಗುಳುಂ' ಕೆಲಸವನ್ನು ನೋಡಿತು.
ಮರಿ ಇಲಿ ಬೆಕ್ಕಿನ 'ಗುಳುಂ' ಕೆಲಸವನ್ನು ನೋಡಿಬಿಟ್ಟಿತು.

ಅ. ಬಿಡು – ಬಿಟ್ಟುಬಿಡು.

ಆ. ತಿನ್ನು – ತಿಂದುಬಿಡು.

ಇ. ಹಾಕು – ಹಾಕಿಬಿಡು.

ಈ. ನುಂಗು – ನುಂಗಿಬಿಡು.

ಸೂಚನೆ: 'ನೀಲಿ ನರಿ ಕಾಡಿನ ರಾಜನಾದ ಕಥೆ', 'ಹುಲಿಯ ಚರ್ಮ ಹೊದೆದ ಕತ್ತೆ ಕಬ್ಬಿನ ಹೊಲ ಮೇಯ್ದ ಕಥೆ', 'ತಪಸ್ಸಿನ ನೆವದಲ್ಲಿ ಮೀನುಗಳನ್ನು ಕಬಳಿಸಿದ ಕೊಕ್ಕರೆಯ ಕಥೆ' ಮುಂತಾದವುಗಳನ್ನು ಹೇಳಬಹುದು. ಬಡಬಡಿಸು, ಚಿನ್ನಾಟವಾಡು ಮುಂತಾದವುಗಳ ವಿಶಿಷ್ಟ ಬಳಕೆಯನ್ನೂ ಬರು–ಬಂದರೆ, ಹೋಗು–ಹೋದರೆ, ತಿನ್ನು–ತಿಂದರೆ ಮುಂತಾದ ರೂಪಗಳ ನಡುವಿನ ಅರ್ಥ ಸಂಬಂಧವನ್ನೂ, ಮುಂಜಾಗರೂಕತೆ, ಕೇಳಿ ತಿಳಿಯುವುದಕ್ಕಿಂತ ನೋಡಿ ತಿಳಿಯುವುದು ಮೇಲು ಎಂಬ ಬಗ್ಗೆಯೂ ತಿಳಿಸಬಹುದು.

ಸುರಿಮಳೆ ಗುಟ್ಟು

ಮುಗಿಲೊಳಗಿಂದ
ಭೂಮಿಯ ಮೇಲೆ
ನೀರನು ಸುರಿವರು ಯಾರಣ್ಣ? ॥ ೧ ॥

ಮುಗಿಲಿನ ಮರೆಗೆ
ಯಾರೂ ಇಲ್ಲ
ಸುರಿವುದು ನೀರು ಹೇಗಣ್ಣ? ॥ ೨ ॥

ಆಗಸದಿಂದ
ಭೂಮಿಗೆ ನೀರು
ಬೀಳುವ ಬಗೆಯ ಹೇಳುವೆ ತಮ್ಮಾ ॥ ೩ ॥

ಭೂಮಿಯ ಮೇಲೆ
ನೀರಿನ ಮೂಲ
ಕೆರೆ ಹೊಳೆ ಹಳ್ಳ ಸಾಗರ ತಮ್ಮಾ || ೪ ||

ಸೂರ್ಯನ ಬಿಸಿಲಿಗೆ
ಕಾಯುತ ಉಗಿಯ
ರೂಪದಿ ಮೇಲಕೆ ಹೋಗುವುದು || ೫ ||

ನೀರಿನ ಉಗಿಯು
ಮೇಲಕೆ ಏರಿ
ನೀರದು ತಾ ಹೇಗಾಗುವುದಣ್ಣ? || ೬ ||

ಜಲದಾ ಉಗಿಯು
ಒಂದೆಡೆ ಸೇರಿ
ಮೋಡಗಳಾಗಿ ತೇಲುವುವು || ೭ ||

ತಣ್ಣನೆ ಗಾಳಿ
ಬಾನಿಗೆ ತಾಗೆ
ಕರಗುತ ಕೂಡಲೆ ನೀರಾಗುವುದು || ೮ ||

ಮಂಜಿನ ಗಡ್ಡೆ
ಕರಗುವ ತೆರದಿ
ಭೂಮಿಗೆ ರಪರಪ ಬೀಳುವುದು || ೯ ||

ಬೀಳುವ ಇಂಥ
ನೀರಿಗೆ ನಾವು
ಸುರಿಮಳೆ ಎಂದು ಕರೆಯುವೆವು || ೧೦ ||

— ಬ.ಭೀ. ನಾಗನೂರ

ಅಭ್ಯಾಸ

೧. ಈ ಪ್ರಶ್ನೆಗಳಿಗೆ ಉತ್ತರಿಸಿ.

ಅ. ಭೂಮಿಯ ಮೇಲಿನ ನೀರಿನ ಮೂಲಗಳು ಯಾವುವು?

ಆ. ಉಗಿಯು ಹೇಗಾಗುವುದು?

ಇ. ಉಗಿಯು ಮೇಲೆ ಹೋಗಿ ಯಾವ ರೂಪ ತಾಳುವುದು?

ಈ. ಮೋಡದಿಂದ ಮಳೆ ಯಾವಾಗ ಸುರಿಯುವುದು?

ಉ. ಮಳೆ ಹೇಗೆ ಆಗುವುದು?

೨. ಓದಿ.

ಅ. ಆಗಸ – ಆಕಾಶ, ಕರಗುವ ತೆರದಿ – ಕರಗುವಂತೆ.

ಆ. ಮೇಲಕ್ಕೆ– ಮೇಲಕೆ, ರೂಪದಲ್ಲಿ – ರೂಪದಿ,
ತಾಗಲು – ತಾಗೆ.

೩. ಕೊಟ್ಟಿರುವ ಪದಗಳ ಸಮಾನ ಅರ್ಥವನ್ನು ಕೊಡುವ ಇತರ ಪದಗಳನ್ನು ಪದ್ಯದಿಂದ ಆರಿಸಿ ಬರೆಯಿರಿ.

ನೀರು –

ಆಕಾಶ –

ಮೋಡ –

೪. ಈ ಪ್ರಶ್ನೆಗಳಿಗೆ ಉತ್ತರ ಸಿಗುವ ಪದ್ಯದ ಸಾಲುಗಳನ್ನು ಬರೆಯಿರಿ.

ಅ. ನೀರಿನ ಉಗಿಯು ಹೇಗೆ ಮೇಲೇರಿ ನೀರಾಗುವುದು?

ಆ. ಮೋಡವು ಕರಗಿ ನೀರಾಗುವುದು ಹೇಗೆ?

ಇ. ಮೋಡಗಳು ಹೇಗೆ ಆಗುತ್ತವೆ?

೫. ಬಿಟ್ಟ ಸಾಲುಗಳನ್ನು ಪೂರ್ತಿ ಮಾಡಿ.

ಅ. ಆಗಸ ______________________ ತಮ್ಮಾ ||

ಆ. ಭೂಮಿಯ ______________________ ತಮ್ಮಾ ||

ಇ. ಮಂಜಿನ ______________________ ಬೀಳುವುದು ||

ಈ. ಬೀಳುವ ______________________ ಕರೆಯುವೆವು ||

೬. ವಾಕ್ಯಗಳನ್ನು ಸರಿಯಾದ ಕ್ರಮದಲ್ಲಿ ಬರೆಯಿರಿ.

ಅ. ನೀರಿನ ಉಗಿಯು ಮೇಲಕ್ಕೆ ಏರುವುದು.

ಆ. ಆಗಸದಿಂದ ನೀರು ಭೂಮಿಗೆ ಬಿದ್ದು ಕೆರೆ, ಹೊಳೆ, ಹಳ್ಳಗಳಲ್ಲಿ ಸೇರುತ್ತದೆ.

ಇ. ಸೂರ್ಯನ ಬಿಸಿಲಿಗೆ ನೀರು ಕಾದು ಉಗಿಯಾಗುತ್ತದೆ.

ಈ. ಮೋಡವು ಕರಗಿ ನೀರಾಗುತ್ತದೆ.

ಉ. ನೀರಿನ ಉಗಿಯು ಒಂದೆಡೆ ಸೇರಿ ಮೋಡವಾಗುತ್ತದೆ.

ಊ. ಮಂಜಿನ ಗಡ್ಡೆಯಂತೆ ಕರಗಿದ ನೀರು ಮಳೆಯ ರೂಪದಲ್ಲಿ ಭೂಮಿಗೆ ಬೀಳುತ್ತದೆ.

ಪಾಠ ೧೯

ಕೋಳಿ

ನಿತ್ಯವೂ ಮುಂಜಾನೆ ಕೋಳಿ ಕೂಗುವುದು. ಕೋಳಿ ಕೂಗುತ್ತಲೇ ಜನರು ಏಳುತ್ತಾರೆ. ತಮ್ಮ ತಮ್ಮ ಕೆಲಸಗಳಲ್ಲಿ ತೊಡಗುತ್ತಾರೆ.



ಹಸು, ಎಮ್ಮೆ, ಕುರಿ ಮುಂತಾದವುಗಳನ್ನು ಸಾಕುವಂತೆಯೇ ಕೋಳಿಯನ್ನು ಸಾಕುತ್ತಾರೆ. ಮನೆಗಳಲ್ಲಿ ಸಾಕುವ ಕೋಳಿಗಳು ನಾಡ ಕೋಳಿಗಳು. ಅಡವಿಯಲ್ಲಿಯೂ ಕೋಳಿಗಳು ಇರುತ್ತವೆ. ಅವು ಕಾಡು ಕೋಳಿಗಳು.

ಗಂಡು ಕೋಳಿಗೆ 'ಹುಂಜ' ಎಂದು ಕರೆಯುತ್ತಾರೆ. ಅದರ ತಲೆಯ ಮೇಲೆ ಕೆಂಪು ತುರಾಯಿ ಇರುತ್ತದೆ. ಹುಂಜವು ಕೊರಳು ಕೊಂಕಿಸಿ, ಎದೆ ಉಬ್ಬಿಸಿ, ಜಂಭದಿಂದ ನಡೆಯುತ್ತದೆ. ಹೆಣ್ಣು ಕೋಳಿಗೆ 'ಹೇಂಟೆ' ಎಂದು ಹೆಸರು. ಕೋಳಿಗಳಿಗೆ ಬಣ್ಣಬಣ್ಣದ ರೆಕ್ಕೆ ಪುಕ್ಕಗಳಿರುತ್ತವೆ.

ಕೋಳಿಯು ಕಾಳುಕಡಿ ಹುಳು ಹುಪ್ಪಡಿಗಳನ್ನು ಕೊಕ್ಕಿನಿಂದ ಹೆಕ್ಕಿ ತಿನ್ನುತ್ತದೆ. ಇದು ಮೊಟ್ಟೆಗಳನ್ನು ಇಡುತ್ತದೆ. ಮೊಟ್ಟೆಗಳ ಮೇಲೆ ಕುಳಿತು ಕಾವು ಕೊಟ್ಟು ಮರಿ ಮಾಡುತ್ತದೆ.

ಮೊದಮೊದಲು ಮನೆಗಳಲ್ಲಿ ಮಾತ್ರ ನಾಲ್ಕಾರು ಕೋಳಿಗಳನ್ನು ಸಾಕುತ್ತಿದ್ದರು. ಈಚೆಗೆ ಕೋಳಿ ಸಾಕುವುದು ಒಂದು ಉದ್ಯೋಗವಾಗಿದೆ. ಅದು ಬಹುಜನರ ಜೀವನಕ್ಕೆ ಆಧಾರ.

ಅಭ್ಯಾಸ

೧. ಈ ಪ್ರಶ್ನೆಗಳಿಗೆ ಉತ್ತರಿಸಿ.

ಅ. ಕೋಳಿ ಯಾವಾಗ ಕೂಗುತ್ತದೆ?

ಆ. ಜನರು ಸಾಕುವ ಪ್ರಾಣಿಗಳಾವುವು?

ಇ. ಹುಂಜವು ಹೇಗೆ ನಡೆಯುತ್ತದೆ?

ಈ. ಕೋಳಿಯು ಏನನ್ನು ತಿನ್ನುತ್ತದೆ?

ಉ. ಕೋಳಿ ಹೇಗೆ ಮರಿ ಮಾಡುತ್ತದೆ?

೨. ಓದಿ.

ಅ. ಜಂಭ, ರೆಕ್ಕೆಪುಕ್ಕ, ಕಾಳುಕಡಿ, ಹುಳು ಹುಪ್ಪಡಿ, ಉದ್ಯೋಗ, ಆಧಾರ.

ಆ. ಕೋಳಿ ಕೂಗುತ್ತಲೇ ಜನರು ಏಳುತ್ತಾರೆ.
ಹಸು, ಎಮ್ಮೆ, ಕುರಿ ಮುಂತಾದುವನ್ನು ಸಾಕುವಂತೆ ಕೋಳಿಯನ್ನೂ ಸಾಕುತ್ತಾರೆ.
ಅಡವಿಯಲ್ಲಿಯೂ ಕೋಳಿಗಳು ಇರುತ್ತವೆ.

೩. ಮಾದರಿಯಂತೆ ಉಳಿದ ರೂಪಗಳನ್ನು ಹೇಳಿ:

ಮಾದರಿ: ನಡೆ – ನಡೆಯುತ್ತದೆ, ಮಾದರಿ : ಕೂಗು – ಕೂಗುತ್ತಲೇ

ತೆಗೆ –	ಏಳು –
ತೊಳೆ –	ತಿನ್ನು –
ತೆರೆ –	ತೊಡಗು –
ನೆಗೆ –	ಸಾಕು –

೪. ಮಾದರಿಯಂತೆ ಕೂಡಿಸಿ.

ಮಾದರಿ: ಉದ್ಯೋಗ + ಆಗಿದೆ – ಉದ್ಯೋಗವಾಗಿದೆ.

ಆಧಾರ + ಆಗಿದೆ –

ಸಹಾಯ + ಆಗಿದೆ –

ಕಟ್ಟಡ + ಆಗಿದೆ –

ಕೆಲಸ + ಆಗಿದೆ –

ಮಾದರಿ : ಕೋಳಿ + ಅನ್ನು – ಕೋಳಿಯನ್ನು.

ಎಮ್ಮೆ + ಅನ್ನು –

ಕುರಿ + ಅನ್ನು –

ಅದು + ಅನ್ನು –

ಹೇಂಟೆ + ಅನ್ನು –

೫. ಹೊಂದಿಸಿ ಬರೆಯಿರಿ.

ಅ.	ಗಂಡುಕೋಳಿ	೧.	ಕಾಡು
ಆ.	ಹೆಣ್ಣುಕೋಳಿ	೨.	ಮನೆ
ಇ.	ಕಾಡುಕೋಳಿ	೩.	ಹುಂಜ
ಈ.	ನಾಡಕೋಳಿ	೪.	ಹೇಂಟೆ

೬. ಮಾದರಿಯಂತೆ ವಾಕ್ಯಗಳನ್ನು ಬದಲಾಯಿಸಿ.

ಮಾದರಿ: ಇದು ಮೊಟ್ಟೆಯನ್ನು ಇಡುತ್ತದೆ.
ಇವು ಮೊಟ್ಟೆಗಳನ್ನು ಇಡುತ್ತವೆ.

ಅ. ಅವನು ಮನೆಯನ್ನು ಕಟ್ಟುತ್ತಾನೆ.

ಆ. ರೈತನು ಕೋಳಿಯನ್ನು ಸಾಕಿದ್ದಾನೆ.

ಇ. ನಾನು ಪುಸ್ತಕವನ್ನು ಓದುತ್ತೇನೆ.

ಈ. ಅದು ಹಣ್ಣನ್ನು ತಿನ್ನುತ್ತದೆ.

ಸೂಚನೆ: ಪಕ್ಷಿಗಳು, ವಿವಿಧ ಸಾಕುಪ್ರಾಣಿಗಳು ಮತ್ತು ರೇಷ್ಮೆಹುಳು, ಮೀನು, ಜೇನು ಮುಂತಾದವುಗಳ ಸಾಕಣೆಯ ಬಗ್ಗೆ ಹೇಳಿ. ಯಾವುದಾದರೂ ಒಂದು ಸಾಕಣೆ ಕೇಂದ್ರಕ್ಕೆ ಮಕ್ಕಳನ್ನು ಕರೆದುಕೊಂಡು ಹೋಗಿ ಅಲ್ಲಿನ ಚಟುವಟಿಕೆಗಳನ್ನು ವಿವರಿಸಬಹುದು. ಕೂಗುತ್ತ<u>ಲೇ</u>, ಸಾಕುವಂತೆ<u>ಯೇ</u>, ಅಡವಿಯಲ್ಲಿ<u>ಯೂ</u> ರೂಪಗಳ ಬಳಕೆ, ದುಡಿಮೆಯ ಮಹತ್ವ ಮುಂತಾದವುಗಳ ಬಗ್ಗೆ ತಿಳಿಸಬಹುದು.

ಪಾಠ ೨೦

ಕಡಲು

ಕಡಲ ನೋಟ ಕಣ್ಣಿಗೆ ಹಬ್ಬ. ಕಡಲನ್ನು ಸಾಗರ, ಸಮುದ್ರ ಎಂದೂ ಕರೆಯುತ್ತಾರೆ. ಅದರ ಆಳವನ್ನು ಬಲ್ಲವರಾರು? ಎಷ್ಟು ದೂರ ನೋಡಿದರೂ ನೀರೇ ನೀರು. ಕಡಲಿನ ನೀರು ಉಪ್ಪು.

ಕಡಲ ತೀರದಲ್ಲಿ ಅಪಾರ ಮಳಲರಾಶಿ. ಕಡಲ ತೆರೆಗಳು ಆನೆಯ ಗಾತ್ರ. ಅವು ಮತ್ತೆ ಮತ್ತೆ ಬಂದು ದಂಡೆಗೆ ಅಪ್ಪಳಿಸುವುವು.

ಕೆಲವರು ದೋಣಿಗಳಲ್ಲಿ ನಿಂತು ಬಲೆ ಬೀಸುವರು. ಮೀನು ಹಿಡಿಯುವರು. ಅವರೇ ಮೀನುಗಾರರು.

"ತಾಯಿಗಿಂತ ಬಂಧುವಿಲ್ಲ ಉಪ್ಪಿಗಿಂತ ರುಚಿಯಿಲ್ಲ" ಎಂಬ ಮಾತು ನಮಗೆಲ್ಲ ಗೊತ್ತು. ಉಪ್ಪನ್ನು ಸಮುದ್ರದ ನೀರಿನಿಂದ ತಯಾರಿಸುವರು.

ಕಪ್ಪೆಚಿಪ್ಪು, ಶಂಖ, ಹವಳ, ಮುತ್ತೂ ಸಹ ಕಡಲಿನಲ್ಲಿ ಸಿಗುತ್ತವೆ. ಸಮುದ್ರದ ದಂಡೆಯುದ್ದಕ್ಕೂ ಎತ್ತರವಾಗಿ ಬೆಳೆದ ತೆಂಗಿನ ಮರಗಳು ಇರುವುವು. ದೂರದಲ್ಲಿ ಕೆಲವು ಹಡಗುಗಳು ಸಾಗುವುದನ್ನು ಕಾಣಬಹುದು.

ಅಲ್ಲಿ ಸೂರ್ಯನು ಮುಳುಗುವ ನೋಟ ಬಹು ಸುಂದರ. ದಪ್ಪವಾದ ಕೆಂಪು ಚೆಂಡೊಂದು ನಿಧಾನವಾಗಿ ನೀರಿನಲ್ಲಿ ಇಳಿಯುವಂತೆ ಕಾಣುವುದು.

"ಸುಂದರ ಕಡಲು ಸಂಪತ್ತಿನ ಒಡಲು"

ಅಭ್ಯಾಸ

೧. ಈ ಪ್ರಶ್ನೆಗಳಿಗೆ ಉತ್ತರಿಸಿ.

ಅ. ಕಡಲಿಗಿರುವ ಬೇರೆ ಬೇರೆ ಹೆಸರುಗಳಾವುವು?
ಆ. ತೆರೆಗಳು ಹೇಗೆ ಇರುತ್ತವೆ?
ಇ. ಮೀನುಗಾರರು ಏನು ಮಾಡುತ್ತಾರೆ?
ಈ. ಸೂರ್ಯನು ಮುಳುಗುವ ನೋಟ ಹೇಗೆ ಕಾಣುವುದು?
ಉ. ಉಪ್ಪನ್ನು ಯಾವುದರಿಂದ ತಯಾರಿಸುತ್ತಾರೆ?
ಊ. ಕಡಲು ಸಂಪತ್ತಿನ ಒಡಲು. ಹೇಗೆ?

೨. ಓದಿ.

ಅ. ಸಮುದ್ರ, ಅಪಾರ, ಗಾತ್ರ, ಬಂಧು, ಕಪ್ಪೆಚಿಪ್ಪು.
ಆ. ಕಡಲ ತೀರದಲ್ಲಿ ಅಪಾರ ಮಳಲ ರಾಶಿ.
ಕಡಲ ತೆರೆಗಳು ಆನೆಯ ಗಾತ್ರ.
ಅವರೇ ಮೀನುಗಾರರು.

೩. ಮಾದರಿಯಂತೆ ಕೂಡಿಸಿ ಓದಿ.

ಮಾದರಿ: ದಂಡೆ + ಉದ್ದಕ್ಕೂ – ದಂಡೆಯುದ್ದಕ್ಕೂ

ಮನೆ + ಉದ್ದಕ್ಕೂ –

ಅಂಗಡಿ + ಉದ್ದಕ್ಕೂ –

ರಸ್ತೆ + ಉದ್ದಕ್ಕೂ –

ದಾರಿ + ಉದ್ದಕ್ಕೂ –

ಮಾದರಿ: ಬಲ್ಲವರು + ಆರು – ಬಲ್ಲವರಾರು

ತಿಳಿದವರು + ಆರು –

ಕಂಡವರು + ಆರು –

ನಿಲ್ಲುವರು + ಆರು –

ಗಳಿಸುವವರು + ಆರು –

೪. ಕೊಟ್ಟಿರುವ ಪದಗಳನ್ನು ಬಳಸಿ ಮಾದರಿಯಂತಹ ವಾಕ್ಯಗಳನ್ನು ಬರೆಯಿರಿ.

ಮಾದರಿ: ಅವರು ಮೀನು ಹಿಡಿಯುವರು. ಅವರೇ ಮೀನುಗಾರರು.

ಹಾಡು, ಓಟ, ಆಟ, ಬಳೆ, ತೋಟ, ಹಾಸ್ಯ

೫. ಮಾದರಿಯಂತೆ ವಾಕ್ಯಗಳನ್ನು ಸೇರಿಸಿ.

ಮಾದರಿ: ಕೆಲವರು ದೋಣಿಗಳಲ್ಲಿ ನಿಲ್ಲುವರು.
ಅವರು ಬಲೆ ಬೀಸುವರು.
ಕೆಲವರು ದೋಣಿಗಳಲ್ಲಿ ನಿಂತು ಬಲೆ ಬೀಸುವರು.

ಅ. ಅವರು ಆಟ ಆಡುವುದನ್ನೂ ಮರೆಯುವರು. ಅವರು ಅಭ್ಯಾಸ ಮಾಡುವರು.

ಆ. ಅವಳು ಹಾಡು ಹಾಡುವುದನ್ನು ಕಲಿಯುವಳು. ಅವಳು ನೃತ್ಯ ಮಾಡುವಳು.

ಇ. ಕಿಟ್ಟು, ಪುಟ್ಟು, ಸ್ನೇಹಿತರೊಂದಿಗೆ ಬೆರೆಯುವರು. ಅವರು ನಲಿದಾಡುವರು.

೬. ಈ ಕೆಳಗಿನವುಗಳನ್ನು ವಾಕ್ಯಗಳಲ್ಲಿ ಬಳಸಿ.

ಕಣ್ಣಿಗೆ ಹಬ್ಬ, ಸೀರೇ ನೀರು.

೭. ತಾಯಿಗಿಂತ ಬಂಧುವಿಲ್ಲ ಉಪ್ಪಿಗಿಂತ ರುಚಿಯಿಲ್ಲ.
ಇಂತಹ ಒಂದೆರಡು ಗಾದೆ ಮಾತುಗಳನ್ನು ಬರೆಯಿರಿ.

ಸೂಚನೆ: ಕಡಲಿನ ಬಗ್ಗೆ ಇನ್ನೂ ಹೆಚ್ಚು ಮಾಹಿತಿಯನ್ನು ಕೊಡಬಹುದು. ನೀರಿನ ಇತರ ಆಸರೆಗಳಾದ ಕೊಳ, ಕೆರೆ, ಇತ್ಯಾದಿಗಳು, ಸಮುದ್ರದಂತೆಯೇ ಕಾಡು, ಬೆಟ್ಟಗುಡ್ಡಗಳು ಮುಂತಾದವುಗಳ ಬಗ್ಗೆಯೂ ಹೇಳಬಹುದು. ಆಡು–ಆಟ, ನೋಡು–ನೋಟ, ಓಡು–ಓಟ, ಮೀನು–ಮೀನುಗಾರ, ಬೇಟೆ–ಬೇಟೆಗಾರ, ಮುಂತಾದ ಪದಗಳ ನಡುವೆ ಇರುವ ಅರ್ಥ ಸಂಬಂಧ ಮತ್ತು ಬಳಕೆಯ ವ್ಯತ್ಯಾಸಗಳನ್ನು ತಿಳಿಸಬಹುದು. ಹಾಗೂ ಪ್ರಕೃತಿಯ ಬಗ್ಗೆ ಕುತೂಹಲವನ್ನು ಬೆಳೆಸಿಕೊಳ್ಳುವಂತೆ ಮಾಡಬಹುದು. ಪ್ರತಿದಿನವೂ ಐದು ವಾಕ್ಯಗಳನ್ನು ನಕಲು ಮಾಡಿಕೊಂಡು ಬರಲು ಮಕ್ಕಳಿಗೆ ತಿಳಿಸಬೇಕು.

ಪಾಠ ೨೧

ಇರುವೆ

ಇರುವೇ ಇರುವೆ ಕಟ್ಟಿರುವೆ
ಎಲ್ಲೆಡೆಯಲ್ಲಿಯು ನೀನಿರುವೆ
ಬೆಲ್ಲವ ಕಂಡರೆ ನೀ ಬರುವೆ
ನಿನ್ನಯ ದಂಡನು ಕರೆತರುವೆ

ತಿಳಿಯದು ನಮಗೆ ನಿನ್ನಯ ಭಾಷೆ
ಎದುರೊಳು ಬಂದರೆ ಮೀಸೆಗೆ ಮೀಸೆ
ಕೂಡಿಸಿ ಮಾತನು ಆಡುವ ಆಸೆ
ಸುಮ್ಮನೆ ವೇಳೆಯ ಕಳೆಯಲು ಬಯಸೆ

ಬೇಟೆಗೆ ಹೊರಟರೆ ನಿಮ್ಮೀ ಹಿಂಡು
ಸರತಿಯ ಸಾಲಿನ ಶಿಸ್ತಿನ ದಂಡು
ಎಬ್ಬಿಸಿ ಬಿಡುವಿರಿ ಎಲ್ಲೆಡೆ ಬಂಡು
ಚಿಕ್ಕವರೊಳಗೆ ನೀವೇ ಗಂಡು

ತಡೆದವರನ್ನು ಕಡಿದೇ ಬಿಡುವೆ
ಹೆದರಿಕೆಯಿಲ್ಲದೆ ಪ್ರಾಣವ ಕೊಡುವೆ
ಚಳಿಮಳೆಯೆನ್ನದೆ ದುಡಿದೇ ದುಡಿವೆ
ಅನ್ನವ ತರಲು ದಂಡನು ಬಿಡುವೆ

ನಿನ್ನಯ ಬಣ್ಣವು ಬಲು ಕರಿದು
ಸಣ್ಣವನಾದರು ತಲೆ ಹಿರಿದು
ದುಡಿಯುವೆ ನಿತ್ಯವೂ ಮೈಮರೆದು
ಉಣ್ಣುವೆ ಬಳಗವ ಕರೆಕರೆದು

— ಶಂ. ಗು. ಬಿರಾದಾರ

ಅಭ್ಯಾಸ

೧. ಈ ಪ್ರಶ್ನೆಗಳಿಗೆ ಉತ್ತರಿಸಿ.

ಅ. ಬೆಲ್ಲವನ್ನು ಕಂಡರೆ ಇರುವೆ ಏನು ಮಾಡುವುದು?
ಆ. ಇರುವೆಗಳು ಎದುರು ಬದುರು ಬಂದಾಗ ಹೇಗೆ ಮಾತನಾಡುತ್ತವೆ?
ಇ. ಬೇಟೆಗೆ ಹೋಗುವಾಗ ಇರುವೆಗಳು ಹೇಗೆ ನಡೆಯುತ್ತವೆ?
ಈ. ಇರುವೆಗಳು ಹೇಗೆ ದುಡಿಯುವವು?
ಉ. ಅನ್ನವನ್ನು ತರಲು ಇರುವೆ ಏನು ಮಾಡುತ್ತದೆ?
ಊ. ಇರುವೆ ಉಣ್ಣುವಾಗ ಯಾರನ್ನು ಕರೆಯುವುದು?

೨. ಓದಿ.

ಅ. ಎಲ್ಲೆಡೆ—ಎಲ್ಲಕಡೆ, ಎದುರೊಳು—ಎದುರಿಗೆ,
ಮೈಮುರಿದು — ಕಷ್ಟಪಟ್ಟು. ಕಟ್ಟಿರುವೆ—ಒಂದು ಜಾತಿ ಇರುವೆ.

ಆ. ಜೋಡಿಯಾಗಿ ಓದಿ.

ಕಟ್ಟಿರುವೆ – ನೀನಿರುವೆ
ಹಿಂಡು – ದಂಡು
ಬಂಡು – ಗಂಡು
ದುಡಿವೆ – ಬಿಡುವೆ

೩. ಬಿಡಿಸಿದಂತೆ ಓದಿ.

ನಿಮ್ಮೀ – ನಿಮ್ಮ + ಈ
ಚಿಕ್ಕವರೊಳಗೆ – ಚಿಕ್ಕವರು + ಒಳಗೆ
ಚಳಿಮಳೆಯೆನ್ನದೆ – ಚಳಿಮಳೆ + ಎನ್ನದೆ
ಸಣ್ಣವನಾದರು – ಸಣ್ಣವನು + ಆದರು

೪. ಮಾದರಿಯಂತೆ ಉಳಿದ ಪದಗಳನ್ನು ಪದ್ಯದಿಂದ ಆರಿಸಿ ಬರೆಯಿರಿ.

ಮಾದರಿ: ಆಸೆ – ಬಯಸೆ
ಕೊಡುವೆ –
ಕರೆತರುವೆ –
ಕರಿದು –

ಮಾದರಿ: ಕಾಣು – ಕಂಡರೆ
ಬರು –
ಹೊರಡು –

೫. ಬಿಟ್ಟ ಸಾಲುಗಳನ್ನು ಪೂರ್ತಿ ಮಾಡಿ.

ಅ. ಇರುವೇ ____________________
____
____
____________________ ಕರೆತರುವೆ.

ಆ. ಬೇಟೆಗೆ ____________________
____
____
____________________ ಗಂಡು.

ಇ. ನಿನ್ನಯ ಬಣ್ಣವು ____________________

____

____

____________________ ಕರೆಕರೆದು.

೬. ಖಾಲಿ ಬಿಟ್ಟ ಸ್ಥಳಗಳನ್ನು ತುಂಬಿ.

ಅ. ಇರುವೆಗಳ ಗುಂಪಿಗೆ ________ ಕರೆಯುತ್ತಾರೆ.

ಆ. ಇರುವೆ ಮತ್ತೊಂದು ಇರುವೆಯನ್ನು ________ ಮಾತನಾಡಿಸುತ್ತದೆ.

ಇ. ಇರುವೆಗಳು ಸರತಿಯ ಸಾಲು ________ ಕಾಣುತ್ತದೆ.

ಈ. ಇರುವೆ ಸಣ್ಣದಾದರೂ ________ ಹಿರಿದು.

ಮೈಸೂರು ಹುಲಿ

"ಮೈಸೂರು ಹುಲಿ" ಎಂದು ಹೆಸರು ಪಡೆದ ಧೀರ ಯಾರು ಗೊತ್ತೇ? ಅವನೇ ಟಿಪ್ಪುಸುಲ್ತಾನ. ಹಿಂದೆ ಮೈಸೂರನ್ನು ಹೈದರಾಲಿ ಎಂಬುವನು ಆಳಿದನು. ಹೈದರಾಲಿಯ ಮಗನೇ ಟಿಪ್ಪುಸುಲ್ತಾನ.

ಟಿಪ್ಪು ಬಾಲ್ಯದಲ್ಲಿಯೇ ತುಂಬ ಧೈರ್ಯಶಾಲಿಯಾಗಿದ್ದನು. ಹೈದರಾಲಿಯು ಟಿಪ್ಪುವಿಗೆ ಕುದುರೆ ಸವಾರಿ, ಕತ್ತಿವರಸೆ ಮುಂತಾದ ಯುದ್ಧಕಲೆಗಳನ್ನು ಕಲಿಸಿದ್ದನು. ಟಿಪ್ಪು ಎಷ್ಟು ಶೂರನಾಗಿದ್ದನೋ ಅಷ್ಟೇ ಬುದ್ಧಿವಂತನೂ ಹೌದು. ಅವನು ಕನ್ನಡ, ಪರ್ಷಿಯನ್ ಭಾಷೆಗಳನ್ನು ಚೆನ್ನಾಗಿ ತಿಳಿದಿದ್ದನು.

ಹೈದರಾಲಿಯ ತರುವಾಯ ಟಿಪ್ಪು ಪಟ್ಟಕ್ಕೆ ಬಂದನು. ಆಗ ಬ್ರಿಟಿಷರು ನಮ್ಮ ದೇಶವನ್ನು ಆಕ್ರಮಿಸತೊಡಗಿದ್ದರು. ಅವರು ಮೈಸೂರನ್ನು ಗೆಲ್ಲಲು ಹಲವಾರು ಬಾರಿ ದಾಳಿ ಮಾಡಿದರು. ಟಿಪ್ಪು ಅವರನ್ನು ಧೈರ್ಯದಿಂದ ಎದುರಿಸಿದನು.

ಕೊನೆಗೊಮ್ಮೆ ಬ್ರಿಟಿಷರು ದೊಡ್ಡ ಸೈನ್ಯದೊಡನೆ ಬಂದರು. ಟಿಪ್ಪುವಿನ ಮೇಲೆ ಯುದ್ಧ ಸಾರಿದರು. ರಾಜಧಾನಿಯಾದ ಶ್ರೀರಂಗಪಟ್ಟಣವನ್ನು ಮುತ್ತಿದರು. ಟಿಪ್ಪು ವೀರಾವೇಶದಿಂದ ಬ್ರಿಟಿಷರನ್ನು ಎದುರಿಸಿದನು. ತನ್ನ ಜೀವದ ಆಸೆಯನ್ನು ಬಿಟ್ಟು ಹೋರಾಡಿದನು. ವೀರ ಮರಣವನ್ನು ಅಪ್ಪಿದನು.

ಇಲಿಯಾಗಿ ಬಹುಕಾಲ ಬಾಳುವುದಕ್ಕಿಂತ ಹುಲಿಯಾಗಿ ಕೆಲವು ಕಾಲ ಬದುಕುವುದು ಮೇಲೆಂದು ಟಿಪ್ಪು ನಂಬಿದ್ದನು. ಟಿಪ್ಪು ನಾಡಿಗಾಗಿ ಪ್ರಾಣಕೊಟ್ಟ ವೀರ. ಅವನ ಹೆಸರು ಅಚ್ಚಳಿಯದೆ ಉಳಿದಿದೆ.

"ಮೈಸೂರು ಹುಲಿ, ನಾಡಿನ ಕಲಿ"

ಅಭ್ಯಾಸ

೧. ಈ ಪ್ರಶ್ನೆಗಳಿಗೆ ಉತ್ತರಿಸಿ.

ಅ. ಮೈಸೂರು ಹುಲಿ ಎಂದು ಯಾರು ಹೆಸರು ಪಡೆದಿದ್ದರು?
ಆ. ಬಾಲ್ಯದಲ್ಲಿ ಟಿಪ್ಪು ಯಾವ ಯಾವ ಯುದ್ಧಕಲೆಗಳನ್ನು ಕಲಿತಿದ್ದನು?
ಇ. ಯಾರ ತರುವಾಯ ಟಿಪ್ಪು ಪಟ್ಟಕ್ಕೆ ಬಂದನು?
ಈ. ಮೈಸೂರಿನ ಮೇಲೆ ಯಾರು ದಾಳಿ ಮಾಡಿದರು?
ಉ. ಟಿಪ್ಪು ಬ್ರಿಟಿಷರೊಡನೆ ಹೇಗೆ ಹೋರಾಡಿದನು?
ಊ. ಟಿಪ್ಪುವಿನ ನಂಬಿಕೆ ಏನಾಗಿತ್ತು?

೨. ಓದಿ.

ಅ. ರಾಜಧಾನಿ, ಧೈರ್ಯಶಾಲಿ, ಯುದ್ಧಕಲೆ, ಬುದ್ಧಿವಂತ, ಆಕ್ರಮಿಸು, ಅಚ್ಚಳಿಯದೆ, ವೀರಾವೇಶ, ಸೈನ್ಯ.

ಆ. ಟಿಪ್ಪು ಎಷ್ಟು ಶೂರನಾಗಿದ್ದನೋ ಅಷ್ಟೇ ಬುದ್ಧಿವಂತನೂ ಹೌದು. ಇಲಿಯಾಗಿ ಬಹುಕಾಲ ಬಾಳುವುದಕ್ಕಿಂತ ಹುಲಿಯಾಗಿ ಒಂದೇ ದಿನ ಬಾಳುವುದು ಮೇಲು.

೩. ಮಾದರಿಯಂತೆ ಉಳಿದ ರೂಪಗಳನ್ನು ಹೇಳಿ.

ಮಾದರಿ: ಬಾಳು–ಬಾಳುವುದು–ಬಾಳುವುದಕ್ಕಿಂತ

ತಳ್ಳು –
ಆಳು –
ಸಾರು –
ಹೋರಾಡು –

೪. ಮಾದರಿಯಂತೆ ಬದಲಾಯಿಸಿ.

ಮಾದರಿ: ನಾಡು – ನಾಡಿಗಾಗಿ

ಊರು –
ಸವಾರಿ –
ಭಾಷೆ –
ಹೆಸರು –

೫. ಮಾದರಿಯಂತೆ ಕೂಡಿಸಿ ಬರೆಯಿರಿ.

ಮಾದರಿ: ಧೈರ್ಯಶಾಲಿ + ಆಗಿದ್ದನು – ಧೈರ್ಯಶಾಲಿಯಾಗಿದ್ದನು.

ಶಕ್ತಿಶಾಲಿ + ಆಗಿದ್ದನು –
ಬಲಶಾಲಿ + ಆಗಿದ್ದನು –
ವಿನಯಶಾಲಿ + ಆಗಿದ್ದನು –

ಮಾದರಿ: ಶೂರ + ಆಗಿದ್ದನು – ಶೂರನಾಗಿದ್ದನು.
ಧೀರ + ಆಗಿದ್ದನು –
ಬುದ್ಧಿವಂತ + ಆಗಿದ್ದನು
ವೀರ + ಆಗಿದ್ದನು –

೬. ಮಾದರಿಯಂತೆ ವಾಕ್ಯಗಳನ್ನು ಸೇರಿಸಿ.

ಮಾದರಿ: ಟಿಪ್ಪು ಶೂರನಾಗಿದ್ದನು.
ಅಷ್ಟೇ ಬುದ್ಧಿವಂತನೂ ಹೌದು.

ಟಿಪ್ಪು ಎಷ್ಟು ಶೂರನಾಗಿದ್ದನೋ ಅಷ್ಟೇ ಬುದ್ಧಿವಂತನೂ ಹೌದು.

ಅ. ಅವನು ಪಂಡಿತನಾಗಿದ್ದನು.
ಅಷ್ಟೇ ಗುಣವಂತನೂ ಹೌದು.

ಆ. ರಾಮು ವೀರನಾಗಿದ್ದನು.
ಅಷ್ಟೇ ಚತುರನೂ ಹೌದು.

೭. ಮಾದರಿಯಂತೆ ವಾಕ್ಯಗಳನ್ನು ಕೂಡಿಸಿ.

ಮಾದರಿ: ಹೈದರಾಲಿ ಟಿಪ್ಪುವಿಗೆ ಕುದುರೆ ಸವಾರಿಯನ್ನು ಕಲಿಸಿದ್ದನು.
ಹೈದರಾಲಿ ಟಿಪ್ಪುವಿಗೆ ಕತ್ತಿವರಸೆಯನ್ನು ಕಲಿಸಿದ್ದನು.
ಹೈದರಾಲಿ ಟಿಪ್ಪುವಿಗೆ ಕುದುರೆ ಸವಾರಿಯನ್ನೂ ಕತ್ತಿವರಸೆಯನ್ನೂ ಕಲಿಸಿದ್ದನು.

ಅ. ಸಂತೆಯಲ್ಲಿ ಅವಳು ಬಳೆಯನ್ನು ಕೊಂಡಳು.
ಸಂತೆಯಲ್ಲಿ ಅವಳು ಆಟಿಕೆಯನ್ನು ಕೊಂಡಳು.

ಆ. ನಾವು ಪಾಠಗಳನ್ನು ಓದಿದೆವು.
ನಾವು ಅಭ್ಯಾಸಗಳನ್ನು ಓದಿದೆವು.

೮. ಮಾದರಿಯಂತೆ ಎರಡು ವಾಕ್ಯಗಳನ್ನು ಬರೆಯಿರಿ.

ಮಾದರಿ: ಇಲಿಯಾಗಿ ಬಹುಕಾಲ ಬಾಳುವುದಕ್ಕಿಂತ ಹುಲಿಯಾಗಿ ಕೆಲವು ಕಾಲ ಬದುಕುವುದು ಮೇಲು.

ಸೂಚನೆ: ಕಿತ್ತೂರು ಚೆನ್ನಮ್ಮ, ಬೆಳವಡಿ ಮಲ್ಲಮ್ಮ, ಕೆಳದಿ ಚೆನ್ನಮ್ಮ, ರಾಣಿ ಅಬ್ಬಕ್ಕದೇವಿ, ಸಂಗೊಳ್ಳಿರಾಯಣ್ಣ ಮೊದಲಾದವರ ಶೌರ್ಯದ ಕಥೆಗಳನ್ನು ಹೇಳಬಹುದು. ಕಲಿಸು, ತಿಳಿ ಪದಗಳಿಗೆ ಕಲಿಸಿದ್ದನು, ತಿಳಿದಿದ್ದನು ರೂಪಗಳಿರುವಂತೆ ಇತರ ಪದಗಳ ಇಂತಹ ರೂಪಗಳನ್ನೂ ದೇಶಭಕ್ತಿ, ರಾಷ್ಟ್ರೀಯ ಏಕತೆ ಮುಂತಾದವುಗಳನ್ನೂ ಮಕ್ಕಳಿಗೆ ಅರ್ಥವಾಗುವಂತೆ ತಿಳಿಸಿ ಹತ್ತಿರದ ಐತಿಹಾಸಿಕ ಸ್ಥಳಕ್ಕೆ ಅವರನ್ನು ಕರೆದುಕೊಂಡು ಹೋಗಿ ಅದರ ಮಹತ್ವವನ್ನು ವಿವರಿಸಬಹುದು.

ಪಾಠ ೨೩

ಸಹಬಾಳ್ವೆ

ಒಂದು ಕಾಡಿನಲ್ಲಿ ಆಲ, ಮಾವು, ಹಲಸು, ಜಾಲಿ, ಬೂರುಗ ಮುಂತಾದ ಮರಗಳು ಬೆಳೆದಿದ್ದವು. ಅವೆಲ್ಲವೂ ಸಂತೋಷದಿಂದ ಸಹಬಾಳ್ವೆ ನಡೆಸುತ್ತಿದ್ದುವು.

ಒಂದು ದಿನ ಮಾವಿನ ಮರವು ಜಾಲಿಯ ಮರವನ್ನು ಕುರಿತು "ನಾನು ರುಚಿಯಾದ ಹಣ್ಣು ಕೊಡುತ್ತೇನೆ. ನನ್ನ ಕಾಯಿಯಿಂದ ಚಟ್ನಿ, ಉಪ್ಪಿನಕಾಯಿ ಮಾಡುತ್ತಾರೆ. ನೀನಾದರೋ ಸುಮ್ಮನೆ ಬೆಳೆದು ನಿಂತಿದ್ದೀಯೆ. ನಿನ್ನ ಮೈ ತುಂಬ ಮುಳ್ಳು. ನೀನು ನೆರಳನ್ನೂ ಕೊಡಲಾರೆ" ಎಂದು ಹೀಯಾಳಿಸಿತು.

ಮಾವಿನ ಮರದ ಈ ಮಾತಿನಿಂದ ಜಾಲಿಯ ಮರಕ್ಕೆ ಬೇಸರವಾಯಿತು. ಅದು ತನ್ನ ಅಳಲನ್ನು ಗಾಳಿಯಣ್ಣನಲ್ಲಿ ಹೇಳಿಕೊಂಡಿತು. "ನೋಡು ಗಾಳಿಯಣ್ಣಾ, ನಾವೆಲ್ಲರೂ ಈ ಕಾಡಿನಲ್ಲಿ ಒಗ್ಗಟ್ಟಿನಿಂದ ಸಹಬಾಳ್ವೆ ನಡೆಸುತ್ತಿದ್ದೇವೆ. ಆದರೆ ಮಾವಿನ ಮರ ನನ್ನನ್ನು ಹೀಯಾಳಿಸುತ್ತಿದೆ. ನೀನಾದರೂ ಅದಕ್ಕೆ ಬುದ್ಧಿ ಹೇಳು" ಎಂದಿತು.

ಅದಕ್ಕೆ ಗಾಳಿಯಣ್ಣ "ಮಾವಿನ ಮರಕ್ಕೆ ಸೊಕ್ಕು ಬಂದಿದೆ. ಸ್ವಲ್ಪ ನಿಲ್ಲು. ಉಪಾಯ ಮಾಡೋಣ" ಎಂದು ಒಮ್ಮೆ ಜೋರಾಗಿ ಬೀಸಿತು.

ಒಡನೆ ಮಾವಿನ ಮರದಲ್ಲಿದ್ದ ಕಾಯಿಗಳು ಪಟಪಟನೆ ಉದುರಿದುವು. ರೆಂಬೆಗಳು ಅಲ್ಲಾಡಿದುವು. "ಅಯ್ಯೋ, ಅಯ್ಯೋ" ಎಂದು ಕೂಗಿತು ಮಾವಿನ ಮರ.

ಆಗ ಬಳಿಯಲ್ಲಿದ್ದ ಆಲದ ಮರ ಮಾವಿನ ಮರವನ್ನು ಕುರಿತು "ನೋಡಿದೆಯಾ. ನೀನು ಮತ್ತೊಬ್ಬರನ್ನು ಹೀಯಾಳಿಸಿದೆ. ಆದ್ದರಿಂದ ನಿನಗೆ ಈ ಗತಿ ಬಂದಿತು. ಕಾಡಿನಲ್ಲಿರುವ ನಾವೆಲ್ಲರೂ ಸಂತೋಷದಿಂದ ಸಹಬಾಳ್ವೆ ನಡೆಸಬೇಕಲ್ಲವೇ?" ಎಂದಿತು. ಆಗ ಮಾವಿನ ಮರವು "ಹೌದು ನಿನ್ನ ಮಾತು ನಿಜ" ಎಂದು ಒಪ್ಪಿಕೊಂಡಿತು.

"ಒಂದಾಗಿ ನಡೆ ಸುಖವನ್ನು ಪಡೆ".

ಅಭ್ಯಾಸ

೧. ಈ ಪ್ರಶ್ನೆಗಳಿಗೆ ಉತ್ತರಿಸಿ.

ಅ. ಕಾಡಿನ ಮರಗಳು ಹೇಗೆ ಜೀವನ ನಡೆಸುತ್ತಿದ್ದುವು?

ಆ. ಮಾವಿನ ಮರ ಜನರಿಗೆ ಹೇಗೆ ಉಪಕಾರಿ?

ಇ. ಮಾವಿನ ಮರವು ಜಾಲಿಯ ಮರವನ್ನು ಏನೆಂದು ಹೀಯಾಳಿಸಿತು?

ಈ. ಜಾಲಿಯ ಮರ ಗಾಳಿಯಣ್ಣನಲ್ಲಿ ಏನೆಂದು ಕೇಳಿಕೊಂಡಿತು?

ಉ. ಮಾವಿನ ಮರ "ಅಯ್ಯೋ ಅಯ್ಯೋ" ಎಂದು ಏಕೆ ಕೂಗಿತು?

ಊ. ಆಲದ ಮರ ಏನೆಂದು ಹೇಳಿತು?

೨. ಓದಿ.

ಅ. ಸಹಬಾಳ್ವೆ, ಚಟ್ನಿ, ಉಪ್ಪಿನಕಾಯಿ, ಹೀಯಾಳಿಸು, ಅಳಲು, ಸೊಕ್ಕು ಒಗ್ಗಟ್ಟು, ಅಲ್ಲಾಡು, ಮುಳ್ಳು, ನೆರಳು.

ಆ. ನೀನಾದರೋ ಸುಮ್ಮನೆ ಬೆಳೆದು ನಿಂತಿದ್ದೀಯೆ.
"ಅಯ್ಯೋ, ಅಯ್ಯೋ" ಎಂದು ಕೂಗಿತು ಮಾವಿನ ಮರ.
ನೀನಾದರೂ ಅದಕ್ಕೆ ಬುದ್ಧಿ ಹೇಳು.
ಒಂದಾಗಿ ನಡೆ ಸುಖವನ್ನು ಪಡೆ.

೩. ಖಾಲಿ ಬಿಟ್ಟ ಸ್ಥಳದಲ್ಲಿ ಸರಿಯಾದ ಪದವನ್ನು ತುಂಬಿ.

ಅ. ಮಾವಿನ ಮರ ________ ಹಣ್ಣು ಕೊಡುತ್ತದೆ.
ಆ. ನೀನು ನೆರಳನ್ನೂ ________ .
ಇ. ಮಾವಿನ ಮರದಲ್ಲಿದ್ದ ಕಾಯಿಗಳು ________ ಉದುರಿದುವು.
ಈ. ಮಾವಿನ ಮರ ಜಾಲಿಯ ಮರವನ್ನು ________ .
ಉ. ನಾವೆಲ್ಲರೂ ________ ಸಹಬಾಳ್ವೆ ನಡೆಸುತ್ತಿದ್ದೇವೆ.

೪. ಮಾದರಿಯಂತೆ ಬದಲಾಯಿಸಿ.

ಮಾದರಿ: ನೀನು—ನೀನಾದರೋ, ಮಾದರಿ : ಮಾಡು – ಮಾಡೋಣ

ಅವನು –	ಕೇಳು –
ತಾನು –	ಕೊಡು –
ಅವಳು –	ಹಾಕು –

೫. ಮಾದರಿಯಂತೆ ಬದಲಾಯಿಸಿ.

ಮಾದರಿ: ನೀನು ಸುಮ್ಮನೆ ಬೆಳೆದು ನಿಂತಿದ್ದೀಯೆ.
ನೀನಾದರೋ ಸುಮ್ಮನೆ ಬೆಳೆದು ನಿಂತಿದ್ದೀಯೆ.

ಅ. ಅವರು ತುಂಬ ವಯಸ್ಸಾದವರು.
ಆ. ನಾನು ಶಕ್ತಿಯಿಲ್ಲದವನು.
ಇ. ಅದು ಪುಟ್ಟ ಮಗು.
ಈ. ನೀವು ಬಹಳ ಹಣವುಳ್ಳವರು.

೬. ಈ ಪದಗಳನ್ನು ವಾಕ್ಯಗಳಲ್ಲಿ ಬಳಸಿ.

ಪಟಪಟನೆ, ದರದರನೆ, ಸರಸರನೆ, ದಳದಳನೆ, ಲಟಲಟನೆ.

೭. ಮಾದರಿಯಂತೆ ವಾಕ್ಯಗಳನ್ನು ಬದಲಾಯಿಸಿ.

ಮಾದರಿ: ರೆಂಬೆ ಮುರಿಯುತ್ತದೆ. ರೆಂಬೆಗಳು ಮುರಿಯುತ್ತವೆ.
ರೆಂಬೆ ಮುರಿಯಿತು. ರೆಂಬೆಗಳು ಮುರಿದುವು.

ಅ. ಕೋಳಿ ಕೂಗುತ್ತದೆ.
ಆ. ಕಾಯಿ ಉದುರುತ್ತದೆ.
ಇ. ಮುಳ್ಳು ಚುಚ್ಚುತ್ತದೆ.
ಈ. ಮರ ಬೆಳೆಯುತ್ತದೆ.

೮. ಮಾದರಿಯಂತೆ ವಾಕ್ಯಗಳನ್ನು ಸೇರಿಸಿ.

ಮಾದರಿ: ಮಾವಿನ ಮರದಲ್ಲಿ ಕಾಯಿಗಳು ಇದ್ದುವು.
ಅವು ಪಟಪಟನೆ ಉದುರಿದುವು.
ಮಾವಿನ ಮರದಲ್ಲಿದ್ದ ಕಾಯಿಗಳು ಪಟಪಟನೆ ಉದುರಿದುವು.

ಅ. ಊರಿನಲ್ಲಿ ಗಾಡಿಗಳು ಇದ್ದುವು.
ಅವು ಸಂತೆಗೆ ಹೋದುವು.

ಆ. ಶಾಲೆಯಲ್ಲಿ ಹಿರಿಯ ಗುರುಗಳು ಇದ್ದರು.
ಅವರು ವರ್ಗವಾಗಿ ಹೋದರು.

ಸೂಚನೆ: 'ಹಕ್ಕಿಗಳು ಮತ್ತು ಬೇಡನ ಕಥೆ' ಇರುವೆಗಳು, ಜೇನುನೊಣಗಳು ಮುಂತಾದವುಗಳ ಸಹಬಾಳ್ವೆಯನ್ನು ಕುರಿತೂ, ಕಾಡಿನಲ್ಲಿ ಬೆಳೆಯುವ ವಿವಿಧ ಮರಗಳ ಹೆಸರುಗಳು ಹಾಗೂ ಅವುಗಳ ಉಪಯೋಗಗಳ ಬಗ್ಗೆಯೂ ಹೇಳಬಹುದು. ಮಾಡು ಪದದ ಮಾಡೋಣ ರೂಪವಿರುವಂತೆ ಇತರ ಪದಗಳ ಇದೇ ರೀತಿಯ ರೂಪಗಳನ್ನೂ 'ಪಟಪಟನೆ' ಶಬ್ದವನ್ನನುಸರಿಸಿ ಕೆಲವು ಅನುಕರಣ ಶಬ್ದಗಳನ್ನು ಪರಿಚಯಿಸಿ ಸ್ನೇಹ, ಸಹಕಾರ, ತನ್ನಂತೆ ಇತರರನ್ನು ಪರಿಗಣಿಸುವುದು, ಇತರರನ್ನು ಗೌರವಿಸುವುದು ಮುಂತಾದವುಗಳ ಬಗ್ಗೆಯೂ ಹೇಳಬಹುದು.

ಪಾಠ ೨೪

ನೆರಳು

ನನ್ನ ನೆರಳು ನನ್ನ ಹಿಂದೆ
ಎಲ್ಲಿ ಹೋಗೆ ಬರುವುದು
ದೊಡ್ಡ ನೆರಳು ಚಿಕ್ಕದಾಗಿ
ಬೆನ್ನು ಬಿಡದೆ ಇರುವುದು

ಚಿಕ್ಕನೆರಳು ದೊಡ್ಡದಾಗಿ
ಮತ್ತೆ ಹಿಂದೆ ಬರುವುದು
ನಾನು ಕೆಂಪು ಆದರೆನ್ನ
ನೆರಳು ಕಪ್ಪು ಇರುವುದು

ಕಣ್ಣು ಕಿವಿ ಮೂಗು ಬಾಯಿ
ಎನ್ನ ನೆರಳಿಗಿರುವುವು
ಆದರೇನು ಮಾತುಕತೆ –
ತಿಂಡಿ ಅದಕೆ ಇಲ್ಲವು



ನನ್ನ ಜೊತೆಗೆ ಯಾರೆ ಇರಲಿ
ನೆರಳು ಬೆನ್ನು ಬಿಡದಲೆ
ಎಲ್ಲೆಯಿರಲಿ ಬದುಕದದುವು
ನಾನು ಜೊತೆಗೆ ಇರದಲೆ

ಮರದ ನೆರಳು ಜನಕೆ ಹಿತವು
ನಿತ್ಯ ತಂಪನೀವುದು
ಎಮ್ಮ ನೆರಳು ಎಮ್ಮ ಗೂಡ
ಯಾರ ಹಿತವ ಬಯಸದು

– ಸರೋಜಿನಿ ಮಹಿಷಿ

೧. ಈ ಪ್ರಶ್ನೆಗಳಿಗೆ ಉತ್ತರಿಸಿ.

ಅ. ನನ್ನ ಹಿಂದೆ ಬರುವುದು ಯಾವುದು?

ಆ. ದೊಡ್ಡ ನೆರಳು ಏನಾಗುವುದು?

ಇ. ನಾನು ಕೆಂಪಗಿದ್ದರೂ ನನ್ನ ನೆರಳು ಹೇಗಿರುವುದು?

ಈ. ನನ್ನ ನೆರಳಿಗೆ ಏನೇನು ಇರುವುವು?

ಉ. ಏನಾದರೆ ನೆರಳು ಬದುಕಲಾರದು?

ಊ. ಮರದ ನೆರಳು ಏನನ್ನು ಕೊಡುವುದು?

೨. ಓದಿ.

ಅ. ಎನ್ನ – ನನ್ನ, ಎಮ್ಮ–ನಮ್ಮ, ಈವುದು – ಕೊಡುವುದು.

ಆ. ಬರುವುದು – ಇರುವುದು
ಬಿಡದಲೆ – ಇರದಲೆ
ಈವುದು – ಬಯಸದು

ಇ ಕಣ್ಣು ಕಿವಿ ಮೂಗು ಬಾಯಿ ಎನ್ನ ನೆರಳಿಗಿರುವುವು.
ನನ್ನ ನೆರಳಿಗೆ ಕಣ್ಣು, ಕಿವಿ, ಮೂಗು, ಬಾಯಿ ಇರುವುವು.
ಎಮ್ಮ ನೆರಳು ಎಮ್ಮಗೂಡ – ನಮ್ಮ ನೆರಳು ನಮ್ಮ ಕೂಡ.
ನೆರಳು ಬೆನ್ನು ಬಿಡದಲೆ – ನೆರಳು ಬೆನ್ನು ಬಿಡಲಾರದೆ.

೩. ಈ ಪದಗಳನ್ನು ಬಿಡಿಸಿದಂತೆ ಓದಿ.

ಆದರೆನ್ನ – ಆದರೆ + ಎನ್ನ
ನೆರಳಿಗಿರುವುವು – ನೆರಳಿಗೆ + ಇರುವುವು
ಎಲ್ಲೆಯಿರಲಿ – ಎಲ್ಲೆ + ಇರಲಿ
ಬದುಕದದುವು – ಬದುಕದು + ಅದುವು
ತಂಪನೀವುದು – ತಂಪನು + ಈವುದು
ಎಮ್ಮಗೂಡ – ಎಮ್ಮ + ಕೂಡ

೪. ಮಾದರಿಯಂತೆ ಇತರ ರೂಪಗಳನ್ನು ಬರೆಯಿರಿ.

ಮಾದರಿ: ಬಯಸು – ಬಯಸದು

ತಿಳಿಸು –

ತೋರಿಸು –

ಮುಗಿಸು –

೫. ಮಾದರಿಯಂತಹ ಎರಡು ಪದಗಳನ್ನು ಬರೆಯಿರಿ.

ಮಾದರಿ: ಜನಕೆ, ದಿನಕೆ; ________, ________

ತಂಪನು, ನೆರಳನು; ________, ________

೬. ಬಿಟ್ಟಸಾಲುಗಳನ್ನು ಪೂರ್ತಿಮಾಡಿ.

ಅ. ನನ್ನ ನೆರಳು ________ ಇರುವುದು.

ಆ. ಮರದ ________ ಬಯಸದು.

ಕೈ ಕೆಸರಾದರೆ ಬಾಯಿ ಮೊಸರು

ಅಂದು ಶಾಲೆಗೆ ರಜೆಯಿತ್ತು. ವೀಣಾ, ಸೂರಿ, ನಜೀರ್ ಮತ್ತು ಮೇರಿ ಶಾಲೆಯ ಅಂಗಳದಲ್ಲಿ ಕೂಡಿದರು.

"ಇಲ್ಲಿ ಗಿಡಗಳನ್ನು ನೆಟ್ಟು ಪುಟ್ಟ ತೋಟ ಮಾಡೋಣ. ನೀವೆಲ್ಲರೂ ಸಹಾಯ ಮಾಡುತ್ತೀರಾ?" ಎಂದು ಪ್ರಶ್ನೆ ಹಾಕಿದಳು ಮೇರಿ. "ಓಹೋ, ಆಗಲಿ" ಎಂದು ಎಲ್ಲರೂ ಗೋಣುಹಾಕಿದರು.



"ಹಾಗಾದರೆ ಈಗ ನೆಲ ಅಗೆಯಬೇಕು. ಗಿಡಗಳನ್ನು ನೆಡಬೇಕು. ಬರುವಿರಾ?" ಎಂದಳು ಮೇರಿ.

"ನಾವು ಬರುತ್ತೇವೆ" ಎಂದರು ವೀಣಾ, ನಜೀರ್. ಆದರೆ ಸೂರಿ ಸುಮ್ಮನೆ ನಿಂತುಕೊಂಡನು. "ನೀನು ನೆಲ ಅಗೆಯಲಾರೆಯಾ?" ಎಂದು ಮತ್ತೆ ಮೇರಿ ಕೇಳಿದಳು. "ಊಹೂಂ" ಎಂದನು ಸೂರಿ.

"ಸರಿ ಗಿಡಗಳಿಗೆ ನೀರು ಹನಿಸಬೇಕು. ಕಳೆ ಕೀಳಬೇಕು. ಗೊಬ್ಬರ ಹಾಕಬೇಕು. ಈ ಎಲ್ಲ ಕೆಲಸಗಳನ್ನು ನೀವು ಮಾಡಬಲ್ಲಿರಾ?" ಮೇರಿ ಎಲ್ಲರನ್ನೂ ಕೇಳಿದಳು. ನಜೀರ್, ವೀಣಾ "ನಾವು ಎಲ್ಲ ಕೆಲಸಗಳನ್ನೂ ಮಾಡಬಲ್ಲೆವು" ಎಂದರು.

"ನಾವು ನೆಡುವ ಸಸಿಗಳು ಬೆಳೆದು ಗಿಡಗಳಾಗುತ್ತವೆ. ಅವು ಸಿಹಿಯಾದ ಹಣ್ಣುಗಳನ್ನು ಕೊಡುತ್ತವೆ. ಆಗ ಯಾರು ಹಣ್ಣುಗಳನ್ನು ತಿನ್ನುತ್ತೀರಿ?" ಮೇರಿ ನಗುತ್ತ ಕೇಳಿದಳು. ವೀಣಾ, ಸೂರಿ, ನಜೀರ್ ಮೂವರೂ "ನಮಗೆ ಬೇಕು, ನಮಗೆ ಬೇಕು" ಎಂದರು.

ಆಗ ಮೇರಿ "ನನ್ನೊಡನೆ ವೀಣಾ, ನಜೀರ್ ನೀವಿಬ್ಬರೂ ಕೆಲಸ ಮಾಡಲು ಸಿದ್ಧರಿರುವಿರಿ. ನಮಗೆ ಹಣ್ಣು ತಿನ್ನುವ ಹಕ್ಕಿದೆ. ನೆಲ ಅಗೆಯಲು, ಗಿಡ ನೆಡಲು, ನೀರು ಹನಿಸಲು ಸೂರಿ ಒಪ್ಪಲಿಲ್ಲ. ಆದ್ದರಿಂದ ಅವನಿಗೆ ಹಣ್ಣು ತಿನ್ನುವ ಹಕ್ಕಿಲ್ಲ" ಎಂದಳು.

ಸೂರಿಯ ಮುಖ ಸಪ್ಪಗಾಯಿತು. ಒಡನೆಯೇ "ನಾನೂ ನೆಲ ಅಗೆಯುತ್ತೇನೆ. ಗಿಡ ನೆಡುತ್ತೇನೆ. ನೀರು ಹನಿಸುತ್ತೇನೆ" ಎಂದನು ಸೂರಿ. ಮೇರಿ ಸೂರಿಯ ಮುಖ ನೋಡಿ ನಸುನಕ್ಕಳು.

"ಸರಿ, ಬನ್ನಿ, ಎಲ್ಲರೂ ಸೇರಿ ದುಡಿಯೋಣ. ಕೈಕೆಸರಾದರೆ ಬಾಯಿ ಮೊಸರು" ಎಂದು ಮೇರಿ ಹೇಳಿದಳು. ಎಲ್ಲರೂ ಗುದ್ದಲಿ, ಸನಿಕೆ ಹಿಡಿದು ಕೆಲಸಕ್ಕೆ ಹೊರಟರು.

ಅಭ್ಯಾಸ

೧. ಈ ಪ್ರಶ್ನೆಗಳಿಗೆ ಉತ್ತರಿಸಿ.

ಅ. ಮೇರಿ ಗೆಳೆಯರನ್ನು ಏನೆಂದು ಕೇಳಿದಳು?

ಆ. ನೆಲ ಅಗೆದು ಗಿಡ ನೆಡಲು ಕೇಳಿದಾಗ ಸೂರಿ ಏನು ಮಾಡಿದನು?

ಇ. ತೋಟ ಮಾಡಲು ಏನೇನು ಕೆಲಸ ಮಾಡಬೇಕೆಂದು ಮೇರಿ ಹೇಳಿದಳು?

ಈ. ಯಾರು ಹಣ್ಣುಗಳನ್ನು ತಿನ್ನುತ್ತೀರಿ? ಎಂದು ಏಕೆ ಮೇರಿ ನಗುತ್ತ ಕೇಳಿದಳು?

ಉ. ಸೂರಿಯ ಮುಖ ಏಕೆ ಸಪ್ಪಗಾಯಿತು?

ಊ. ಹಣ್ಣು ತಿನ್ನುವ ಹಕ್ಕು ಯಾರಿಗಿದೆ?

೨. ಓದಿ.

ಅ. ಗೋಣು, ಗೊಬ್ಬರ, ಹನಿಸು, ಸಿದ್ಧ, ಕೆಸರು, ಮೊಸರು.

ಆ. ನೀವೆಲ್ಲರೂ ಸಹಾಯ ಮಾಡುತ್ತೀರಾ?
ನೀನು ನೆಲ ಅಗೆಯಲಾರೆಯಾ?
ಎಲ್ಲರೂ ಸೇರಿ ದುಡಿಯೋಣ.

೩. ಖಾಲಿ ಬಿಟ್ಟ ಸ್ಥಳಗಳಲ್ಲಿ ಸರಿಯಾದ ಪದಗಳನ್ನು ತುಂಬಿ.

ಅ. ಗೆಳೆಯರು ಶಾಲೆಯ ________ ಕೂಡಿದರು.

ಆ. "ಓಹೋ, ಆಗಲಿ" ಎಂದು ಎಲ್ಲರೂ ________.

ಇ. "ನಾನು ನೆಲ ________ " ಎಂದನು.

ಈ. ಸೂರಿಯ ಮುಖ ________.

ಉ. "ಸರಿ ಬನ್ನಿ" ಎಲ್ಲರೂ ಸೇರಿ ________.

೪. ಮಾದರಿಯಂತೆ ಬದಲಾಯಿಸಿ.

ಮಾದರಿ: ಮಾಡು – ಮಾಡುತ್ತೀಯಾ? – ಮಾಡುತ್ತೀರಾ?

ನೋಡು –

ಹನಿಸು –

ದುಡಿ –

ಒಪ್ಪು –

೫. ಮಾದರಿಯಂತೆ ಉಳಿದ ರೂಪಗಳನ್ನು ಹೇಳಿರಿ.

ಮಾದರಿ: ಅಗೆ – ಅಗೆಯಲಾರೆ, ಕೇಳು – ಕೇಳಲಾರೆ

ತೆಗೆ –	ಹಾಡು –
ತೊಳೆ –	ನುಗ್ಗು –
ಬೆಳೆ –	ನಿಲ್ಲು –

ಮಾದರಿಯಂತೆ ಕೂಡಿಸಿ ಓದಿ.

ಮಾದರಿ: ಸಿದ್ಧರು + ಇರುವಿರಿ – ಸಿದ್ಧರಿರುವಿರಿ.

ಸ್ನೇಹಿತರು + ಇರುವಿರಿ –

ಗೆಳೆಯರು + ಇರುವಿರಿ –

ಚತುರರು + ಇರುವಿರಿ –

ಬುದ್ಧಿವಂತರು + ಇರುವಿರಿ –

ಮಾದರಿಯಂತೆ ಬದಲಾಯಿಸಿ.

ಮಾದರಿ: ನೀನು ನೆಲ ಅಗೆಯಲಾರೆ. ನೀನು ಕಳೆ ಕೀಳಬಲ್ಲೆ.

ನೀನು ನೆಲ ಅಗೆಯಲಾರೆಯಾ? ನೀನು ಕಳೆ ಕೀಳಬಲ್ಲೆಯಾ?

ಅ. ನೀನು ಹಣ್ಣು ತಿನ್ನಲಾರೆ

ಆ. ನೀನು ಚಿತ್ರ ಬರೆಯಲಾರೆ

ಇ. ನೀನು ಕಳೆ ಕೀಳಲಾರೆ

ಅ. ನೀನು ಗೊಬ್ಬರ ಹಾಕಬಲ್ಲೆ

ಆ. ನೀನು ಹಾಡು ಹಾಡಬಲ್ಲೆ

ಇ. ನೀನು ನೀರು ಹನಿಸಬಲ್ಲೆ

ಮಾದರಿಯಂತೆ ಎರಡೆರಡು ವಾಕ್ಯಗಳನ್ನು ರಚಿಸಿ.

ಮಾದರಿ: ನಾನು ಅಗೆಯಬಲ್ಲೆನು.

ನಾನು ಅಗೆಯಲಾರೆನು.

ಅ. ಆಡಬಲ್ಲೆನು – ಆಡಲಾರೆನು

ಆ. ನೆಡಬಲ್ಲೆನು – ನೆಡಲಾರೆನು

ಇ. ತಿನ್ನಬಲ್ಲೆವು – ತಿನ್ನಲಾರೆವು

ಈ. ಸಾಕಬಲ್ಲಿರಿ – ಸಾಕಲಾರಿರಿ

ಸೂಚನೆ: ದುಡಿಮೆಯ ಹಿರಿಮೆಯನ್ನು ಹೇಳುವ "ಹನಿ ಹನಿ ಗೂಡಿದರೆ ಹಳ್ಳ ತೆನೆ ತೆನೆ ಕೂಡಿದರೆ ಬಳ್ಳ" ಎಂಬ ಕೆಲಸದ ಮಹತ್ವವನ್ನು ತಿಳಿಸುವ ಕಥೆಗಳು, ಘಟನೆಗಳು, ಚಟುವಟಿಕೆಗಳು ಮುಂತಾದವನ್ನು ಹೇಳಬಹುದು. 'ಗೋಣುಹಾಕು' ಎಂಬ ನುಡಿಗಟ್ಟಿನ ಬಳಕೆ ಮತ್ತು – ಲಾರೆ, – ಬಲ್ಲೆ ಗಳ ಬಳಕೆಯನ್ನೂ ವಿವರಿಸಬಹುದು. ಪ್ರತಿದಿನವೂ ಒಂದು ಚಿಕ್ಕ ವಾಕ್ಯಾವಳಿ (ಪ್ಯಾರಾ)ಯನ್ನು ಪ್ರತಿ ಮಾಡಿಕೊಂಡು ಬರಲು ತಿಳಿಸಬೇಕು.

ನಮ್ಮ ನಾಡು

ನಮ್ಮದು ಕರ್ನಾಟಕ ರಾಜ್ಯ. ಇದು ಭಾರತದ ದಕ್ಷಿಣ ಭಾಗದಲ್ಲಿದೆ. ಆಂಧ್ರ ಪ್ರದೇಶ, ಕೇರಳ, ಮಹಾರಾಷ್ಟ್ರ, ತಮಿಳುನಾಡು ಮತ್ತು ಗೋವಾ ನಮ್ಮ ನೆರೆರಾಜ್ಯಗಳು. ಬೆಂಗಳೂರು ಕರ್ನಾಟಕದ ರಾಜಧಾನಿ.

ಕರ್ನಾಟಕವು ಉದ್ದವಾದ ಸಮುದ್ರತೀರ, ವಿಶಾಲವಾದ ಬಯಲುಸೀಮೆ, ಎತ್ತರವಾದ ಘಟ್ಟಗಳಿಂದ ಕೂಡಿದ ಸುಂದರ ನಾಡು. ಇಲ್ಲಿಯ ಕಾಡುಗಳು ಹಚ್ಚ ಹಸುರಾಗಿದ್ದು ನೋಡಲು ಸುಂದರವಾಗಿವೆ.

ಕಾವೇರಿ, ತುಂಗಾ, ಭದ್ರಾ, ಶರಾವತಿ, ಕೃಷ್ಣಾ ಮುಂತಾದ ನದಿಗಳು ನಾಡನ್ನು ಫಲವತ್ತಾಗಿ ಮಾಡಿವೆ. ಈ ನದಿಗಳಿಗೆ ಅಲ್ಲಲ್ಲಿ ಅಣೆಕಟ್ಟುಗಳನ್ನು ಕಟ್ಟಿದ್ದಾರೆ. ಇವುಗಳಿಂದ ಬೇಸಾಯಕ್ಕೆ ನೀರು ಸಿಗುತ್ತದೆ. ಇಲ್ಲಿ ಭತ್ತ, ಕಬ್ಬು, ರಾಗಿ, ಜೋಳ, ಶೇಂಗಾ ಮುಂತಾದ ಬೆಳೆ ಬೆಳೆಯುತ್ತಾರೆ.

ಇವಲ್ಲದೆ ತೆಂಗು, ಅಡಿಕೆ, ಕಾಫಿ, ಏಲಕ್ಕಿ, ಹತ್ತಿ ಮುಂತಾದ ಬೆಳೆಗಳಿಗೂ ಕರ್ನಾಟಕ ಪ್ರಸಿದ್ಧವಾಗಿದೆ. ತೀರಪ್ರದೇಶದಲ್ಲಿ ಮೀನುಗಾರಿಕೆ ಮುಖ್ಯ ಕಸುಬಾಗಿದೆ.

ಶ್ರೀರಂಗಪಟ್ಟಣ, ಶೃಂಗೇರಿ, ನಂಜನಗೂಡು, ಕೂಡಲಸಂಗಮ, ಉಡುಪಿಗಳಲ್ಲಿ ಪ್ರಸಿದ್ಧ ದೇವಾಲಯಗಳಿವೆ. ಜೋಗ ಮತ್ತು ಶಿವನ ಸಮುದ್ರಗಳಲ್ಲಿ ಜಲಪಾತಗಳಿವೆ. ಇಲ್ಲಿ ವಿದ್ಯುತ್ ಉತ್ಪಾದನಾ ಕೇಂದ್ರಗಳೂ ಇವೆ.

ಬಾದಾಮಿಯ ಗುಹೆಗಳು, ಐಹೊಳೆ, ಪಟ್ಟದಕಲ್ಲು, ಸೋಮನಾಥಪುರ, ಬೇಲೂರು, ಹಳೇಬೀಡುಗಳ ದೇವಾಲಯಗಳು

ಮತ್ತು ಶ್ರವಣಬೆಳಗೊಳದ ಗೊಮ್ಮಟ ಮೂರ್ತಿ ಶಿಲ್ಪಕಲೆಗೆ ಪ್ರಸಿದ್ಧವಾಗಿವೆ. ಬಿಜಾಪುರದ ಗೋಳಗುಮ್ಮಟವು ನೋಡಲು ಭವ್ಯವಾಗಿದೆ. ಹಂಪೆಯಲ್ಲಿ ವಿಜಯನಗರ ಸಾಮ್ರಾಜ್ಯದ ಅವಶೇಷಗಳನ್ನು ಕಾಣಬಹುದು.

ನಮ್ಮ ರಾಜ್ಯದ ಕಾಡುಗಳಲ್ಲಿ ಗಂಧದ ಮರಗಳು ಹೆಚ್ಚಾಗಿ ಬೆಳೆಯುತ್ತವೆ. ಇದರಿಂದಾಗಿ ರಾಜ್ಯಕ್ಕೆ 'ಗಂಧದ ಗುಡಿ' ಎಂದೂ ಹೆಸರು ಬಂದಿದೆ.

ರಾಜ್ಯದಲ್ಲಿ ಚಿನ್ನ, ಕಬ್ಬಿಣ ಮತ್ತು ತಾಮ್ರದ ಅದಿರು ಹೆಚ್ಚಾಗಿ ಸಿಗುತ್ತವೆ. ಪಟ್ಟಣ ಪ್ರದೇಶಗಳಲ್ಲಿ ಅನೇಕ ಕಾರ್ಖಾನೆಗಳಿವೆ. ಅವುಗಳಲ್ಲಿ ಕಬ್ಬಿಣ, ಉಕ್ಕು, ಕಾಗದ, ಸಕ್ಕರೆ, ರೇಷ್ಮೆ, ಗಂಧದ ಎಣ್ಣೆ, ಟೆಲಿಫೋನು, ಗಡಿಯಾರ, ವಿಮಾನ ಮತ್ತು ಟಿವಿ ಮುಂತಾದವನ್ನು ತಯಾರಿಸುತ್ತಾರೆ. ಹಾಸನದಲ್ಲಿ ಉಪಗ್ರಹ ಕೇಂದ್ರವೂ ಇದೆ.

ಈ ನಾಡಿನ ರಾಜ್ಯಭಾಷೆ ಕನ್ನಡ. ಇಲ್ಲಿ ತಮಿಳು, ಮಲೆಯಾಳಂ, ತೆಲುಗು, ಹಿಂದಿ, ಮರಾಠಿ, ತುಳು, ಉರ್ದು ಮತ್ತಿತರ ಭಾಷೆಗಳನ್ನು ಮಾತನಾಡುವವರೂ ಇದ್ದಾರೆ. ಎಲ್ಲರೂ ಸ್ನೇಹದಿಂದ ಸಹಬಾಳ್ವೆ ನಡೆಸುತ್ತಿದ್ದಾರೆ.

ಅಭ್ಯಾಸ

೧. ಈ ಪ್ರಶ್ನೆಗಳಿಗೆ ಉತ್ತರಿಸಿ.

ಅ. ಕರ್ನಾಟಕ ಭಾರತದ ಯಾವ ಭಾಗದಲ್ಲಿದೆ?

ಆ. ಕರ್ನಾಟಕದ ನೆರೆರಾಜ್ಯಗಳು ಯಾವುವು?

ಇ. ನಾಡಿನ ಮುಖ್ಯ ನದಿಗಳು ಯಾವುವು?

ಈ. ರಾಜ್ಯದ ಎರಡು ಮುಖ್ಯ ಜಲಪಾತಗಳನ್ನು ಹೆಸರಿಸಿ.

ಉ. ಕರ್ನಾಟಕದ ಮುಖ್ಯ ಬೆಳೆಗಳು ಯಾವುವು?

ಊ. ಯಾವ ದೇವಾಲಯಗಳು ಶಿಲ್ಪಕಲೆಗೆ ಹೆಸರಾಗಿವೆ?

ಋ. ಕರ್ನಾಟಕಕ್ಕೆ 'ಗಂಧದ ಗುಡಿ' ಎಂಬ ಹೆಸರು ಏಕೆ ಬಂದಿದೆ?

ಎ. ಕರ್ನಾಟಕದ ರಾಜ್ಯಭಾಷೆ ಯಾವುದು?

ಏ. ನಮ್ಮ ನಾಡಿನಲ್ಲಿ ಯಾವ ಯಾವ ವಸ್ತುಗಳನ್ನು ತಯಾರಿಸುತ್ತಾರೆ?

೨. ಓದಿ.

ಅ. ನೆರೆರಾಜ್ಯ, ಫಲವತ್ತು, ಹಚ್ಚಹಸುರು, ಮೀನುಗಾರಿಕೆ, ಅಣೆಕಟ್ಟು, ಪ್ರಸಿದ್ಧ, ವಿದ್ಯುತ್, ಉತ್ಪಾದಕ, ಕೇಂದ್ರ, ಕಾರ್ಖಾನೆ, ರಾಜ್ಯಭಾಷೆ, ಶಿಲ್ಪಕಲೆ, ಭವ್ಯ.

ಆ. ಇದರಿಂದಾಗಿ ರಾಜ್ಯಕ್ಕೆ 'ಗಂಧದ ಗುಡಿ' ಎಂದೂ ಹೆಸರುಬಂದಿದೆ. ಇಲ್ಲಿ ತಮಿಳು, ಮಲೆಯಾಳಂ, ತೆಲುಗು, ಹಿಂದಿ, ಮರಾಠಿ, ತುಳು, ಉರ್ದು, ಮತ್ತಿತರ ಭಾಷೆಗಳನ್ನು ಮಾತನಾಡುವವರೂ ಇದ್ದಾರೆ.

೩. ಹೊಂದಿಸಿ ಓದಿ.

ಅ. ಶೇಂಗಾ	೧. ಕರ್ನಾಟಕದ ನೆರೆರಾಜ್ಯ
ಆ. ಜೋಗ	೨. ಶಿಲ್ಪಕಲೆಗೆ ಹೆಸರಾದುದು
ಇ. ಕಾವೇರಿ	೩. ವಿಜಯನಗರ ಸಾಮ್ರಾಜ್ಯ
ಈ. ಹಂಪೆ	೪. ರಾಜ್ಯದ ಒಂದು ನದಿ
ಉ. ತಮಿಳುನಾಡು	೫. ಒಂದು ಬೆಳೆ
ಊ. ಸೋಮನಾಥಪುರ	೬. ಜಲಪಾತ
ಋ. ಮೀನುಗಾರಿಕೆ	೭. ಸಕ್ಕರೆ ಕಾರ್ಖಾನೆ
	೮. ಮೀನು ಹಿಡಿಯುವುದು

೪. ಮಾದರಿಯಂತೆ ಬದಲಾಯಿಸಿ.

ಮಾದರಿ: ಮಾತನಾಡು—ಮಾತನಾಡುವವರು, ಮಾದರಿ: ಮೀನು—ಮೀನುಗಾರಿಕೆ

ಆಟವಾಡು —	ತೋಟ —
ತಿನ್ನು —	ಹಾಡು —
ನೋಡು —	ಹೈನು —
ಕುಳಿತುಕೊಳ್ಳು —	ಎದೆ —

೫. ಖಾಲಿ ಬಿಟ್ಟ ಸ್ಥಳಗಳಲ್ಲಿ ಸರಿಯಾದ ಪದಗಳನ್ನು ತುಂಬಿ.

ಅ. ಬಿಜಾಪುರದ __________ ನೋಡಲು ಭವ್ಯವಾಗಿದೆ.

ಆ. ರಾಜ್ಯದಲ್ಲಿ ಚಿನ್ನ, ಕಬ್ಬಿಣ ಮತ್ತು ತಾಮ್ರದ ________ ಹೆಚ್ಚಾಗಿ ಸಿಗುತ್ತವೆ.

ಇ. ಹಾಸನದಲ್ಲಿ ________ ಕೇಂದ್ರವೂ ಇದೆ.

ಈ. ಬೆಂಗಳೂರು ಕರ್ನಾಟಕದ ________.

ಉ. ನದಿಗಳಿಗೆ ಅಲ್ಲಲ್ಲಿ ________ ಕಟ್ಟಿದ್ದಾರೆ.

೬. ಮಾದರಿಯಂತೆ ಸೂಕ್ತ ಪದಗಳನ್ನು ತುಂಬಿ.

ಮಾದರಿ: ಪಟ್ಟಣ ಪ್ರದೇಶಗಳಲ್ಲಿ ಅನೇಕ ಕಾರ್ಖಾನೆಗಳಿವೆ.
ಅವುಗಳಲ್ಲಿ ಕಬ್ಬಿಣ, ಉಕ್ಕು, ವಿಮಾನ ಮುಂತಾದುವನ್ನು ತಯಾರಿಸುತ್ತಾರೆ.

ಅ. ಊರಿನಲ್ಲಿ ಅನೇಕ ಅಂಗಡಿಗಳಿವೆ.
________ ಮನೆ ಬಳಕೆಯ ಪದಾರ್ಥಗಳು ಸಿಗುತ್ತವೆ.

ಆ. ತಾಲ್ಲೂಕಿನಲ್ಲಿ ಒಂದು ಸಕ್ಕರೆ ಕಾರ್ಖಾನೆ ಇದೆ.
________ ದಿನವೊಂದಕ್ಕೆ ಒಂದು ನೂರು ಮೂಟೆ ಸಕ್ಕರೆ ತಯಾರಿಸುತ್ತಾರೆ.

ಇ. ಆ ಮನೆಯಲ್ಲಿ ಒಂದು ದೊಡ್ಡ ಕೋಣೆಯಿದೆ.
________ ಸುಮಾರು ನೂರು ಜನ ಊಟಕ್ಕೆ ಕುಳಿತುಕೊಳ್ಳಬಹುದು.

೭. ಈ ಮಾದರಿಯಂತೆ ವಾಕ್ಯಗಳನ್ನು ರಚಿಸಿ.

ಮಾದರಿ: ಸುಂದರ – ಕಾಡುಗಳು ನೋಡಲು ಸುಂದರ.

ಭವ್ಯ, ಪ್ರಸಿದ್ಧ, ವಿಶಾಲ, ಎತ್ತರ, ಮುಖ್ಯ.

೮. ಮಾದರಿಯಂತೆ ಎರಡು ವಾಕ್ಯಗಳನ್ನು ಬರೆಯಿರಿ.

ರಾಜ್ಯಕ್ಕೆ 'ಗಂಧದ ಗುಡಿ' ಎಂದೂ ಹೆಸರು ಬಂದಿದೆ.

ಸೂಚನೆ: ಕರ್ನಾಟಕದ ಬಗ್ಗೆ ಇನ್ನೂ ಹೆಚ್ಚಿನ ಮಾಹಿತಿಯನ್ನು ಕೊಡಬಹುದು. ಈ ಪಾಠದಲ್ಲಿರುವ ಮಾಹಿತಿಯಂತೆ ಮಕ್ಕಳ ತಾಲ್ಲೂಕು ಹಾಗೂ ಜಿಲ್ಲೆಯ ಬಗ್ಗೆ ವಿವರಗಳನ್ನೂ ಉದ್ದವಾದ, ಎತ್ತರವಾದ, ಮುಂತಾದ ಪದಗಳ ಬಳಕೆ ಹಾಗೂ ತನ್ನ ರಾಜ್ಯದ, ದೇಶದ ಸಂಪತ್ತು ಮತ್ತು ಹಿರಿಮೆಯನ್ನು ತಿಳಿಸಬಹುದು. ಕರ್ನಾಟಕದ ಹಿರಿಮೆಯನ್ನು ಹೇಳುವ ಜಯ ಕರ್ನಾಟಕ ಮಾತೆ, ಚೆಲುವ ಕನ್ನಡ ನಾಡು ಮುಂತಾದ ಗೀತೆಗಳನ್ನು ಹಾಡಿಸಬಹುದು.

ಪಾಠ ೨೭

ಕನ್ನಡ ನಾಡು

ಕನ್ನಡ ಕನ್ನಡ ಕನ್ನಡವೆಂದುಲಿ
ಕನ್ನಡ ನಾಡಿನ ಓ ಕಂದ
ಕನ್ನಡ ಭಾಷೆಯ ಕೀರುತಿ ಹಬ್ಬಿಸು
ಕನ್ನಡ ತಾಯಿಗೆ ಆನಂದ ॥

ಕಾರ್ಕಳ, ಬೆಳುಗೊಳ, ಐಹೊಳೆ, ಹರಿಹರ
ಹಂಪೆ, ಹಳೆಬೀಡು, ಬೇಲೂರು
ಶಿಲೆಯಲಿ ಜೀವನ ಕಲೆಯನು ಬೆಳಗುವ
ಶಿಲ್ಪಕಲೆಗಳಿಗೆ ತವರೂರು ॥

ತುಂಗೆ, ಭದ್ರೆ, ಕಾವೇರಿ, ಶರಾವತಿ
ಕೃಷ್ಣ, ಕಾಳಿ ವರ ವೇದೆಯರು
ಜಲವನು ಹರಿಯಿಸಿ, ಬೆಳೆಯನು ಬೆಳೆಯಿಸಿ
ಸಲಹುವ ನದಿಗಳ ನೆಲೆವೀಡು ॥

ರನ್ನ, ಜನ್ನ, ವರಪಂಪ, ಲಕುಮೀಶ
ರಾಘವ, ಹರಿಹರ, ಮುದ್ದಣರು
ಕನ್ನಡ ಸಾಹಿತ್ಯ ಕಲೆಯನು ಬೆಳೆಸಿದ
ಕನ್ನಡ ಕವಿಗಳ ತವರೂರು ॥

ರಾಣಿ ಚೆನ್ನಮ್ಮ, ಸಂಚಿ ಹೊನ್ನಮ್ಮ
ಉಡುತಡಿ ಊರಿನ ಅಕ್ಕಮ್ಮ
ಕನ್ನಡ ನಾಡಿಗೆ ಕೀರುತಿ ತಂದಿಹ
ಅಮರ ರಮಣಿಯರ ಕರುನಾಡು ॥

ಕನ್ನಡ ಕನ್ನಡ ಕನ್ನಡವೆಂದುಲಿ
ಕನ್ನಡ ನಾಡಿನ ಓ ಕಂದ
ಕನ್ನಡ ಕೀರುತಿ ನಾಲ್ಕೆಡೆ ಹಬ್ಬಿಸು
ಕನ್ನಡ ತಾಯಿಗೆ ಆನಂದ

— ಬೇಡರೆಡ್ಡಿಹಳ್ಳಿ ಪಂಪಣ್ಣ

ಅಭ್ಯಾಸ

೧. ಈ ಪ್ರಶ್ನೆಗಳಿಗೆ ಉತ್ತರಿಸಿ.

ಅ. ಕನ್ನಡ ತಾಯಿಗೆ ಆನಂದವಾಗಲು ಕನ್ನಡ ಕಂದ ಏನು ಮಾಡಬೇಕು?
ಆ. ಶಿಲ್ಪಕಲೆಗೆ ತವರೂರಾಗಿರುವ ಸ್ಥಳಗಳು ಯಾವುವು?
ಇ. ಕನ್ನಡ ನಾಡು ಯಾವ ಯಾವ ನದಿಗಳ ನೆಲೆವೀಡು?
ಈ. ಕನ್ನಡ ನಾಡು ಯಾವ ಯಾವ ಕವಿಗಳ ತವರೂರು?
ಉ. ಕನ್ನಡ ನಾಡಿಗೆ ಕೀರ್ತಿ ತಂದಿರುವ ರಮಣಿಯರು ಯಾರು?

೨. ಓದಿ.

ಅ. ಉಲಿ — ಹೇಳು, ಕೀರುತಿ — ಕೀರ್ತಿ, ಶಿಲೆ — ಕಲ್ಲು, ಸಲಹು — ಕಾಪಾಡು, ನಾಲ್ಕೆಡೆ — ನಾಲ್ಕುಕಡೆ, ತಂದಿಹ — ತಂದಿರುವ.

ಆ. ಓ ಕಂದ — ಆನಂದ
ಶಿಲೆ — ಕಲೆ
ಬೆಳೆಯನು — ಬೆಳೆಯಿಸಿ

ಇ. ಕನ್ನಡ ಕನ್ನಡ ಕನ್ನಡವೆಂದುಲಿ — ಕನ್ನಡ ಕನ್ನಡ ಕನ್ನಡವೆಂದು ಹೇಳು

೩. ಮಾದರಿಯಂತೆ ಉಳಿದ ರೂಪಗಳನ್ನು ಹೇಳಿ.

ಮಾದರಿ: ಬೆಳೆಯನ್ನು — ಬೆಳೆಯನು
ಕಲೆಯನ್ನು —
ಜಲವನ್ನು —

೭. ಮಾದರಿಯಂತೆ ಬದಲಾಯಿಸಿ.

ಮಾದರಿ: ಬೆಳೆಯಿಸು – ಬೆಳೆಸಿದ, ಮಾದರಿ : ಸಲಹು – ಸಲಹಿದ

ಹರಿಯಿಸು – ಬೆಳಗು –

ಕುಡಿಯಿಸು – ಕೊಡಿಸು –

ತೆರೆಯಿಸು – ಹಬ್ಬಿಸು –

೮. ಬಿಟ್ಟ ಸಾಲುಗಳನ್ನು ಪೂರ್ತಿಮಾಡಿ.

ಅ. ಕಾರ್ಕಳ ____________

____

____

____________ ತವರೂರು॥

ಆ. ರಾಣಿ ಚೆನ್ನಮ್ಮ ____________

____

____

____________ ಕರುನಾಡು॥

೯. ಮಾದರಿಯಂತೆ ಎರಡು ಪದಗಳನ್ನು ಬರೆಯಿರಿ.

ಮಾದರಿ: ಶಿಲ್ಪಕಲೆ, ನಾಟ್ಯಕಲೆ; ____________ , ____________

ಪಾಠ ೨೮

ಜೈ ಜವಾನ್ ಜೈ ಕಿಸಾನ್

ಒಂದು ಸಂಜೆ ನಾಲ್ಕಾರು ಮಕ್ಕಳು ಗಂಗಾನದಿಯ ದಂಡೆಯ ಮೇಲೆ ನಿಂತಿದ್ದರು. ಅವರು ನದಿಯನ್ನು ದಾಟಿ ಊರು ಸೇರಬೇಕಿತ್ತು. ಅಷ್ಟರಲ್ಲಿ ದೋಣಿಯೊಂದು ಅಲ್ಲಿಗೆ ಬಂದಿತು. ಮಕ್ಕಳು ದೋಣಿ ಏರಿದರು. ಅದು ಹೊರಟಿತು. ಬಾಲಕನೊಬ್ಬನು ಮಾತ್ರ ದೋಣಿ ಏರಲಿಲ್ಲ. ದೋಣಿಯವನಿಗೆ ಕೊಡುವಷ್ಟು ಹಣ ಅವನಲ್ಲಿ ಇರಲಿಲ್ಲ. ಮತ್ತೊಬ್ಬರನ್ನು ಕೇಳಿ ಹಣ ಪಡೆಯುವುದು ಅವನಿಗೆ ಹಿಡಿಸಲಿಲ್ಲ. ನದಿ ತುಂಬಿ ಹರಿಯುತ್ತಿತ್ತು. ಕತ್ತಲಾಗುತ್ತ ಬಂದಿತ್ತು. ಆದರೆ ಬಾಲಕ ಸ್ವಲ್ಪವೂ ಅಂಜಲಿಲ್ಲ. ಧೈರ್ಯವಾಗಿ ನೀರಿನಲ್ಲಿ ಧುಮುಕಿದನು. ಈಜಿ ದಡ ಸೇರಿದನು. ಆ ಧೀರ ಬಾಲಕನೇ ಲಾಲ್ ಬಹಾದ್ದೂರ್. ಲಾಲ್ ಬಹಾದ್ದೂರ್ ಮುಂದೆ ದೇಶದ ಪ್ರಧಾನ ಮಂತ್ರಿಯಾದರು.

ಅವರು ಉತ್ತರ ಪ್ರದೇಶದ ಮೊಘಲ್‌ಸರಾಯ್‌ನಲ್ಲಿ ೧೯೦೪ರ ಅಕ್ಟೋಬರ್ ೨ರಂದು ಹುಟ್ಟಿದರು. ಅವರ ತಂದೆ ಶಾರದಾಪ್ರಸಾದ್, ತಾಯಿ ರಾಮದುಲಾರಿ ದೇವಿ. ಲಾಲ್ ಬಹಾದ್ದೂರರು ಬಾಲ್ಯದಲ್ಲಿಯೇ ತಂದೆಯನ್ನು ಕಳೆದುಕೊಂಡರು. ಅಜ್ಜನ ಊರಿನಲ್ಲಿ ಪ್ರಾಥಮಿಕ ಶಿಕ್ಷಣವನ್ನು ಪಡೆದರು. ಪ್ರೌಢಶಿಕ್ಷಣವನ್ನು ವಾರಣಾಸಿಯಲ್ಲಿ ಮುಗಿಸಿದರು. ಕಾಶಿ ವಿದ್ಯಾಪೀಠದಿಂದ 'ಶಾಸ್ತ್ರಿ' ಪದವಿ ಪಡೆದರು.

ಶಾಸ್ತ್ರಿಯವರು ೧೯೬೪ರಲ್ಲಿ ದೇಶದ ಪ್ರಧಾನಿಯಾದರು. ಅವರು ಜೀವನವಿಡೀ ನಾಡಿಗಾಗಿ ದುಡಿದರು. 'ಜೈ ಜವಾನ್ ಜೈ ಕಿಸಾನ್' ಎಂಬ ಘೋಷಣೆಯಿಂದ ದೇಶದ ರೈತರನ್ನೂ ಯೋಧರನ್ನೂ ಹುರಿದುಂಬಿಸಿದರು. 'ರಾಷ್ಟ್ರಪ್ರೇಮಿ', 'ಶಾಂತಿದೂತ' ಎಂಬ ಹೆಸರು ಗಳಿಸಿದರು. ೧೯೬೬ರಲ್ಲಿ ಅವರು ತೀರಿಕೊಂಡರು. ರಾಷ್ಟ್ರವು ಅವರ ದೇಶಸೇವೆಗಾಗಿ 'ಭಾರತರತ್ನ' ಪ್ರಶಸ್ತಿಯನ್ನು ನೀಡಿ ಗೌರವಿಸಿದೆ.

ಅಭ್ಯಾಸ

೧. ಈ ಪ್ರಶ್ನೆಗಳಿಗೆ ಉತ್ತರಿಸಿ.

ಅ. ಮಕ್ಕಳು ಎಲ್ಲಿ ನಿಂತಿದ್ದರು?
ಆ. ಬಾಲಕನೊಬ್ಬನು ಏಕೆ ದೋಣಿ ಏರಲಿಲ್ಲ?
ಇ. ಬಾಲಕನು ಹೇಗೆ ನದಿ ದಾಟಿದನು?
ಈ. ಲಾಲ್ ಬಹಾದ್ದೂರರು ಎಲ್ಲಿ ಹುಟ್ಟಿದರು?
ಉ. ಯಾವ ಘೋಷಣೆಯಿಂದ ಲಾಲ್ ಬಹಾದ್ದೂರರು ರೈತರನ್ನೂ ಸೈನಿಕರನ್ನೂ ಹುರಿದುಂಬಿಸಿದರು?
ಊ. ದೇಶವು ಶಾಸ್ತ್ರಿಯವರಿಗೆ ಯಾವ ಪ್ರಶಸ್ತಿಯನ್ನು ನೀಡಿ ಗೌರವಿಸಿತು?

೨. ಓದಿ.

ಅ. ನಾಲ್ಕಾರು, ಧೈರ್ಯ, ಧುಮುಕು, ಪ್ರಧಾನಮಂತ್ರಿ, ಬಾಲ್ಯ, ಪ್ರೌಢಶಿಕ್ಷಣ, ವಿದ್ಯಾಪೀಠ, ಘೋಷಣೆ, ಯೋಧ, ರಾಷ್ಟ್ರಪ್ರೇಮಿ, ಶಾಂತಿದೂತ, ಭಾರತರತ್ನ, ಪ್ರಶಸ್ತಿ.

ಆ. ಅವರು ನದಿಯನ್ನು ದಾಟಿ ಊರು ಸೇರಬೇಕಿತ್ತು.
ಆ ಧೀರ ಬಾಲಕನೇ ಲಾಲ್ ಬಹಾದ್ದೂರ್.
ಶಾಸ್ತ್ರಿಯವರು ಜೀವನವಿಡೀ ನಾಡಿಗಾಗಿ ದುಡಿದರು.

೩. ಮಾದರಿಯಂತೆ ಬದಲಾಯಿಸಿ.

ಮಾದರಿ: ಕೊಡು – ಕೊಡುವಷ್ಟು, ಮಾದರಿ : ಪಡೆ – ಪಡೆಯುವುದು

ಕಾಣು –	ತೆರೆ –
ತುಂಬು –	ತೆಗೆ –
ಕೇಳು –	ತೊಳೆ –
ಏರು –	ನಡೆ –

೪. ಹೊಂದಿಸಿ.

೧೯೬೬	ಶಾಸ್ತ್ರಿಯವರು ಹುಟ್ಟಿದ ವರ್ಷ
೧೯೬೪	ಶಾಸ್ತ್ರಿಯವರು ತೀರಿಕೊಂಡ ವರ್ಷ
೧೯೦೪	ಶಾಸ್ತ್ರಿಯವರು ಪ್ರಧಾನಿಯಾದ ವರ್ಷ

೫. ಖಾಲಿ ಬಿಟ್ಟ ಸ್ಥಳಗಳಲ್ಲಿ ಸರಿಯಾದ ಪದಗಳನ್ನು ತುಂಬಿ.

ಅ. ಮತ್ತೊಬ್ಬರನ್ನು ಕೇಳಿ ಹಣಪಡೆಯುವುದು ಬಾಲಕನಿಗೆ _________ .

ಆ. ನದಿ ತುಂಬಿ _________ .

ಇ. ಕಾಶಿ ವಿದ್ಯಾಪೀಠದಿಂದ _________ ಪದವಿ ಪಡೆದರು.

ಈ. ಶಾಸ್ತ್ರಿಯವರು _________ ನಾಡಿಗಾಗಿ ದುಡಿದರು.

ಉ. ರಾಷ್ಟ್ರವು ಅವರ ದೇಶಸೇವೆಗಾಗಿ _________ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ.

೬. ಮಾದರಿಯಂತೆ ಕೂಡಿಸಿ ವಾಕ್ಯಗಳನ್ನು ರಚಿಸಿ.

ಮಾದರಿ: ಮತ್ತೊಬ್ಬರನ್ನು ಕೇಳುವುದು.
ಹಣ ಪಡೆಯುವುದು.
ಅವನಿಗೆ ಹಿಡಿಸಲಿಲ್ಲ.

ಮತ್ತೊಬ್ಬರನ್ನು ಕೇಳಿ ಹಣ ಪಡೆಯುವುದು ಅವನಿಗೆ ಹಿಡಿಸಲಿಲ್ಲ.

ಅ. ಪೇಟೆಗೆ ಹೋಗುವುದು, ಕೆಲಸ ಮಾಡುವುದು ಅವರಿಗೆ ಹಿಡಿಸಲಿಲ್ಲ.

ಆ. ಗದ್ದೆಗೆ ತೆರಳುವುದು, ಕಳೆ ಕೀಳುವುದು ನಮಗೆ ಇಷ್ಟ.

ಇ. ಚಿತ್ರ ಬರೆಯುವುದು, ಬಣ್ಣಹಾಕುವುದು ಅವಳಿಗೆ ಇಷ್ಟವಿಲ್ಲ.

ಈ. ಪುಸ್ತಕವನ್ನು ಓದುವುದು, ಕಥೆ ಹೇಳುವುದು ನಿಮಗೆ ಇಷ್ಟ.

೭. ಹೊಂದಿಸಿ ಓದಿ.

ಅ. ಮಕ್ಕಳು	೧. ತುಂಬಿ ಹರಿಯುತ್ತಿತ್ತು
ಆ. ಬಾಲಕ	೨. ದೋಣಿ ಏರಿದರು
ಇ. ದೋಣಿ	೩. ನೀರಿನಲ್ಲಿ ಧುಮುಕಿದನು
ಈ. ನದಿ	೪. ರೈತರನ್ನೂ ಯೋಧರನ್ನೂ ಹುರಿದುಂಬಿಸಿದರು
ಉ. ಲಾಲ್ ಬಹಾದ್ದೂರರು	೫. ಹೊರಟಿತು
	೬. ಅವನಿಗೆ ಹಿಡಿಸಲಿಲ್ಲ

೮. ಮಾದರಿಯಂತೆ ಎರಡು ವಾಕ್ಯಗಳನ್ನು ಬರೆಯಿರಿ.

ಮಾದರಿ: ಆ ಧೀರ ಬಾಲಕನೇ ಲಾಲ್ ಬಹಾದ್ದೂರ್.
ದೋಣಿಯವನಿಗೆ ,ಕೊಡುವಷ್ಟು ಹಣ ಅವನಲ್ಲಿ ಇರಲಿಲ್ಲ.

ಸೂಚನೆ: 'ಜೈ ಜವಾನ್ ಜೈ ಕಿಸಾನ್' ಘೋಷಣೆಯ ವಿವರಣೆಯನ್ನೂ ಇಂತಹುದೇ ಹಲವಾರು ಅರ್ಥಪೂರ್ಣ ಘೋಷಣೆಗಳ ವಿವರಗಳನ್ನೂ ಲಾಲ್ ಬಹಾದ್ದೂರ್ ಶಾಸ್ತ್ರಿಯವರ ಬಗ್ಗೆ ಇನ್ನೂ ಹೆಚ್ಚು ವಿವರಗಳನ್ನೂ ಇತರ ಹಲವಾರು ರಾಷ್ಟ್ರೀಯ ನಾಯಕರ ಜೀವನ ಸಾಧನೆಗಳನ್ನೂ ಹೇಳಬಹುದು. ಏರು, ಹಿಡಿಸು ಇವುಗಳ ನಿಷೇಧ ರೂಪಗಳು ಏರಲಿಲ್ಲ, ಹಿಡಿಸಲಿಲ್ಲ. ಇದೇ ರೀತಿ ಹಲವಾರು ಪದಗಳ ರೂಪಗಳನ್ನು ಮತ್ತು ದೇಶಭಕ್ತಿ, ರಾಷ್ಟ್ರೀಯತೆ ಮೊದಲಾದವುಗಳ ಬಗ್ಗೆಯೂ ತಿಳಿಸಬಹುದು.

ಪಾಠ ೨೯

ಆಂಡ್ರೋಕ್ಲಿಸ್ ಮತ್ತು ಸಿಂಹ

ಕ್ಯಾರ್ಥೇಜ್ ರೋಮ್ ಸಾಮ್ರಾಜ್ಯದ ಒಂದು ನಗರ. ಅಲ್ಲಿಯ ಅರಸನ ಬಳಿ ಆಂಡ್ರೋಕ್ಲಿಸ್ ಎಂಬುವನು ಕೆಲಸ ಮಾಡುತ್ತಿದ್ದನು. ಅವನು ಪ್ರಾಮಾಣಿಕನಾಗಿದ್ದನು.

ಆಂಡ್ರೋಕ್ಲಿಸ್‌ನಿಗೆ ಅರಸನು ದಿನವೆಲ್ಲ ಕೆಲಸ ಕೊಡುತ್ತಿದ್ದನು. ಸರಿಯಾಗಿ ಊಟವನ್ನೂ ಕೊಡುತ್ತಿರಲಿಲ್ಲ. ಇದರಿಂದ ಅವನಿಗೆ ಬೇಸರವಾಗಿತ್ತು.

ಒಂದು ದಿನ ಕಾವಲುಗಾರರ ಕಣ್ಣುತಪ್ಪಿಸಿ ಕಾಡಿಗೆ ಓಡಿಹೋದನು. ಕಾಡಿನ ಗವಿಯಲ್ಲಿ ಒಂದು ರಾತ್ರಿ ಕಳೆದನು. ಬೆಳಗ್ಗೆ ಸಿಂಹವೊಂದು ಅಲ್ಲಿಗೆ ಕುಂಟುತ್ತ ಬಂದಿತು. ಆಂಡ್ರೋಕ್ಲಿಸ್‌ನಿಗೆ ಭಯವಾಯಿತು. ಓಡಲು ಪ್ರಯತ್ನಿಸಿದನು. ಆದರೆ ಅದು ಅವನ ಮುಂದೆಯೇ

ಬಂದುಬಿಟ್ಟಿತು. ತನ್ನ ಕುಂಟು ಕಾಲನ್ನು ಎತ್ತಿತು. ಅದರ ಕಾಲಿಗೆ ಮುಳ್ಳು ಚುಚ್ಚಿತ್ತು. ಆಂಡ್ರೋಕ್ಲಿಸ್ ನಿಧಾನವಾಗಿ ಮುಳ್ಳನ್ನು ತೆಗೆದನು. ಸಿಂಹಕ್ಕೆ ಸಮಾಧಾನವಾಯಿತು. ಅಂದಿನಿಂದ ಅವರಿಬ್ಬರೂ ಗೆಳೆಯರಾದರು.

ಆಂಡ್ರೋಕ್ಲಿಸ್‌ನು ಕಾಡಿನಲ್ಲಿ ಗಡ್ಡೆ ಗೆಣಸುಗಳನ್ನು ತಿಂದು ನಲಿದನು. ಬೆಟ್ಟಗುಡ್ಡಗಳಲ್ಲಿ ಅಲೆದು ಕುಣಿದನು.

ಒಂದು ದಿನ ಕಾಡಿಗೆ ಅರಸನ ಕಡೆಯವರು ಬಂದರು. ಅವರು ಆಂಡ್ರೋಕ್ಲಿಸ್‌ನನ್ನು ಗುರುತಿಸಿದರು. ಒಡನೆ ಹಿಡಿದು ಅರಸನ ಬಳಿಗೆ ಒಯ್ದರು.

ಆಗ ತಪ್ಪು ಮಾಡಿದವರಿಗೆ ಹಸಿದ ಸಿಂಹದೊಡನೆ ಸೆಣಸಾಡುವ ಶಿಕ್ಷೆ ಕೊಡುತ್ತಿದ್ದರು. ಅಂತೆಯೇ ಅರಸನು "ಆಂಡ್ರೋಕ್ಲಿಸ್‌ನನ್ನು ಹಸಿದ ಸಿಂಹದ ಬಾಯಿಗೆ ಕೊಟ್ಟುಬಿಡಿ" ಎಂದು ಹೇಳಿದನು.



ಊರ ಮುಂದಿನ ಬಯಲಿನಲ್ಲಿ ತಕ್ಕ ಸಿದ್ಧತೆಯಾಯಿತು. ಊರ ಜನರೆಲ್ಲ ಸೇರಿದರು. ಬೋನಿನಲ್ಲಿ ಕೂಡಿಹಾಕಿದ್ದ ಸಿಂಹವನ್ನು ಅವನ ಮೇಲೆ ಬಿಟ್ಟರು.

ಸಿಂಹವು ಗರ್ಜಿಸುತ್ತ ಆಂಡ್ರೋಕ್ಲಿಸ್‌ನನ್ನು ಸಮೀಪಿಸಿತು. ಕೂಡಲೆ 'ಗಕ್' ಎಂದು ನಿಂತುಬಿಟ್ಟಿತು. ಪ್ರೀತಿಯಿಂದ ಅವನ ಮೈಕೈ ನೆಕ್ಕಿತು. ಅದನ್ನು ಕಂಡ ಜನರು ಹೌಹಾರಿದರು. ಅರಸನು ತನ್ನ ಕಣ್ಣನ್ನು ತಾನೇ ನಂಬದಾದನು. ಅವನು ಆಂಡ್ರೋಕ್ಲಿಸ್‌ನನ್ನು ಹತ್ತಿರ ಕರೆದನು. ಅವನಿಂದ ಅವನ ಮತ್ತು ಸಿಂಹದ ಸ್ನೇಹದ ಬಗ್ಗೆ ತಿಳಿದನು. ಆಂಡ್ರೋಕ್ಲಿಸ್‌ನ ಧೈರ್ಯವನ್ನೂ, ಪ್ರಾಣಿದಯೆಯ ಗುಣವನ್ನೂ ಹೊಗಳಿದನು. ಒಡನೆ ಆಂಡ್ರೋಕ್ಲಿಸ್‌ನನ್ನೂ, ಸಿಂಹವನ್ನೂ ಬಿಟ್ಟುಬಿಟ್ಟನು.

ಅಭ್ಯಾಸ

೧. ಈ ಪ್ರಶ್ನೆಗಳಿಗೆ ಉತ್ತರಿಸಿ.

ಅ. ಆಂಡ್ರೋಕ್ಲಿಸ್‌ನಿಗೆ ಏಕೆ ಬೇಸರವಾಗಿತ್ತು?

ಆ. ಸಿಂಹವು ಕುಂಟುತ್ತ ಬರಲು ಕಾರಣವೇನು?

ಇ. ಆಂಡ್ರೋಕ್ಲಿಸ್ ಮತ್ತು ಸಿಂಹ ಹೇಗೆ ಗೆಳೆಯರಾದರು?

ಈ. ಆಗ ತಪ್ಪು ಮಾಡಿದವರಿಗೆ ಯಾವ ಶಿಕ್ಷೆ ಕೊಡುತ್ತಿದ್ದರು?

ಉ. ಸಿಂಹವು ಏಕೆ 'ಗಕ್' ಎಂದು ನಿಂತುಬಿಟ್ಟಿತು?

ಊ. ಜನರು ಏನನ್ನು ಕಂಡು ಹೌಹಾರಿದರು?

೨. ಓದಿ.

ಅ. ಪ್ರಾಮಾಣಿಕ, ಸಮಾಧಾನ, ಸಿದ್ಧತೆ, ಗರ್ಜಿಸು, ಹೌಹಾರು, ಶಿಕ್ಷೆ
ಸೆಣಸಾಡು, ಪ್ರಾಣಿದಯೆ, ಹೊಗಳು.

ಆ. ಆಂಡ್ರೋಕ್ಲಿಸ್‌ನಿಗೆ ಅರಸನು ದಿನವೆಲ್ಲ ಕೆಲಸ ಕೊಡುತ್ತಿದ್ದನು.
ಅಂದಿನಿಂದ ಅವರಿಬ್ಬರೂ ಗೆಳೆಯರಾದರು.
ಕೂಡಲೆ ಸಿಂಹವು 'ಗಕ್' ಎಂದು ನಿಂತುಬಿಟ್ಟಿತು.
ಆಂಡ್ರೋಕ್ಲಿಸ್‌ನನ್ನೂ ಸಿಂಹವನ್ನೂ ಬಿಟ್ಟುಬಿಟ್ಟನು.
ಅರಸನು ತನ್ನ ಕಣ್ಣನ್ನು ತಾನೇ ನಂಬದಾದನು.

೩. ಖಾಲಿ ಬಿಟ್ಟ ಸ್ಥಳಗಳಲ್ಲಿ ಸರಿಯಾದ ಪದಗಳನ್ನು ತುಂಬಿ.

ಅ. ಕ್ಯಾರ್ಥೇಜ್ ________ ದೇಶದ ಒಂದು ನಗರ.

ಆ. ಅರಸನು ಸರಿಯಾಗಿ ________ ಕೊಡುತ್ತಿರಲಿಲ್ಲ.

ಇ. ಆಂಡ್ರೋಕ್ಲಿಸ್ ಮುಳ್ಳನ್ನು ________ ತೆಗೆದನು.

ಈ. ಅಂದಿನಿಂದ ಅವರಿಬ್ಬರೂ ________ .

ಉ. ಅದನ್ನು ಕಂಡ ಜನರು ________ .

೪. ಮಾದರಿಯಂತೆ ಬಿಡಿಸಿ ಓದಿ.

ಮಾದರಿ: ಕೊಡುತ್ತಿರಲಿಲ್ಲ – ಕೊಡುತ್ತ + ಇರಲಿಲ್ಲ

ನಗುತ್ತಿರಲಿಲ್ಲ –

ಚುಚ್ಚುತ್ತಿರಲಿಲ್ಲ –

ಓಡಿ ಹೋಗುತ್ತಿರಲಿಲ್ಲ –

೫. ಮಾದರಿಯಂತೆ ಕೂಡಿಸಿ ಓದಿ.

ಮಾದರಿ: ಪ್ರಾಮಾಣಿಕ + ಆಗಿದ್ದನು – ಪ್ರಾಮಾಣಿಕನಾಗಿದ್ದನು

ಬಾಲಕ + ಆಗಿದ್ದನು –

ಹುಡುಗ + ಆಗಿದ್ದನು –

ನಾಯಕ + ಆಗಿದ್ದನು –

ಕಾವಲುಗಾರ + ಆಗಿದ್ದನು –

ಮಾದರಿ: ದಿನ + ಎಲ್ಲ – ದಿನವೆಲ್ಲ

ವಾರ + ಎಲ್ಲ–

ವರ್ಷ + ಎಲ್ಲ–

ಗುಡ್ಡ + ಎಲ್ಲ–

ಬೆಟ್ಟ + ಎಲ್ಲ–

೬. ಮಾದರಿಯಂತೆ ವಾಕ್ಯಗಳನ್ನು ಸೇರಿಸಿ.

ಮಾದರಿ: ಅರಸನು ಆಂಡ್ರೋಕ್ಲಿಸ್‌ನನ್ನು ಬಿಟ್ಟುಬಿಟ್ಟನು.

ಅರಸನು ಸಿಂಹವನ್ನು ಬಿಟ್ಟುಬಿಟ್ಟನು.

ಅರಸನು ಆಂಡ್ರೋಕ್ಲಿಸ್‌ನನ್ನೂ ಸಿಂಹವನ್ನೂ ಬಿಟ್ಟುಬಿಟ್ಟನು.

ಅ. ಗುರುಗಳು ಸೀಮೆಸುಣ್ಣವನ್ನು ಎತ್ತಿಕೊಂಡರು.

ಗುರುಗಳು ಪುಸ್ತಕವನ್ನು ಎತ್ತಿಕೊಂಡರು.

೮. ಜಾನಿ ಕಪ್ಪೆಯೋಟವನ್ನು ಅಭ್ಯಾಸ ಮಾಡಿದ್ದಾನೆ.
ಜಾನಿ ಜಿಂಕೆಯ ಜಿಗಿತವನ್ನು ಅಭ್ಯಾಸ ಮಾಡಿದ್ದಾನೆ.

೯. ಮಕ್ಕಳು ಚಿತ್ರವನ್ನು ತೆಗೆದುಕೊಂಡರು.
ಮಕ್ಕಳು ಕುಂಚವನ್ನು ತೆಗೆದುಕೊಂಡರು.

೭. ಮಾದರಿಯಂತೆ ಎರಡು ವಾಕ್ಯಗಳನ್ನು ರಚಿಸಿ.

ಮಾದರಿ: ಹಸು ಹಾಲು ಕೊಡುತ್ತಿತ್ತು. ಹಸು ಹಾಲು ಕೊಡುತ್ತಿರಲಿಲ್ಲ.
ತಿಳಿಸುತ್ತಿದ್ದನು – ತಿಳಿಸುತ್ತಿರಲಿಲ್ಲ.
ಪ್ರಯತ್ನಿಸುತ್ತಿದ್ದನು – ಪ್ರಯತ್ನಿಸುತ್ತಿರಲಿಲ್ಲ.
ಹಾಡುತ್ತಿದ್ದಳು – ಹಾಡುತ್ತಿರಲಿಲ್ಲ.

೮. ಈ ಕೆಳಗಿನವುಗಳನ್ನು ವಾಕ್ಯಗಳಲ್ಲಿ ಬಳಸಿ.
ತನ್ನ ಕಣ್ಣನ್ನು ತಾನೇ ನಂಬದಾಗು, ಕಣ್ಣು ತಪ್ಪಿಸು, ಹೌಹಾರು.

ಸೂಚನೆ: 'ದೇವದತ್ತ ಮತ್ತು ಸಿದ್ಧಾರ್ಥ' ಮತ್ತು 'ಶಿಬಿಚಕ್ರವರ್ತಿ' ಮುಂತಾದ ಪ್ರಾಣಿದಯೆಯನ್ನು ವಸ್ತುವಾಗಿ ಉಳ್ಳ ಕಥೆಗಳನ್ನು ತಿಳಿಸಬಹುದು. ಪ್ರಾಣಿದಯೆ, ಮಾನವೀಯತೆ ಬಗ್ಗೆಯೂ ವಿವರಿಸಬಹುದು.

ಪಾಠ ೩೦

ಐಕ್ಯಗಾನ



ನೆನೆನೆನೆದು ದಿನದಿನವು,
ದುಡಿದುಡಿದು ಜನಜನವು,
ಭಾರತದ ಸ್ವಾತಂತ್ರ್ಯಮೆರೆಸಿ; ಹೆಮ್ಮೆ!

ಸ್ವಾತಂತ್ರ್ಯ ಪಡೆದಿಹೆವು,
ತಲೆಯೆತ್ತಿ ನಡೆಯುವೆವು,
ವಜ್ರದೇಹಿಗಳಾವು; ಬನ್ನಿರೆಲ್ಲ.

ಸ್ವಾತಂತ್ರ್ಯವೇ ಪಕ್ಷ,
ಸ್ವಾತಂತ್ರ್ಯವೇ ಪಂಥ,
ಸ್ವಾತಂತ್ರ್ಯವೇ ಜಾತಿ-ಎನ್ನಿರೆಲ್ಲ.

ಭಾರತದ ಬಿಡುಗಡೆಗೆ
ಹೋರಾಡಿರುವ ನಮಗೆ
ಯಾರ ಭಯ? ನಾವಿಂದು ಮುಂದಾಗಿರೆ.

ಐಕ್ಯವೊಂದೇ ಮಂತ್ರ,
ಐಕ್ಯದಿಂದೆ ಸ್ವತಂತ್ರ,
ಐಕ್ಯಗಾನದಿ ರಾಷ್ಟ್ರ ತೇಲುತಿರಲಿ!

— ಕಯ್ಯಾರ ಕಿಞ್ಞಣ್ಣರೈ

ಅಭ್ಯಾಸ

೧. ಈ ಪ್ರಶ್ನೆಗಳಿಗೆ ಉತ್ತರಿಸಿ.

ಅ. ಭಾರತದ ಸ್ವಾತಂತ್ರ್ಯವನ್ನು ಹೇಗೆ ಮೆರೆಸಬೇಕು?
ಆ. ಸ್ವಾತಂತ್ರ್ಯವನ್ನು ಪಡೆದ ನಾವು ಹೇಗೆ ನಡೆಯುವೆವು?
ಇ. ಎಲ್ಲರೂ ಏನೆನ್ನಬೇಕು?
ಈ. ನಾವು ಏತಕ್ಕಾಗಿ ಹೋರಾಡಿದೆವು?
ಉ. ನಮ್ಮ ಮಂತ್ರ ಯಾವುದಾಗಿರಬೇಕು?
ಊ. ಯಾವುದರಿಂದಲೇ ಸ್ವತಂತ್ರ?

೨. ಓದಿ.

ಅ. ವಜ್ರದೇಹಿ – ವಜ್ರದಂತೆಗಟ್ಟಿಮುಟ್ಟಾದ ದೇಹವುಳ್ಳವರು.
ಆವು – ನಾವು
ಆ. ನೆನೆನೆನೆದು – ದುಡಿದುಡಿದು
ದಿನದಿನವು – ಜನಜನವು
ಪಡೆದಿಹೆವು – ನಡೆಯುವೆವು
ಮಂತ್ರ – ಸ್ವತಂತ್ರ
ಇ. ಐಕ್ಯಗಾನದಿ ರಾಷ್ಟ್ರತೇಲುತಿರಲಿ – ರಾಷ್ಟ್ರವು ಐಕ್ಯಗಾನದಲ್ಲಿ ತೇಲುತ್ತಿರಲಿ

೩. ಮಾದರಿಯಂತೆ ಕೂಡಿಸಿ ಓದಿ.

ಮಾದರಿ: ನೆನೆದು + ನೆನೆದು – ನೆನೆನೆನೆದು

ದುಡಿದು + ದುಡಿದು –

ದಣಿದು + ದಣಿದು –

ನಡೆದು + ನಡೆದು –

ಸುರಿದು + ಸುರಿದು –

ಮಾದರಿ: ಪಡೆದು + ಇಹೆವು – ಪಡೆದಿಹೆವು

ತೆಗೆದು + ಇಹೆವು –

ಬೆಳೆದು + ಇಹೆವು –

ನುಡಿದು + ಇಹೆವು –

ಮರೆದು + ಇಹೆವು –

೪. ಖಾಲಿ ಬಿಟ್ಟ ಸ್ಥಳಗಳಲ್ಲಿ ಸರಿಯಾದ ಪದಗಳನ್ನು ತುಂಬಿ.

ಅ. ಭಾರತದ ________ ಮೆರೆಸಿ; ಹೆಮ್ಮೆ!

ಆ. ಐಕ್ಯಗಾನದಿ ________ ತೇಲುತಿರಲಿ!

೫. ಖಾಲಿ ಬಿಟ್ಟ ಸಾಲುಗಳನ್ನು ಪೂರ್ತಿ ಮಾಡಿ.

ಅ. ಸ್ವಾತಂತ್ರ್ಯ ________
____
________ ಬನ್ನಿರೆಲ್ಲ!

ಆ. ಭಾರತದ ________
____
________ ಮುಂದಾಗಿರೆ.

೬. ಮಾದರಿಯಂತೆ ಉಳಿದ ಪದಗಳನ್ನು ಬರೆಯಿರಿ.

ಮಾದರಿ: ಬನ್ನಿರೆಲ್ಲ – ಎನ್ನಿರೆಲ್ಲ

ಇಂದು –

ಮಂತ್ರ –

ಭಾಷಾ ಆಟಗಳು

I. ಕೆಳಗಿನ ಮನೆಗಳಲ್ಲಿನ ಅಕ್ಷರಗಳನ್ನು ಎಡದಿಂದ ಬಲಕ್ಕೂ ಮೇಲಿನಿಂದ ಕೆಳಕ್ಕೂ ಓದಿ.

ಗ	ಮ	ನ
ಮ	ನ	ಸು
ನ	ಸು	ಕು

ಅ

ಕಿ	ಟ	ಕಿ
ಟ	ಗ	ರು
ಕಿ	ರು	ಬ

ಆ

ಪ	ದ	ಕ
ದ	ವ	ನ
ಕ	ನ	ಸು

ಇ

ಇವನ್ನು ಎರಡೂ ಕಡೆಯಿಂದ ಓದಿ.

ದ
ಗ ಗ

ಈ

ರ
ಸ ಸ

ಉ

ಮ
ನ ನ

ಊ

II. ೧. ಇವುಗಳಿಗೆ ಸರಿಹೊಂದುವ ಅಕ್ಷರಗಳು ಯಾವುವು?



ಅ



ಆ

ಸ
|
ಅ — ? — ಸ
|
ತ

೩

ಸ
|
ಹ — ? — ಗು
|
ಗ

ಈ

ಸ
|
ಅ — ? — ರಿ
|
ರಿ

ಉ

೧೦.

ಅ	ಬೆ	ಕೆ	ನೆ

?

ಳು

II.೨. ಚಿತ್ರದೊಂದಿಗೆ ಅಕ್ಷರ ಸೇರಿಸಿ ಓದಿ.

೧. 

ಉ ____________

೨.

ರು ____________

ಇ.  ಪೆ ______

ಈ. ಳು ______

III. ಅಕ್ಷರಗಳನ್ನು ಚಿತ್ರದೊಂದಿಗೆ ಸೇರಿಸಿ ಓದಿ.

ಅ. ಕಾಮನ ______

ಆ. ತಳಿರು  ______

ಇ. ಗಾರಿಕೆ ______

ಈ. ಗರಿ ________

IV. ಖಾಲಿ ಜಾಗದಲ್ಲಿ ಸೂಕ್ತವಾದ ಅಕ್ಷರ ಸೇರಿಸಿ.

ಅ. ಆ [ ] ಳು ಒಂದು ಸಾಕುಪ್ರಾಣಿ

ಆ. ಕ ಮ [ ] ಒಂದು ಹೂ

ಇ. [ ] ಡ ಗು ಸಮುದ್ರ ವಾಹನ

ಈ. ಕಾ [ ] ದ ಬರೆಯಲು ಉಪಯೋಗಿಸುವ ವಸ್ತು

ಉ. ರೂ ಪಾ [ ] ಹಣ

V. ಅರ್ಥದ ಸಹಾಯದಿಂದ ಬಿಟ್ಟ ಅಕ್ಷರಗಳನ್ನು ಕಂಡುಹಿಡಿಯಿರಿ.

ಅ	ಆ	ಇ	ಈ
[ ] ಡ [ ]	[ ] ಡ [ ]	[ ] ಡ [ ]	[ ] ಡ [ ]
ಒಡನೆ	ಸಾಗರ	ಆಭರಣ	ಹೊಟ್ಟೆ

VI. ಖಾಲಿ ಜಾಗದಲ್ಲಿ ಸೂಕ್ತವಾದ ಪದವನ್ನು ಸೇರಿಸಿ.

ಅ. ಹಗಲು ಸೂರ್ಯ, ______ ಚಂದ್ರ.

ಆ. ಇದ್ದಿಲು ಕಪ್ಪು, ಕೆಂಡ ________ .

ಇ. ಬೆಳಗ್ಗೆ ಬೆಟ್ಟ ಹತ್ತಿದ, ಸಂಜೆ ಬೆಟ್ಟ ________.

ಈ. ತಾಯಿಗಿಂತ ________, ಉಪ್ಪಿಗಿಂತ ರುಚಿಯಿಲ್ಲ.

VII. ಗುಂಪಿಗೆ ಸೇರದ ಪದದ ಅಡಿಯಲ್ಲಿ ಗೆರೆ ಹಾಕಿ ಗುರುತಿಸಿ.

ಅ. ಗಿಡ, ಸಸ್ಯ, ಜನ, ಮರ.

ಆ. ಹಣ, ರೂಪಾಯಿ, ದನ, ಧನ.

ಇ. ಸಂತೋಷ, ಸಂಗೀತ, ಆನಂದ, ಸಂತಸ.

ಈ. ಆಯಾಸ, ಆರಾಮ, ಸುಸ್ತು, ದಣಿವು

ಉ. ಅಮ್ಮ, ಅಕ್ಕ, ಚಿಕ್ಕಮ್ಮ, ತಮ್ಮ.

ಊ. ರೆಂಬೆ, ಎಲೆ, ನೆಲ, ಕಾಂಡ.

VIII. ಶಿಲ್ಪಕಲೆಗೆ ಹೆಸರಾದ ಊರುಗಳ ಹೆಸರುಗಳನ್ನು ಹುಡುಕಿ.

ಅ

ಬೇ	ಹ	ರು	ಳೆ
ಬೀ	ಲೂ	ಐ	ಡು
ಪ	ಹೊ	ಟ್ಟ	ಳೆ
ದ	ಕ	ರೂ	ಲ್ಲು

ಪ್ರಾಣಿಗಳು ಪಕ್ಷಿಗಳು ವಾಸಿಸುವ ಸ್ಥಳಗಳ ಹೆಸರುಗಳನ್ನು ಬರೆಯಿರಿ.

ಆ

ಗ	ಪ್ಪೊ	ಗೂ
ಡು	ವಿ	ಕೊ
ಟ್ಟಿ	ಗೆ	ದೆ
ಟ	ಗು	ರೆ
ಲಾ	ಹೆ	ಯ

IX. ಈ ಒಗಟುಗಳನ್ನು ಬಿಡಿಸಿ.

೧. ಗಿಡದ ತುಂಬ ಮಸಿ ಕೆಂಡ.

೨. ಹಚ್ಚನೆಯ ತೋಟದಲ್ಲಿ ಬೆಳ್ಳಿಯ ಗೂಟ.

೩. ದುಡ್ಡು ಕೊಟ್ಟು ತರುವುದು.
ಹೆಚ್ಚುತ್ತಾ ಅಳುವುದು.

೪. ಕರಿಯ ಹೊಲದಲ್ಲಿ ಸೂಜಿ ಬಿದ್ದಿದೆ.

೫. ಹಗ್ಗ ಹಾಸಿದೆ
ಗೂಳಿ ಮಲಗಿದೆ.

೬. ಹಿಡಿದರೆ ಹಿಡಿ ತುಂಬ
ಬಿಟ್ಟರೆ ಮನೆ ತುಂಬ.

೭. ಹಸಿರು ಗಿಡದ ಮೇಲೆ
ಮೊಸರು ಚೆಲ್ಲಿದೆ.

೮. ಹಸಿರು ಕೊಡದ ತುಂಬ ಸಿಹಿ ನೀರು.

೯. ನಾನು ತಂದೆನು ನಿನ್ನ
ನೀನೇಕೆ ನೋಡುವೆ ಎನ್ನ
ನಾನೇನು ಮಾಡುವೆ ನಿನ್ನ?

೧೦. ನೋಡುವವರು ಇಬ್ಬರು
ಮಾಡುವವರು ಐವರು
ತಿನ್ನುವವರು ಮೂವತ್ತೆರಡು ಮಂದಿ.

೧೧. ಅಂಗೈಯಷ್ಟು ಗದ್ದೆ
ಮುತ್ತಿನ ರಾಸಿ
ಐವರು ಆಡುವರು
ಇಬ್ಬರು ನೋಡುವರು.

೧೨. ಮಾತು ಕೇಳಿಸಿದರೂ
ಮುಖ ಕಾಣದು
ಕಿವಿಗೆ ಹತ್ತಿರವಾದರೂ
ಬಾಯಿಗೆ ದೂರ । ನಾನಾರು?

೧೩. ರೆಕ್ಕೆಯುಂಟು ಹಕ್ಕಿಯಲ್ಲ
ಸದ್ದುಂಟು ಗುಡುಗಲ್ಲ
ಈಜುವೆನು ಮೀನಲ್ಲ
ಓಡುವೆನು ಮೋಡವಲ್ಲ । ನಾನಾರು?

೧೪. ಟಕ್ಕನೆ ಒತ್ತಲು
ಚಕ್ಕನೆ ಹತ್ತುವನು
ಝಗ ಝಗ
ಬೆಳಕು ಬೀರುವನು । ಅವನಾರು?

೧೫. ಹುಟ್ಟುವಾಗ ಕೆಂಪು
ಕಣ್ಣಿಗೆ ತಂಪು
ಏರಿದಾಗ ನೆತ್ತಿಗೆ ಕೆಂಡ
ಇಳಿದಾಗ ಹೂವಿನ ಕುಂಡ । ಅವನಾರು?

ಉತ್ತರಗಳು

II. ೧. ಅ. ಷ್ಟ ಆ. ಸೂ, ಕಾ, ಧೈ ಇ. ರ ಈ. ಡ ಉ. ಕ್ಕ ಊ. ರ

II. ೨. ಅ. ಕೊಳಲು ಆ. ಹಸುರು ಇ. ಕಾಲುವೆ ಈ. ಮರಳು

III. ಅ. ಕಾಮನ ಬಿಲ್ಲು ಆ. ತಳಿರುತೋರಣ ಇ. ತೋಟಗಾರಿಕೆ
ಈ. ನವಿಲುಗರಿ

IV. ಅ. ಕ ಆ. ಲ ಇ. ಹ ಈ. ಗ ಉ. ಯಿ

V. ಅ. ಕೂಡಲೆ ಆ. ಕಡಲು ಇ. ಒಡವೆ ಈ. ಒಡಲು

VI. ಅ. ರಾತ್ರಿ ಆ. ಕೆಂಪು ಇ. ಇಳಿದ ಈ. ಬಂಧುವಿಲ್ಲ

VII. ಅ. ಜನ ಆ. ದನ ಇ. ಸಂಗೀತ ಈ. ಆರಾಮ ಉ. ತಮ್ಮ
ಊ. ನೆಲ

IX. ೧. ನೇರಳೆ ಹಣ್ಣು ೨. ಮೂಲಂಗಿ ೩. ಈರುಳ್ಳಿ ೪. ಬೈತಲೆ
೫. ಕುಂಬಳಕಾಯಿ ೬. ಹಣತೆಯ ಬೆಳಕು ೭. ಮಲ್ಲಿಗೆ
೮. ಎಳನೀರು, ೯. ಕನ್ನಡಿ ೧೦. ಕಣ್ಣು, ಬೆರಳುಗಳು, ಹಲ್ಲು
೧೧. ತಟ್ಟೆ, ಅನ್ನ, ಬೆರಳುಗಳು, ತುಟಿಗಳು ೧೨. ಟೆಲಿಫೋನ್
೧೩. ವಿಮಾನ ೧೪. ವಿದ್ಯುದ್ದೀಪ ೧೫. ಸೂರ್ಯ.

ಪದಗಳ ಅಕಾರಾದಿ

ಅ

ಅಕ್ಕರೆ
ಅಕ್ಕಪಕ್ಕ
ಅಚ್ಚಳಿಯದೆ
ಅಡವಿ
ಅಣೆಕಟ್ಟು
ಅನೇಕ
ಅನುಕೂಲ
ಅನುಮಾನ
ಅಪ್ಪಳಿಸು
ಅಪಾರ
ಅಪಾಯ
ಅಪ್ಪು
ಅಮರ
ಅರಳು
ಅರಿವು
ಅಲ್ಲಾಡು
ಅವಶೇಷ
ಅವಸರ
ಅಳಲು
ಅಂಗ್ಯೆ
ಅಂಚೆಕಚೇರಿ
ಅಂಜು

ಆ

ಆಕಳು
ಆಕ್ರಮಿಸು
ಆಗಸ
ಆತುರ
ಆಧಾರ
ಆಮೆ
ಆರೋಗ್ಯ ಕೇಂದ್ರ
ಆವರಣ
ಆಸೆ
ಆಹಾರ
ಆಳು

ಇ

ಇರುವೆ
ಇಂಪಾಗಿ

ಈ

ಈಜು

ಉ

ಉಕ್ಕು
ಉಗಿ
ಉಗುರು
ಉಗುಳು
ಉತ್ಪಾದನೆ
ಉದುರು
ಉದ್ಯೋಗ
ಉಪಕಾರ
ಉಪಗ್ರಹ
ಉಪಯೋಗಿಸು
ಉಪ್ಪು
ಉಬ್ಬಿಸು
ಉಳಿ

ಊ

ಊಹಿಸು

ಎ

ಎಳನೀರು
ಎಳೆ
ಎಚ್ಚರ
ಎಮ್ಮೆ

ಏ

ಏರು
ಏಳು

ಐ

ಐಕ್ಯ

ಒ

ಒಗ್ಗಟ್ಟು

ಒಡಲು

ಒಡೆಯ

ಒಪ್ಪಿಕೊಳ್ಳು

ಒಪ್ಪು

ಒಯ್ಯು

ಒಳಗೆ

ಓ

ಓಡಾಡು

ಕ

ಕಚೇರಿ

ಕಡಿದು

ಕಣ್ಣೆತ್ತು

ಕತ್ತರಿಸು

ಕತ್ತಿವರಸೆ

ಕಪ್ಪೆಚಿಪ್ಪು

ಕಪ್ಪೆ

ಕಬ್ಬಿಣ

ಕರೆ

ಕವಿ

ಕಸುಬು

ಕಳುಹಿಸು

ಕರಟ

ಕಾರ್ಖಾನೆ

ಕಾಗದ

ಕಾಟ

ಕಾಮನಬಿಲ್ಲು

ಕಾಲು

ಕಾವು

ಕಾಳುಕಡಿ

ಕಿವಿ

ಕುಣಿಕೆ

ಕುಣಿತ

ಕುದಿ

ಕುದುರೆ

ಕುಪ್ಪಳಿಸು

ಕುರಿ

ಕುರಿತು

ಕೂಡಲೆ

ಕೆಚ್ಚೆದೆ

ಕೆರೆ

ಕೆಸರು

ಕೊಬರಿ

ಕೊರಳು

ಕೋಳಿ

ಕಂಬ

ಕುಂಟು

ಕೊಂಕಿಸು

ಕೇಂದ್ರ

ಕೊಂಬು

ಖ

ಖಚಿತ

ಗ

ಗತಿ

ಗದರು

ಗದ್ದಲ

ಗಡಿಯಾರ

ಗಮನ

ಗಾತ್ರ

ಗುಟ್ಟು

ಗುಹೆ

ಗೆರೆ

ಗೋಣುಹಾಕು

ಗಂಧ

ಗಂಧದ ಎಣ್ಣೆ

ಗುಂಪು

ಗೊಂಚಲು

ಘ

ಘಟ್ಟ

ಚ

ಚಿನ್ನ

ಚಿಂತೆ

ಚೆಲ್ಲು

ಜ

ಜಗ

ಜರುಗು

ಜಲ

ಜಲಪಾತ

ಜಾಣತನ

ಜೀವನ

ಜೇಬು

ಜೋತುಬೀಳು

ಜಂಭ

ತ

ತಟ್ಟೆ

ತರುವಾಯ

ತಲೆ

ತಲೆದೂಗು

ತವರು

ತಳಿರುತೋರಣ

ತಾಸು

ತುಸು

ತೀರಿಕೊಳ್ಳು

ತುರಾಯಿ

ತೆಗೆ

ತೆರೆ

ತೋಡಿಕೊಳ್ಳು

ತಂಗು

ತಾಂಬೂಲ

ದ

ದಡ

ದಣಿ

ದನಿ

ದಾಟು

ದಾಳಿ

ದಿನಬಳಕೆ

ದೀಪ

ದುಡಿ

ದೇವಾಲಯ

ದೋಣಿ

ದಂಡು

ದಂಡೆ

ದುಃಖ

ಧ

ಧುಮುಕು

ನ

ನಡುರಸ್ತೆ

ನರಿ

ನಾಡು

ನಾಣ್ಯ

ನಾದ

ನಾರಿಕೇಳ

ನ್ಯಾರಿ

ನಿಧಾನ

ನುಗ್ಗು

ನೆನೆ

ನೆಲ

ನೆಕ್ಕು

ನೆರಳು

ನೇರ

ನೋಟ

ನಂಬು

ನಿಂತುಕೊಳ್ಳು

ಪ

ಪದವಿ

ಪರಿಚಯ

ಪಕ್ಷ
ಪ್ರತಿ
ಪ್ರಧಾನಿ
ಪ್ರಶಸ್ತಿ
ಪ್ರಸಿದ್ಧ
ಪ್ರಾಥಮಿಕ
ಪ್ರಾಣ
ಪ್ರಾಮಾಣಿಕ
ಪ್ರಾರಂಭಿಸು
ಪ್ರೀತಿ
ಪುಟ್ಟ
ಪೆಟ್ಟು
ಪೇಚು
ಪಂಚಾಯಿತಿ
ಪಂಥ

ಫ
ಫಲವತ್ತು
ಫಲಿಸು

ಬ
ಬಗರಿ
ಬಟ್ಟೆಬರೆ
ಬಡಿ
ಬಡಿಗೆ
ಬಯಸು
ಬಲೆ
ಬಹುಮಾನ
ಬಳಿ
ಬಳುಕು
ಬಾಚಿಕೊಳ್ಳು
ಬಾನು
ಬಾಲ್ಯ
ಬಾವಿ
ಬಾಳು
ಬಿಡುಗಡೆ
ಬಿಲ
ಬಿಸಿಲು
ಬೀಸು
ಬುತ್ತಿ
ಬುದ್ಧಿ
ಬೆಲೆ
ಬೆರಳು
ಬೆಲ್ಲ
ಬೆಳಕು
ಬೆಳ್ಳಿ
ಬೇಟೆ
ಬೇಸರ
ಬಂಡು
ಬಂಧು

ಭ
ಭವ್ಯ
ಭಾವಚಿತ್ರ
ಭಾಷೆ

ಮ
ಮತ್ತೊಮ್ಮೆ
ಮಧ್ಯ
ಮನ
ಮನೋರಂಜನೆ
ಮರಣ
ಮರುದಿನ
ಮಳಲು
ಮಾನ
ಮೀನು
ಮೀನುಗಾರಿಕೆ
ಮೀಸೆ
ಮುಗಿಲು
ಮುಗಿಸು

ಮುಟ್ಟು
ಮುತ್ತು
ಮುದುಕ
ಮುಳುಗು
ಮುಳ್ಳು
ಮೂಗು
ಮೂಲೆ
ಮೆಚ್ಚಿಕೊಳ್ಳು
ಮೇಯಿಸು
ಮೈಮುರಿ
ಮೊಟ್ಟೆ
ಮೊಸರು
ಮೋಜು
ಮೋಡ
ಮಂತ್ರ

ಯ

ಯುದ್ಧ

ರ

ರಮಣಿ
ರಸ್ತೆ
ರಾಜಧಾನಿ
ರಾತ್ರಿ ಶಾಲೆ
ರುಚಿ
ರೂಪ
ರೆಕ್ಕೆಪುಕ್ಕ
ರೆಂಬೆ

ವ

ವಜ್ರ
ವಾಚನಾಲಯ
ವಾಹನ
ವಿದ್ಯಾರ್ಥಿ
ವಿದ್ಯುತ್
ವಿವಿಧ
ವೇಷ
ವೇಳೆ

ಶ

ಶಿಲ್ಪಕಲೆ
ಶಿಸ್ತು
ಶುದ್ಧ
ಶೂರ

ಸ

ಸ್ವಚ್ಛ
ಸದ್ದು
ಸ್ಪರ್ಧೆ
ಸಮಾಧಾನ
ಸಮೀಪಿಸು
ಸಹಬಾಳ್ವೆ
ಸಪ್ಪಗಾಗು
ಸಮಾರಂಭ
ಸಮುದಾಯ ಕೇಂದ್ರ
ಸಮುದ್ರ
ಸರತಿಸಾಲು
ಸಲಹು
ಸಹವಾಸ
ಸಹಾಯ
ಸಾಗರ
ಸಾಗು
ಸ್ನಾನ
ಸಾರು
ಸಾಲಾಗಿ
ಸಾಹಿತ್ಯ
ಸಿಗು
ಸಿಟ್ಟು
ಸಿದ್ಧತೆ
ಸಿಹಿ
ಸೀಟಿ

ಸುತ್ತು
ಸುತ್ತಮುತ್ತ
ಸುಳಿವು
ಸೇರು
ಸೇವನೆ
ಸ್ನೇಹ
ಸೊಕ್ಕು
ಸಂಗಮಾಡು
ಸಂತೆ
ಸಂತೆಮಾಳ
ಸಂಭ್ರಮ
ಸಿಂಗರಿಸು

ಹ

ಹಕ್ಕು
ಹಚ್ಚು
ಹಣತೆ
ಹನಿಸು
ಹರಟೆ
ಹಲವಾರು
ಹಲ್ಲುಜ್ಜು
ಹಾಕು
ಹಾಲು
ಹಿಡಿಸು
ಹಿತ
ಹಿರಿಯ
ಹಿರೇಮಣಿ
ಹೀಯಾಳಿಸು
ಹೂಡು
ಹೆಕ್ಕು
ಹೆಜ್ಜೆ
ಹೆದರಿಕೆ
ಹೆಮ್ಮೆ
ಹೊಲ
ಹೌಹಾರು
ಹಂಚಿಕೊಳ್ಳು
ಹಿಂಡು
ಹಿಂದಿರುಗು
ಹುಂಜ
ಹೇಂಟೆ

ಒತ್ತಕ್ಷರಗಳು

ಅಕ್ಷರ	ಒತ್ತು	ಪದ	ಅಕ್ಷರ	ಒತ್ತು	ಪದ
ಕ	್ಕ	ಪಕ್ಕ	ನ	್ನ	ಚಿನ್ನ
ಗ	್ಗ	ಹಗ್ಗ	ಪ	್ಪ	ಅಪ್ಪ
ಘ	್ಘ	ಉದ್ಘಾಟನೆ	ಫ	್ಫ	ಸತ್ಫಲ
ಚ	್ಚ	ಚುಚ್ಚು	ಬ	್ಬ	ಹಬ್ಬ
ಛ	್ಛ	ಸ್ವಚ್ಛ	ಭ	್ಭ	ಉದ್ಭವ
ಜ	್ಜ	ಅಜ್ಜ	ಮ	್ಮ	ಅಮ್ಮ
ಞ	್ಞ	ಜ್ಞಾನ	ಯ	್ಯ	ನಿತ್ಯ
ಟ	್ಟ	ಕಟ್ಟಡ	ರ	್ರ ರ್	ಚಂದ್ರ ಸೂರ್ಯ
ಠ	್ಠ	ಕನಿಷ್ಠ	ಲ	್ಲ	ಕಲ್ಲು
ಡ	್ಡ	ಅಡ್ಡ	ವ	್ವ	ಅವ್ವ
ಣ	್ಣ	ಅಣ್ಣ	ಶ	್ಶ	ನಿಶ್ಶಬ್ದ
ತ	್ತ	ಕತ್ತಲು	ಷ	್ಷ	ಅಕ್ಷರ
ಥ	್ಥ	ಸ್ಥಳ	ಸ	್ಸ	ಬಸ್ಸು
ದ	್ದ	ಉದ್ದ	ಹ	್ಹ	ಅಹ್ಹಹ್ಹಾ
ಧ	್ಧ	ಯುದ್ಧ	ಳ	್ಳ	ಹಳ್ಳ

ಮೂಲಭೂತ ಕರ್ತವ್ಯಗಳು

ಮೂಲಭೂತ ಕರ್ತವ್ಯಗಳು :—ಪ್ರತಿಯೊಬ್ಬ ನಾಗರೀಕನಿಗೂ—

(ಕ) ಸಂವಿಧಾನವನ್ನು ಅನುವರ್ತಿಸುವುದು ಹಾಗೂ ಅದರ ಆದರ್ಶಗಳನ್ನು ಮತ್ತು ಸಂಸ್ಥೆಗಳನ್ನು, ರಾಷ್ಟ್ರಧ್ವಜ ಹಾಗೂ ರಾಷ್ಟ್ರಗೀತೆಯನ್ನೂ ಗೌರವಿಸುವುದು ;

(ಖ) ನಮ್ಮ ರಾಷ್ಟ್ರೀಯ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸ್ಫೂರ್ತಿದಾಯಕವಾದ ಉದಾತ್ತ ಆದರ್ಶಗಳನ್ನು ಘೋಷಿಸುವುದು ಮತ್ತು ಅನುಸರಿಸುವುದು ;

(ಗ) ಭಾರತದ ಸಾರ್ವಭೌಮತ್ವವನ್ನು, ಐಕ್ಯತೆಯನ್ನು ಮತ್ತು ಅಖಂಡತೆಯನ್ನು ಎತ್ತಿ ಹಿಡಿಯುವುದು ಹಾಗೂ ಸಂರಕ್ಷಿಸುವುದು ;

(ಘ) ದೇಶವನ್ನು ರಕ್ಷಿಸಲು ಮತ್ತು ರಾಷ್ಟ್ರಕ್ಕೆ ಸೇವೆ ಸಲ್ಲಿಸಲು ಕರೆ ಬಂದಾಗ, ಹಾಗೆ ಮಾಡುವುದು ;

(ಙ) ಧಾರ್ಮಿಕ, ಭಾಷಾ ಮತ್ತು ಪ್ರಾದೇಶಿಕ ಅಥವಾ ಜಾತಿ ಪಂಗಡಗಳ ಭಿನ್ನತೆಗಳಿಂದ ಅತೀತವಾಗಿ, ಭಾರತದ ಎಲ್ಲಾ ಜನತೆಯಲ್ಲಿ ಸಾಮರಸ್ಯವನ್ನು ಮತ್ತು ಸಮಾನ ಭ್ರಾತೃತ್ವದ ಭಾವನೆಯನ್ನು ಬೆಳೆಸುವುದು, ಸ್ತ್ರೀಯರ ಗೌರವಕ್ಕೆ ಕುಂದುಂಟು ಮಾಡುವ ಆಚರಣೆಗಳನ್ನು ಬಿಟ್ಟು ಬಿಡುವುದು ;

(ಚ) ನಮ್ಮ ಸಂಮಿಶ್ರ ಸಂಸ್ಕೃತಿಯ ಭವ್ಯ ಪರಂಪರೆಯನ್ನು ಗೌರವಿಸುವುದು ಹಾಗೂ ಕಾಪಾಡುವುದು ;

(ಛ) ಅರಣ್ಯಗಳು, ಸರೋವರಗಳು ನದಿಗಳು ಮತ್ತು ವನ್ಯಜೀವಿಗಳೂ ಸೇರಿದಂತೆ ನೈಸರ್ಗಿಕ ಪರಿಸರವನ್ನು ಸಂರಕ್ಷಿಸುವುದು ಹಾಗೂ ಮೇಲ್ಪಾಟ್ಟು ಮಾಡುವುದು. ಪ್ರಾಣಿಗಳಿಗೆ ಅನುಕಂಪ ತೋರಿಸುವುದು ;

(ಜ) ವೈಜ್ಞಾನಿಕ ಮನೋಭಾವನೆ, ಮಾನವೀಯತೆ, ಜಿಜ್ಞಾಸೆ ಮತ್ತು ಸುಧಾರಣಾ ಪ್ರವೃತ್ತಿಯನ್ನು ಅಭಿವೃದ್ಧಿಗೊಳಿಸುವುದು ;

(ಝ) ಸಾರ್ವಜನಿಕ ಸ್ವತ್ತನ್ನು ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು ;

(ಞ) ರಾಷ್ಟ್ರವು ನಿರಂತರವಾಗಿ ಸಾಧನೆ ಮತ್ತು ಸಿದ್ಧಿಯ ಉನ್ನತ ಮಟ್ಟಗಳಿಗೆ ಏರುವುದಕ್ಕಾಗಿ ವೈಯುಕ್ತಿಕ ಹಾಗೂ ಸಾಮಾಜಿಕ ಚಟುವಟಿಕೆಯ ಎಲ್ಲ ಕಾರ್ಯಕ್ಷೇತ್ರಗಳಲ್ಲಿ ಶ್ರೇಷ್ಠತೆಗಾಗಿ ಶ್ರಮಿಸುವುದು :—

—(ಕರ್ತವ್ಯವಾಗಿರತಕ್ಕದು).

ಸರ್ಕಾರಿ ಪಠ್ಯ ಪುಸ್ತಕ ಮುದ್ರಣಾಲಯ
ಮೈಸೂರು

Price: Rs. 4.25

Printed at Raja Power Press, Bangalore-560 003.
- 1,00,000 Copies